ಅಜಿತಪುರಾಣಸಾರ

ಎಸ್. ಪಿ. ಪಾಟೀಲ

ಲಾಲಿ ಪ್ರಕಾಶನ, ಧಾರವಾಡ

ಅಜಿತಪುರಾಣ ಸಾರ

ಎಸ್. ಪಿ. ಪಾಟೀಲ, ಎಂ. ಎ.
ಅಧ್ಯಾಪಕರು
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವೈಶಾಲಿ ಪ್ರಕಾಶನ, ಧಾರವಾಡ

೧೯೬೨

ಅಜಿತಪುರಾಣ ಸಾರ (ರನ್ನಕವಿಯ ಅಜಿತತೀರ್ಥಕರ ಪುರಾಣದ ಸಂಗ್ರಹಾನುವಾದ) : **ಎಸ್. ಪಿ. ಪಾಟೀಲ**

ಪ್ರಕಾಶಕರು :
ಶ್ರೀಮತಿ. ವಿಜಯಾ ಪಾಟೀಲ
ವೈಶಾಲಿ ಪ್ರಕಾಶನ
೩೮/೨ ಶಿವಾನಂದನಗರ, ಧಾರವಾಡ-೧

ಪ್ರಥಮ ಮುದ್ರಣ : ೧೯೮೨

ಬೆಲೆ : **ರೂ. ೧೦/-**

ಮುದ್ರಕರು :
ಸದಾನಂದ ಪವಾರ
ಸದಾನಂದ ಪ್ರಿಂಟರ್ಸ್
ಹಳೆಯ ದಲಾಲ ಮಾರುಕಟ್ಟೆ, ಧಾರವಾಡ-೧

ಅ ರ್ಪ ಣೆ

ಜೈನಧರ್ಮ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನವನ್ನೇ
ವ್ರತವನ್ನಾಗಿ ಸ್ವೀಕರಿಸಿ, ಶೀಲ ಚಾರಿತ್ರ್ಯಗಳಿಗೆ
ಹೆಸರಾಗಿ, ಅಕಾಲಿಕ ಕಣ್ಮರೆಯಾದ
ಪ್ರೊ. **ಭುಜೇಂದ್ರ ಮಹೀಶವಾಡಿ**
ಅವರಿಗೆ—

ಅರಿಕೆ

೧೯೭೪–೭೫ ರಲ್ಲಿ ಧರ್ಮಾಮೃತದ ಸಾರವನ್ನು ಮೂಲದಲ್ಲಿಯೇ ಸೆರೆ ಹಿಡಿದುಕೊಡಬೇಕೆಂದು ಸಿದ್ಧಪಡಿಸಿದ ಹಸ್ತಪ್ರತಿ ಬೆಳಕಿಗೆ ಬಂದುದು ೧೯೮೦ ರಲ್ಲಿ. ಅದರಂತೆ ೧೯೭೭ರಲ್ಲಿ ಸಿದ್ಧಪಡಿಸಿದ ಕವಿ ಚಕ್ರವರ್ತಿ ರನ್ನನ ಅಜಿತ ಪುರಾಣದ ಸಾರ ಇದೀಗ ಬೆಳಕಿಗೆ ಬರುತ್ತಿರುವದು ಸಂತೋಷ ವಿದ್ಯಾರ್ಥಿಗಳಿಗೂ, ಸಾಮಾನ್ಯರಿಗೂ ಇದು ಉಪಯುಕ್ತವಾದರೆ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ನನ್ನ ಬರವಣಿಗೆಯ ಬಗೆಗೆ ಆಸಕ್ತಿ ತೋರುತ್ತ ಬಂದಿರುವ ಡಾ॥ ಹಾ. ಮಾ. ನಾಯಕ, ಡಾ॥ ಬಿ. ಎಸ್. ಕುಲಕರ್ಣಿ; ಡಾ' ಎಸ್. ಎಂ. ವೃಷಭೇಂದ್ರಸ್ವಾಮಿ, ಡಾ॥ ಎಂ. ಎಂ. ಕಲಬುರ್ಗಿ, ಶ್ರೀ ಚೆನ್ನವೀರ ಕಣವಿ; ಹಂಪನಾ; ಕಮಲಾ ಹಂಪನಾ ಅವರಿಗೆ ಕೃತಜ್ಞತೆಗಳು. ಎಂದಿನಂತೆ ವಿಶ್ವಾಸದಿಂದ ಅಚ್ಚಿನ ಕಾರ್ಯವನ್ನು ನಿರ್ವಹಿಸಿದ ಶ್ರೀ ಸದಾನಂದ ಪವಾರ ಹಾಗೂ ಅವರ ಸಿಬ್ಬಂದಿಯುವರಿಗೆ ಧನ್ಯವಾದಗಳು.

ಎಸ್. ಪಿ. ಪಾಟೀಲ

ಪ ರಿ ವಿ ಡಿ

ಪೀಠಿಕೆ

೧ ಹಿನ್ನೆಲೆ:

ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನವು ಸುವರ್ಣಯುಗ. ಜೈನಸಾಹಿತ್ಯದ ಸುಗ್ಗಿಯಕಾಲ. ಜನರಾಡುವ ಭಾಷೆಯಲ್ಲಿ ಕಾವ್ಯರಚನೆ ಮಾಡಿ, ತನ್ಮೂಲಕ ಧರ್ಮ-ತತ್ತ್ವಗಳನ್ನು ಉಪದೇಶಿಸಬೇಕೆಂಬ ಧೋರಣೆಯನ್ನು ಸ್ವೀಕರಿಸಿದ ಕಾಲ. ಆಗಲೇ ಅಮೋಘವರ್ಷ ನೃಪತುಂಗ ಹಾಗೂ ಅವನ ಆಸ್ಥಾನದ ವಿದ್ವಾಂಸರು ಪಾಂಡಿತ್ಯಪೂರ್ಣ ಯುಗವನ್ನು ಆರಂಭಿಸಿದರು.

ಪಂಪ, ಪೊನ್ನ, ರನ್ನರು ರತ್ನತ್ರಯರೆಂದು ಪ್ರಸಿದ್ಧರಾಗಿ ಪ್ರೌಢಕಾವ್ಯಗಳನ್ನು ರಚಿಸಿದರು. ಮುಂದಿನ ಕವಿಗಳಿಗೆ ಮಾರ್ಗದರ್ಶಿಗಳಾದರು. ಈ ಮೂವರೂ ಕವಿಗಳು ಜೈನಧರ್ಮದವರು. ೧೦ನೆಯ ಶತಮಾನದಲ್ಲಿ ಜೈನ ಧರ್ಮವು ಕರ್ನಾಟಕದಲ್ಲಿ ತುಂಬ ಪ್ರಭಾವಶಾಲಿಯಾಗಿದ್ದಿತು. ಆ ಕಾಲದ ಕರ್ನಾಟಕದ ಇತಿಹಾಸವೆಂದರೆ ಜೈನಧರ್ಮದ ಇತಿಹಾಸವೆಂದೇ ಹೇಳಲ್ಪಡುವದು. ರಾಜಾಶ್ರಯದಿಂದಲೂ ಅದರ ಪ್ರಚಾರ, ಪ್ರಸಾರ ವ್ಯಾಪಕವಾಗಿ ಜನಮನದಲ್ಲಿ ಬೇರೂರಿ ನಿಂತಿತು. ಅದರ ಪರಿಣಾಮವಾಗಿ ಕನ್ನಡ ಕವಿಪುಂಗವರು ಈ ಮತತತ್ತ್ವಗಳನ್ನು ಚಿರಂತನವಾಗಿ ಕಾಪಾಡಲು ಉಪಯುಕ್ತವಾದ ಕಾವ್ಯಗಳ ಮೂಲಕ ಪ್ರಯತ್ನಿಸಿರುವುದುಂಟು.

ನಮಗೆ ದೊರೆತ ಕಾವ್ಯಗಳಲ್ಲಿ ಪಂಪ-ಪೊನ್ನ-ರನ್ನ ಈ ಕವಿಗಳ ಕೃತಿಗಳೇ ಮೊದಲಿನವು. ಇವರಲ್ಲಿ ಪ್ರತಿಯೊಬ್ಬರು ಒಂದು ಆಗಮಿಕ ಕಾವ್ಯ (ಧಾರ್ಮಿಕ) ಹಾಗೂ ಇನ್ನೊಂದು ಲೌಕಿಕ (ರಾಮಾಯಣ, ಮಹಾಭಾರತಗಳ ಕಥೆ) ಕೃತಿಗಳನ್ನು ರಚಿಸಿದರು. ಆಗಮಿಕ ಕಾವ್ಯದಲ್ಲಿ ತೀರ್ಥಂಕರರ

ಚರಿತ್ರೆಯನ್ನು, ಅವನ ಪೂರ್ವದ ಭವಗಳನ್ನು ವರ್ಣಿಸಲಾಗುವುದು. ಇವರಲ್ಲಿ ಧರ್ಮ, ತತ್ತ್ವಗಳ ವಿವರಣೆಯೂ ನಿರೂಪಿತವಾಗಿರುವುದು. ಇಂಥ ಆಗಮಿಕ ಕಾವ್ಯಗಳಲ್ಲಿ ಶಾಂತರಸಕ್ಕೆ ಎಲ್ಲಿಲ್ಲದ ಪ್ರಾಧಾನ್ಯತೆ ಲಭ್ಯವಾಗಿದೆ.

ಈ ಕಾಲದ ಲೌಕಿಕ ಕಾವ್ಯಗಳಲ್ಲಿ ರಾಮಾಯಣ, ಮಹಾಭಾರತಗಳ ಕಥೆಯನ್ನು ಆಯ್ದುಕೊಂಡು, ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ, ಅಲ್ಲಿಯ ಒಂದು ಪ್ರಮುಖ ಪಾತ್ರದೊಂದಿಗೆ, ತನ್ನ ಆಶ್ರಯದಾತನಾದ ಅರಸನನ್ನು ಹೋಲಿಸಿ ಕಥೆ ಹೇಳಿರುವುದುಂಟು. ಇವು ಸಾಮಾನ್ಯವಾಗಿ ವೀರರಸಪ್ರಧಾನ ಕಾವ್ಯಗಳೆಂದೇ ಹೇಳಬಹುದು.

೨ ಕವಿ-ಕಾಲ :

ಸಾಮಾನ್ಯವಾಗಿ ನಮ್ಮ ನಾಡಿನ ಕವಿಗಳು ತಮ್ಮ ಬಗೆಗೆ ಏನನ್ನೂ ಹೇಳಿರುವುದಿಲ್ಲ. ಆದರೆ ರತ್ನತ್ರಯರಲ್ಲಿ ಕವಿರನ್ನ ಮೂರನೆಯವನೆಂಬುದನ್ನು ತಾನೇ ಅಭಿಮಾನದಿಂದ ಹೇಳಿಕೊಂಡಿದ್ದಾನೆ.

ಕವಿಜನದೊಳ್ ರತ್ನತ್ರಯ
ಪವಿತ್ರಮೆನೆ ನೆಗಳ್ದ ಪಂಪನುಂ ಪೊನ್ನಿಗನುಂ
ಕವಿರತ್ನನುಮೀ ಮೂವರ್
ಕವಿಗಳ್ ಜಿನಸಮಯದೀಪಕರ್ ಪೆಱರೊಳರೆ ?

ಅ. ಪು. ೧-೩೭

ರನ್ನನು ತನ್ನ ದೇಶ, ಕಾಲ, ತಾನು ರಚಿಸಿದ ಕೃತಿಗಳು, ಆ ಕೃತಿರಚನೆಗೆ ಪ್ರೋತ್ಸಾಹ ಆಶ್ರಯವಿತ್ತ ಉದಾತ್ತ ವ್ಯಕ್ತಿಗಳು ಮೊದಲಾದ ವಿವರವನ್ನು ಅಜಿತನಾಥಪುರಾಣದಲ್ಲಿ ವಿಸ್ತಾರವಾಗಿ ತಿಳಿಸಿದ್ದಾನೆ. ಬೆಳುಗರೆ ನಾಡಿನ, ಬೆಳುಗಲಿ ದೇಶದ, ಜನೂರಿನಲ್ಲಿ ಅಗ್ಗಳವೆನಿಸಿದ ಜಂಬುಖಂಡಿ ಇಪ್ಪತ್ತರಲ್ಲಿ ಶ್ರೇಷ್ಠವಾದ ಮುಧುವೊಳಲು (ಮುಧೋಳ) ರನ್ನನ ಜನ್ಮಸ್ಥಳ. ಅದರ ಸಮೀಪದ ಘಟಪ್ರಭೆಯನ್ನು 'ಗಟ್ಟಿಗೆ'ಯೆಂದೂ, ಕೃಷ್ಣಾನದಿಯನ್ನು 'ಪೆರ್ದೊರೆ' ಅಥವಾ 'ಹಿರಿಹೊಳೆ' ಎಂದೂ ಕರೆದಿದ್ದಾನೆ.

'ಪತಿವ್ರತಾ ಗುಣವಿಭೂಷಣೆ'ಯಾದ ಅಬ್ಬಲಬ್ಬೆ (ಅಬ್ಬಕಬ್ಬೆ) ಹಾಗೂ 'ಜಿನೇಂದ್ರಪಾದ ಕಮಲ ಭ್ರಮರ'ನಾದ ಜಿನವಲ್ಲಭರು ರನ್ನನ ತಾಯಿ-ತಂದೆಗಳು. ವೃಷಭನಾಮ, ರೇಚಣ, ಮಾರಮಯ್ಯರು ಅಣ್ಣಂದಿರು. ರನ್ನ ಜನಿಸಿದ್ದು,

ದೊರೆಕೊಂಡು ಸೌಮ್ಯಸಂವ
ತ್ಸರದೊಳ್ ಕರ್ಕಟಕರಾಶಿಯೊಳ್ ಸೌಮ್ಯನುಱಿಂ
ಗುರುವತ್ಸಳನುದಯಿಸಿದಂ
ಸರಸ್ವತೀ ರತ್ನಮುಂಡನಂ ಕವಿರತ್ನಂ

ಅ. ಪು. ೧-೪೭

ಈ ಸೌಮ್ಯ ಸಂವತ್ಸರವು ಕ್ರಿ.ಶ. ೯೪೯ ಕ್ಕೆ ಸರಿಹೊಂದುತ್ತದೆ. ರನ್ನ ಜೈನ ಮತಾವಲಂಬಿ, ವೃತ್ತಿ ವ್ಯಾಪಾರ.

ಆರಂಭದ ವಿದ್ಯಾಭ್ಯಾಸವನ್ನು ರನ್ನನು ಮುಧೋಳದಲ್ಲಿಯೇ ಮಾಡಿದ್ದರೂ, ಮುಂದೆ ಅವನು ಗಂಗರಾಜ್ಯಕ್ಕೆ ಪ್ರಯಾಣಮಾಡಿದನು. ಅಜಿತಸೇನಾಚಾರ್ಯರಂಥ ಮಹಾಮೇಧಾವಿಗಳು ಅವನಿಗೆ ಗುರುಗಳಾಗಿ ಲಭಿಸಿದರು. ಅವರ ಮಾರ್ಗದರ್ಶನದಲ್ಲಿ ಅವನು ಸಂಸ್ಕೃತ, ಪ್ರಾಕೃತ, ಕನ್ನಡ, ಭಾಷೆ, ವ್ಯಾಕರಣಗಳನ್ನು ಓದಿದನು. ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಮೂಲಕ ಜೈನಧರ್ಮ, ಜೈನಸಿದ್ಧಾಂತಗಳಲ್ಲಿ ಅವನಿಗೆ ನಿಷ್ಠೆ ಬಲಗೊಂಡಿರಬೇಕು.

ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ ರನ್ನನು ಮರಳಿ ತನ್ನ ನಾಡಿಗೆ ಹಿಂದಿರುಗಿದನು. ಅಷ್ಟರಲ್ಲಿ ಅತ್ತ ಗಂಗರಾಜ ಮಾರಸಿಂಹನು ಸಲ್ಲೇಖನವ್ರತವನ್ನು ಸ್ವೀಕರಿಸಿ ಮಡಿದನು. ಗಂಗರಾಜರೂ-ರಾಷ್ಟ್ರಕೂಟರೂ ತಮ್ಮ ಮೊದಲಿನ ವೈಭವವನ್ನು ಕಳೆದುಕೊಂಡರು. ಆಗ ಕವಿ ರನ್ನನು ಚಾಲುಕ್ಯ ತೈಲಪನ ಆಸ್ಥಾನದಲ್ಲಿ ವಿದ್ವಾಂಸನಾದನು. ಈ ತೈಲಪನ ಮಗನಾದ ಸತ್ಯಾಶ್ರಯನು ಚೋಳರಾಜನನ್ನು ಗೆದ್ದನು. ಸತ್ಯಾಶ್ರಯನ ಈ ಸಾಹಸವನ್ನೇ ರನ್ನನು ತನ್ನ ಸಾಹಸಭೀಮವಿಜಯದಲ್ಲಿ (ಗದಾಯುದ್ಧ) ವರ್ಣಿಸಿದ್ದಾನೆ.

ಈ ಗದಾಯುದ್ಧವು ಅವನಿಗೆ ಸಾಕಷ್ಟು ಕೀರ್ತಿಯನ್ನೂ, ಸನ್ಮಾನವನ್ನೂ ತಂದುಕೊಟ್ಟಿತು. ಆಹವಮಲ್ಲ ತೈಲಪನು ಅವನಿಗೆ ಸನ್ಮಾನಿಸುತ್ತ 'ಕವಿಚಕ್ರವರ್ತಿ' ಎಂಬ ಬಿರುದು ದಯಪಾಲಿಸಿ ಗೌರವಿಸಿದನು. ತಾನು ಪಡೆದ ಬಿರುದಿನ ಬಗೆಗೂ ರನ್ನನಿಗೆ ತುಂಬ ಅಭಿಮಾನ :

> "ಪಡೆಯಿಡೆಯು ಬಡವರ್
> ಕುಡೆ ಪಡೆದನೊ ಚಕ್ರವರ್ತಿ ತೈಲಪನೊಳ್
> ಪಡೆದಂ ಮಹಿಮೋನ್ನತಿಯುಂ
> ಪಡೆದಂ ಕವಿಚಕ್ರವರ್ತಿಪೆಸರಂ ರನ್ನಂ"

ದಾನಚಿಂತಾಮಣಿ ಅತ್ತಿಮಬ್ಬೆಯ ಆಶ್ರಯದಲ್ಲಿ ರನ್ನನು ಅಜಿತನಾಥ ಪುರಾಣವನ್ನು ರಚಿಸಿದನು. ಗುರುಗಳಾದ ಅಜಿತಸೇನಾಚಾರ್ಯರ ಮಾರ್ಗ ದರ್ಶನದಲ್ಲಿ ಪಡೆದ ಧಾರ್ಮಿಕ ಜ್ಞಾನವನ್ನು ಇಲ್ಲಿ ಸೂರೆಗೊಂಡನು. ಇದ ರಿಂದಾಗಿ ಅವನ ಕೀರ್ತಿ ಎಲ್ಲೆಡೆ ಪಸರಿಸಿತು.

ದೇವಭಕ್ತಿ, ಪತಿಭಕ್ತಿ ಗುಣಗಳನ್ನೇ ಭೂಷಣವಾಗಿ ತಾಳಿದ ಜಕ್ಕಿ ಮತ್ತು ಶಾಂತಿ ಎಂಬವರು ರನ್ನನ ಮಡದಿಯರು. ತನಗೆ ಆಶ್ರಯವಿತ್ತು ಪ್ರೋತ್ಸಾಹಿಸಿದ ಚಾವುಂಡರಾಯ ಹಾಗೂ ಅತ್ತಿಮಬ್ಬೆಯರ ಬಗೆಗೆ ಅವನಿಗೆ ಎಲ್ಲಿಲ್ಲದ ಭಕ್ತಿ, ಗೌರವ, ಆದರೆ ಚಾವುಂಡರಾಯನ ಬಗೆಗಿನ ಗೌರವದಿಂದ ತನ್ನ ಮಗನಿಗೆ 'ರಾಯ'ನೆಂದು ಹೆಸರಿಟ್ಟನು. ಅದರಂತೆ ತನ್ನ ಮಗಳಿಗೆ 'ಅತ್ತಿಮಬ್ಬೆ' ಎಂದು ಹೆಸರಿಟ್ಟು ದಾನಚಿಂತಾಮಣಿ ಅತ್ತಿಮಬ್ಬೆಯ ಬಗೆಗಿನ ತನ್ನ ಗೌರವ ವನ್ನು ವ್ಯಕ್ತಪಡಿಸಿದ್ದಾನೆ.

೩ ಕೃತಿಗಳು :

ರನ್ನನು ತಾನು ರಚಿಸಿದ ಕೃತಿಗಳ ಬಗೆಗೆ ತಾನೇ ಹೀಗೆ ಹೇಳಿಕೊಂಡಿ ದ್ದಾನೆ :

> ಕರವೆಸೆದುವು ರತ್ನತ್ರಯು
> ಪರಿಕಲ್ಪನೆ **ಪರಶುರಾಮಚರಿತಂ, ಚಕ್ರೇ**
> **ಶರ್ವ ಚರಿತಮಜಿತತೀರ್ಥೇ**
> ಶ್ವರ ಚರಿತಂ ರತ್ನನಿಂದೆ ಭುವನತ್ರಯದೊಳ್

ಅ. ಪು. ೧೨-೪೨

೧ **ಪರಶುರಾಮಚರಿತೆ** ೨ **ಚಕ್ರೇಶ್ವರಚರಿತೆ** ೩ **ಅಜಿತ ತೀರ್ಥೇಶ್ವರ ಚರಿತೆ** ಈ ಮೂರು ಕೃತಿಗಳನ್ನು ಅವನು ರಚಿಸಿದುದಾಗಿ ಹೇಳಿಕೊಂಡಿದ್ದಾನೆ. ಇವುಗಳಲ್ಲಿ ಮೊದಲಿನ ಎರಡು ೧ **ಪರಶುರಾಮ ಚರಿತೆ** ಹಾಗೂ ೨ **ಚಕ್ರೇಶ್ವರಚರಿತೆ**ಗಳು ಈವರೆಗೂ ದೊರೆತಿಲ್ಲ. ಅಜಿತನಾಥ ಪುರಾಣವೆಂದು ಪ್ರಸಿದ್ಧವಾದುದೆ ಮೂರನೆಯದಾದ ಅಜಿತ ತೀರ್ಥೇಶ್ವರ ಚರಿತ. ಈ ಮೂರು ಕೃತಿಗಳಲ್ಲದೆ. ಅವನು ಹೇಳಿಕೊಂಡಿರದ ಇನ್ನೊಂದು ಕಾವ್ಯವೆಂದರೆ 'ಸಾಹಸಭೀಮ ವಿಜಯ' ಅಥವಾ 'ಗದಾಯುದ್ಧ.'

ಅಜಿತನಾಥ ಪುರಾಣವನ್ನು ವಿಜಯಸಂವತ್ಸರದ ಕಾರ್ತಿಕಮಾಸದ ಸೋಮವಾರ ಬರೆದು ಮುಗಿಸಿದುದಾಗಿ ಅದರ ಕೊನೆಯ ಪದ್ಯದಲ್ಲಿ ಹೇಳ ಲಾಗಿದೆ. ಇದು ಶಕವರ್ಷ ೯೧೫ ಕ್ಕೆ (ಕ್ರಿ. ಶ. ೯೯೩) ಹೊಂದಿಕೆಯಾಗು ವದು. ಇದರಿಂದಾಗಿ ಅಜಿತಪುರಾಣದ ಕಾಲದ ರಚನೆಯ ಬಗೆಗೆ ಯಾವ ಭಿನ್ನಾಭಿಪ್ರಾಯಗಳಿಗೂ ಅವಕಾಶವಿಲ್ಲ.

ರನ್ನನ '**ಪರಶುರಾಮ ಚರಿತ**'ವು ಚಾವುಂಡರಾಯನನ್ನು ಅಡಕ ಗೊಳಿಸಿಯೂ, '**ಚಕ್ರೇಶ್ವರಚರಿತ**' ಅತ್ತಿಮಬ್ಬೆಯನ್ನು ಅಡಕಗೊಳಿ ಸಿಯೂ ರಚಿಸಿರುವಂತೆ ತೋರುತ್ತದೆ. ತನಗೆ ಆಶ್ರಯವಿತ್ತ ಉದಾತ್ತ ವ್ಯಕ್ತಿಗಳಿಗೆ ಈ ರೀತಿ ಅವನು ಗೌರವ ತೋರಿರಬಹುದು. ಚಾವುಂಡರಾಯ ನಿಗೆ '**ಸಮರಪರಶುರಾಮ**'ನೆಂಬ ಬಿರುದು ಇದ್ದುದರಿಂದ ಚಾವುಂಡರಾಯ ನನ್ನು ಕುರಿತು ರಚಿಸಿದ ಕಾವ್ಯವೆ ಆಗಿರಬೇಕೆಂಬ ಅಭಿಪ್ರಾಯವಿದ್ದರೂ ಅದು ಪರಶುಧರನಾದ ಭಾರ್ಗವನ ಚರಿತವಾಗಿರಬೇಕೆಂಬ ಅಭಿಪ್ರಾಯವೂ ಇದೆ.

ರನ್ನನು ಸತ್ಯಾಶ್ರಯನನ್ನು ಚಕ್ರೇಶ್ವರನೆಂದು ಕರೆದಿರುವದರಿಂದ **'ಚಕ್ರೇಶ್ವರಚರಿತ'**ವು **'ಸಾಹಸಭೀಮವಿಜಯ'** ಅಥವಾ **'ಗದಾಯುದ್ಧವೇ'** ಆಗಿರಬೇಕು. ಅದರೆ ಚಕ್ರೇಶ್ವರಚರಿತ ಯಾವನೋ ಒಬ್ಬ ತೀರ್ಥಂಕರ ಅಥವಾ ಮಹಾರಾಜನ ಚರಿತ್ರವಾಗಿರಬೇಕೆಂಬ ಅಭಿಪ್ರಾಯ ಗಳೂ ಇವೆ.

ಅಜಿತಪುರಾಣ, ಗದಾಯುದ್ಧ, ರನ್ನಕಂದ ನಿಘಂಟು ಇವು ರನ್ನನ ಉಪಲಬ್ಧ ಕೃತಿಗಳು. 'ರನ್ನಕಂದ ನಿಘಂಟು' ಕುರಿತು ಇನ್ನೂ ವಿದ್ವಾಂಸರಲ್ಲಿ ಒಮ್ಮತ ಏರ್ಪಟ್ಟಂತೆ ಕಂಡುಬರುವದಿಲ್ಲ. ರನ್ನನು ಹಲವಾರು ಶಾಸನಗಳನ್ನು ರಚಿಸಿರಬಹುದೆಂದು ಊಹಿಸಲು ಸಾಕಷ್ಟು ಆಧಾರಗಳಿವೆ. ಅದರಂತೆ ಜನ್ನನು 'ರನ್ನಂ ವೈಯಾಕರಣಂ' ಎಂದು ಕರೆದಿರುವದರಿಂದಲೂ "ಉಭಯ ವ್ಯಾಕರಣ ಪಂಡಿತಂ ಕವಿರತ್ನಂ" ಎಂದು ತಾನೇ ಅಜಿತಪುರಾಣದ ಸಮಾಪ್ತಿ ಪದ್ಯಗಳಲ್ಲಿ ಹೇಳಿರುವದರಿಂದ ಅವನು ಒಂದು ವ್ಯಾಕರಣ ಗ್ರಂಥವನ್ನು ರಚಿಸಿರಬಹುದೆಂದು ಊಹಿಸಲು ಅವಕಾಶವಿದೆ.

(i) ಗದಾಯುದ್ಧ :

ರನ್ನನ ಗದಾಯುದ್ಧ ಕನ್ನಡದ ಅನರ್ಘ್ಯರತ್ನ. ಮಹಾಭಾರತದಲ್ಲಿಯ ಗದಾಯುದ್ಧವೇ ಇದರ ವಸ್ತು. ಈ ಚಂಪೂಕಾವ್ಯ ಹತ್ತು ಆಶ್ವಾಸಗಳಲ್ಲಿ ಅಡಕವಾಗಿದೆ. ಪಂಪ ಮಹಾಕವಿಯು ಅರ್ಜುನನನ್ನು ನಾಯಕನನ್ನಾಗಿ, ಆಶ್ರಯದಾತನಾದ ಅರಿಕೇಸರಿಯಲ್ಲಿ ಅಭೇದ್ಯಕಲ್ಪಿಸಿ, ಭಾರತವನ್ನು ರಚಿಸಿದಂತೆ ರನ್ನನು ಭೀಮನನ್ನು ನಾಯಕನನ್ನಾಗಿ ಕಲ್ಪಿಸಿಕೊಂಡು, ಆಶ್ರಯದಾತನಾದ ಸತ್ಯಾಶ್ರಯನಲ್ಲಿ ಅಭೇದ್ಯಕಲ್ಪಿಸಿ, ತನ್ನ ಕಾವ್ಯರಚಿಸಿದ್ದಾನೆ. ಅದರಂತೆ

ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯಲ್ಲಮೀ ಗದಾಯುದ್ಧದೊಳಂ
ಒಳಕೊಂಡಿತ್ತೆನೆ **ಸಿಂಹಾ
ವಲೋಕನ ಕ್ರಮದಿನ**ಜಿಂಪಿದಂ ಕವಿ ರತ್ನಂ

ಎಂದು ತನ್ನ ಕಥಾನಿರೂಪಣ ಕ್ರಮವನ್ನು ಸ್ಪಷ್ಟಪಡಿಸಿದ್ದಾನೆ.

ಗದಾಯುದ್ಧದ ನಾಯಕ ಭೀಮ. ಅದರಿಂದಾಗಿ ಭೀಮನ ರೌದ್ರ ಕೋಪಾಟೋಪ ಮೊದಲಾದ ಗುಣಗಳು ಅವನ ಕಿಡಿನುಡಿಗಳಿಂದ ಸ್ಪಷ್ಟವಾಗುವವು. ಇದರಂತೆ ಪ್ರತಿನಾಯಕನಾದ ದುರ್ಯೋಧನನು ದುಷ್ಟನೆಂಬ ಸಾಮಾನ್ಯ ಅಭಿಪ್ರಾಯವಿದ್ದರೂ ಅವನ ವ್ಯಕ್ತಿತ್ವವನ್ನು ತುಂಬ ಮಾನವೀಯವಾಗಿ ನಿರೀಕ್ಷಿಸಿ ಚಿತ್ರಿಸುವಲ್ಲಿ ರನ್ನನು ವಿಶೇಷತೆಯನ್ನು ಮೆರೆದಿದ್ದಾನೆ. ಶೌರ್ಯ, ಛಲ, ಅಭಿಮಾನಗಳ ಪ್ರತೀಕವಾಗಿದ್ದಾನೆ ದುರ್ಯೋಧನ.

ಅಪಮಾನದಿಂದ ಬೆಂದ ದ್ರೌಪದಿಯಿಂದ ಪ್ರೇರೇಪಿತನಾದ ಭೀಮನು ಪ್ರತಿಜ್ಞಾಬದ್ಧನಾಗುವನು. ಸಂಧಿಯಾಗುವುದಾದರೆ ತಾನು ಅಗ್ನಿಪುತ್ರಿಯಾದುದರಿಂದ ಬೆಂಕಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡುವೆನೆಂದು ದ್ರೌಪದಿ ಹೇಳುವಳು. ಅದು ಭೀಮನ ಹೃದಯವನ್ನು ಮುಟ್ಟಿ ಅವನಿಂದ ಪ್ರತಿಜ್ಞೆಯ ಕಿಡಿಗಳನ್ನು ಸಿಡಿಸುವಲ್ಲಿ ಯಶಸ್ವಿಯಾಗುವದು. ಆಗ

ನೀನಗ್ನಿಪುತ್ರಿಯೈ ಪವ
ಮಾನ ತನೂಭವನೆ ನಾನಣಂ ಕೂಡೆ ಸುಸಂ
ಧಾನಮುಂ ನೃಪರೊಳೆಂತನ
ಲಾನಿಲ ಸಂಯೋಗಮುರಿಪದಿರ್ಕುಮೆ ಪಗೆಯಂ ॥

ಊರುಗಳನುಡಿವೆನೊದೆವೆಂ
ಕೌರವ ಪರಿವೃಢನ ಮಕುಟಮುಂ ವೇಣಿಸಂ
ಹಾರಂ ಮಾಡುವೆನದರಿಂ
ಭಾರಮುದಿನಿತಿಲ್ಲದೆನ್ನಸಂಭವ ಭಾಮಂ ॥

ಎಂದು ಭೀಮನಿಂದ ನುಡಿಸುವಲ್ಲಿ ರನ್ನನ ಚತುರೋಕ್ತಿಗಳ ಸವಿಯನ್ನು ಆಸ್ವಾದಿಸಬಹುದಾಗಿದೆ. ಆಗ ಅಳುತ್ತ ಬಂದ ದ್ರೌಪದಿ ನಗುತ್ತ ಹಿಂದಿರುಗುತ್ತಾಳೆ.

ಎರಡನೆಯ ದೃಶ್ಯವು ಸಂಜಯ ದುರ್ಯೋಧನರ ಸಂಭಾಷಣೆಯಿಂದ ಆರಂಭವಾಗುತ್ತದೆ. 'ಜೋಳದ ಪಾಟಿಯುಂ ಬಗೆದರಿಲ್ಲ ದ್ರೌಣಿಯುಂ ದ್ರೋಣನುಂ' ಎಂದು, ದುರ್ಯೋಧನನು ದ್ರೋಣ–ಅಶ್ವತ್ಥಾಮರನ್ನು

ಹೀಯಾಳಿಸುವನು. ಸಂಜಯನು ಪಾಂಡವರ ಪರಾಕ್ರಮವನ್ನು, ಅವರಿಗಿರುವ ಶ್ರೀಕೃಷ್ಣನ ಬೆಂಬಲವನ್ನು ಸೂಚಿಸಿದರೂ ದುರ್ಯೋಧನ ತನ್ನ ಭುಜದಂಡ ಹಾಗೂ ಗದಾದಂಡಗಳಿಂದ ಹೋರಾಡುವೆನೆಂದು ಹೇಳುತ್ತಾನೆ. ತನ್ನನ್ನು ಹುಡುಕುತ್ತ ಬರುತ್ತಿರುವ ಧೃತರಾಷ್ಟ್ರ–ಗಾಂಧಾರಿಯರಿಗೆ ಮುಖವನ್ನು ಹೇಗೆ ತೋರಿಸಲೆಂದು ಮೂರ್ಛೆಹೋಗುವನು. ಅವನು ಎಚ್ಚರವಾದ ಮೇಲೆ ಸಂಧಿ ಮಾಡಿಕೊಳ್ಳಲು ಆ ವೃದ್ಧ ತಾಯಿ ತಂದೆಗಳು ಬೇಡಿಕೊಳ್ಳುವರು. 'ಸತ್ತಮಗಂದಿರ್ ಸತ್ತರ್, ನೀನೆಮಗುಳ್ದೊಡೆ ಸಾಲ್ದುದು' ಎಂದು ಬೇಡಿಕೊಳ್ಳುವರು. ಆದರೆ ಅಭಿಮಾನಧನನಾದ ಸುಯೋಧನ ಸಂಧಿಗೆ ಒಪ್ಪುವದಿಲ್ಲ. ಭೀಷ್ಮರ ಸಲಹೆ ಪಡೆದು ಮುಂದುವರಿಯಬೇಕೆಂಬ ಅವರ ಮಾತನ್ನು ಮಾತ್ರ ಒಪ್ಪುವನು.

ಯುದ್ಧಭೂಮಿಯಲ್ಲಿ ಹೆಣಗಳ ರಾಶಿಯಿಂದ ದಾಟಿ ಹೋಗುವಾಗ ವೀರಬಾಲಕ ಅಭಿಮನ್ಯುವಿನ ಶವವನ್ನು ಕಂಡಮೇಲಿನ ದುರ್ಯೋಧನನ ಪ್ರಲಾಪ ಅವನ ಉದಾತ್ತತೆಯನ್ನು ತೋರುವದು. ಅಭಿಮನ್ಯುವಿನ ಪರಾಕ್ರಮವನ್ನು ಪ್ರಶಂಸಿಸಿ, ಅವನಂತಹ ವೀರಮರಣ ತನಗೂ ಲಭಿಸುವಂತೆ ಆಶೀರ್ವದಿಸಲು ಬೇಡಿಕೊಳ್ಳುವನು. ತನ್ನ ಮಗ ಲಕ್ಷ್ಮಣ, ಸೋದರ ದುಃಶಾಸನ ಹಾಗೂ ಕರ್ಣರ ಶವಗಳನ್ನು ನೋಡಿದಾಗ ದುರ್ಯೋಧನನ ದುಃಖದ ಕಟ್ಟೆ ಒಡೆದು ಹೊರ ಹೊಮ್ಮುವದು. ಕರ್ಣನನ್ನು ನೆನೆದು

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟೈ
ನೀನುಳ್ಳೊಡುಂಟು ಪೀಳಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ ॥

ಎಂದು ತನ್ನ ಜೀವನದ ಸಾರಸರ್ವಸ್ವವನ್ನೇ ಕಳೆದುಕೊಂಡವನಾಗಿದ್ದಾನೆ ದುರ್ಯೋಧನ.

ರಣಭೂಮಿಯಲ್ಲಿ ರಕ್ತ ಮಾಂಸಗಳನ್ನು ಸವಿಯುತ್ತ ಅಲೆದಾಡುತ್ತಿದ್ದ ಭೂತಗಳು ದುರ್ಯೋಧನನನ್ನು ಸಂಧಿಸಿ, ಅವನ ಬಿಸಿರಕ್ತವನ್ನು ಕುಡಿಯುವ

ಬಯಕೆಯನ್ನು ವ್ಯಕ್ತಿಪಡಿಸುವ ಸನ್ನಿವೇಶ ದುರ್ಯೋಧನನ ಬಗೆಗೆ ಮರುಕ ವನ್ನುಂಟು ಮಾಡುವುದಾಗಿದೆ; ಅವನ ಭವಿಷ್ಯದ ಮುನ್ಸೂಚನೆಯೂ ಆಗಿದೆ.

ಭೀಷ್ಮರು ಸಂಧಿಯ ಸೂಚನೆ ನೀಡಲು– 'ನೆಲಕಿಱಿವೆನೆಂದು ಬಗೆವಿರೆ ಛಲಕಿಱಿವೆಂ' ಎಂದು 'ಛಲಮನೆ ಮೆಱೆವೆಂ' ಎಂದು ಛಲವನ್ನೇ ಸಾಧಿಸ ಬಯಸಿದರೂ ಭೀಷ್ಮರ ಸೂಚನೆಯಂತೆ ವೈಶಂಪಾಯನ ಕೊಳದಲ್ಲಿ ಅಡಗಿ ಕೊಳ್ಳಲು ಸಮ್ಮತಿಸುವನು. ಹಾಗೆ ಅವನು ಕೊಳವನ್ನು ಸೇರಲು 'ಛೀ ಎಂದವನಂ ರಾಜಲಕ್ಷ್ಮೀ ಪೇಸಿ ಬಿಸುಟ್ಟಳ್' ಎಂಬಂತೆ ಪಕ್ಕಿಗಳೂ ಅಲ್ಲಿಂದ ಹಾರಿಹೋದುವಂತೆ. ಪಾಂಡವರು ಅವನ ಶೋಧದಲ್ಲಿದ್ದು ಕೊನೆಗೆ ಕೊಳ ದಲ್ಲಿರುವ ವಾರ್ತೆಯನ್ನು ತಿಳಿದಾಗ ಭೀಮಸೇನನು ಅಲ್ಲಿಗೆ ಹೋಗಿ

> ಸ್ವರಮಂ ಕೇಳಲ್ಕೆನ್ನು
> ಗ್ರಪರೂಪಮಂ ನಿಂದು ನೋಡಲಣ್ಮದೆ ಸಮರಾ
> ಕರಮಂ ಬಿಸುಟ್ಟು ಕಮಲಾ
> ಕರಮಂ ಪೊಕ್ಕಿಲವೊ ಮರುಳೆ ಬಿರ್ದುಕಲ್ ಬಗೆವಾ

ಎಂದು ನಾನಾರೀತಿಯಲ್ಲಿ ಮೂದಲಿಸುವನು. ಭೀಮಸೇನನ ಬಿರುನುಡಿಗಳನ್ನು ಕೇಳಿ 'ನೀರೊಳಗಿರ್ದಂ ದಿಮುರ್ತನುರಗಪತಾಕಂ' ಹೊರಬರುವನು. ಇಬ್ಬ ರಲ್ಲೂ ಗದಾಯುದ್ಧ ನಡೆಯುತ್ತದೆ. ಗದೆಯಪೆಟ್ಟಿನ ರೀತಿಯನ್ನು ಕವಿಯ ಮಾತಿನಲ್ಲಿಯೇ ಆಲಿಸಿದರೆ ಸೊಗಸು

> ದಪ್ಪರಿದಟ್ಟುಂ ಪೊಟ್ಟೆನೆ
> ದೊಪ್ಪದೊಗಪ್ಪೆನೆ ಧಿಧಿಲ್ ಬಿಧಿಲ್ಲೆನೆ ಮೆಯ್ಗಳ್
> ಸೊಪ್ಪುಸೊವಡಪ್ಪಿನಂ ಸೂೞ್
> ತಪ್ಪದೆ ಕಡುಕಯ್ದು ಪೊಯ್ದರೊರ್ವರನೊರ್ವರ್

ಮೂದಲಿಸುತ್ತ ಒಬ್ಬರಿನ್ನೊಬ್ಬರನ್ನು ಹೊಡೆಯುವರು. ಕೊನೆಗೆ ತೊಡೆ ಮುರಿದು ಕೆಳಗೆ ಉರುಳಿದ ದುರ್ಯೋಧನ 'ಕರ್ಚಿ ನೆಲನನಾನಿದನೆಂತುಂ ಬಿಡೆನೆಂಬ'ಂತೆ ಇದ್ದನಂತೆ. ಭೀಮನು ದ್ರೌಪದಿಯನ್ನು ಹತ್ತಿರಕ್ಕೆ ಕರೆದು

ತೊಡೆಗಳನ್ನು ಮುರಿದದ್ದಾಯಿತು. ಈಗ ಅತನ ಕಿರೀಟವನ್ನು ಎಡಗಾಲಿನಿಂದ ಒದೆಯುತ್ತೇನೆ ಹಾಗೂ ನಿನ್ನ ಮುಡಿಯನ್ನು ಕಟ್ಟುತ್ತೇನೆ ಎಂದು ವೇಣೀ ಸಂಹಾರ ಮಾಡುತ್ತಾನೆ. ಹೀಗೆ ಅಭಿಮಾನಧನನಾದ ದುರ್ಯೋಧನನ ಅಂತ್ಯವಾಗುವುದನ್ನು ರನ್ನಕವಿ ನಾಟಕೀಯವಾಗಿ ಚಿತ್ರಿಸಿದ್ದಾನೆ.

(ii) ಅಜಿತನಾಥಪುರಾಣ :

ಅಜಿತನಾಥಪುರಾಣವು ಎರಡನೆಯ ತೀರ್ಥಂಕರ ಅಜಿತನಾಥನ ಕಥೆಯನ್ನೊಳಗೊಂಡಿದೆ. ಅದರೊಂದಿಗೆ ಸಗರ ಚಕ್ರವರ್ತಿಯ ಕಥೆಯೂ ಬಂದಿದೆ. ಉತ್ತರಪುರಾಣದ ಕಥೆಯನ್ನೇ ಸ್ವೀಕರಿಸಿ ಅದನ್ನು ಧರ್ಮ-ತತ್ತ್ವಗಳ ಜೋಡಣೆಯಿಂದ "ಪುರಾಣತಿಲಕವನ್ನಾಗಿ" ಮಾಡುವ ಪ್ರಯತ್ನ ಇಲ್ಲಿದೆ. (ಕಥಾವಸ್ತು ಮುಂದೆ ವಿವರವಾಗಿ ಬರುವವರಿಂದ ಅದನ್ನು ಇಲ್ಲಿ ವಿಸ್ತರಿಸುವ ಗೋಜಿಗೆ ಹೋಗಿಲ್ಲ.)

ಅಜಿತನಾಥ ಪುರಾಣದಲ್ಲಿ ಅತ್ತಿಮಬ್ಬೆಯ ಬಗೆಗಿನ ರನ್ನಕವಿಯ ಭಕ್ತಿ ಗೌರವ ವ್ಯಕ್ತವಾಗಿದೆ. ಜಿನಬಾಲಕನ ಅಭಿಷೇಕ ವರ್ಣನೆ ಹಾಗೂ ವೈರಾಗ್ಯ ಬೋಧೆಯನ್ನುಂಟು ಮಾಡುವ ಭಾಗಗಳು ಅದ್ವಿತೀಯವಾಗಿವೆ. ಭಕ್ತಿ ವೈರಾಗ್ಯಗಳನ್ನು ಕನ್ನಡದಲ್ಲಿ ವರ್ಣಿಸುವಲ್ಲಿ ರನ್ನನ ವಿಶೇಷತೆಗೆ ಈ ಸಂದರ್ಭಗಳು ಉದಾಹರಣೆಗಳಾಗಿವೆ :

ಸಾರದೆ ಸಾರಮಪ್ಪ ಜಿನಧರ್ಮಮನಾತ್ಮನ ಸಾರಮಪ್ಪುದಂ
ಸಾರಮಿದೆಂದು ನಂಬಿ ತನಗಲ್ಲದುದಂ ತನಗಪ್ಪುದೆಂದು ಕೇ
ಕಾರ ವಿಹಾರಸೋದರ ಕೃಶೋದರ ಸುಂದರ ದಾರಕೋ
ದಾರ ವಿಯೋಗದೊಳ್ ತೊಡರ್ದು ದಾರುಣ ದುಃಖಮನೆಯ್ದಿದರ್ಕಮೆ

ಓರ್ವಮಗನನ್ನು ಕಳೆದುಕೊಂಡು, ಸಗರ ಚಕ್ರವರ್ತಿಯ ಆಸ್ಥಾನಕ್ಕೆ ಬಂದು ಪ್ರಲಾಪಿಸುವ ಬಡಬ್ರಾಹ್ಮಣನ ಹಾಗೂ ಸಗರನ ಮಕ್ಕಳೇ ಸಾವಿಗೀಡಾದ ಸುದ್ದಿಯನ್ನು ಕೇಳಿ ಆಕ್ರಂದನಗೈಯುವ ರಾಣಿವಾಸದ ಜನರ ಆಕ್ರಂದನ ಕಣ್ಣನ್ನು ತೇವಗೊಳಿಸುವವಾಗಿದೆ. ಈ ಸಂದರ್ಭಗಳೊಂದಿಗೆ ಕಣ್ಣಮುಂದೆ

ಅಚ್ಚಳಿಯದೆ ಉಳಿಯಬಲ್ಲ ಚಿತ್ರ ಅತ್ತಿಮಬ್ಬೆಯದು. ಅವಳನ್ನು ಎಷ್ಟು ವಿಶೇಷಣಗಳಿಂದ ಹೋಲಿಸಿ ವರ್ಣಿಸಿದರೂ ರನ್ನನಿಗೆ ತೃಪ್ತಿಎಂಬುದೇ ಇಲ್ಲ. ಇಂಥ ದಾನಚಿಂತಾಮಣಿಯ ಅದ್ವಿತೀಯ ಚಿತ್ರಣ ರನ್ನನ ಅಜಿತಪುರಾಣದ ಒಂದು ಸತ್ವಪೂರ್ಣವಾದ ಭಾಗ.

೪ ಪಾತ್ರ ಚಿತ್ರಣ

ರನ್ನಕವಿ ಕನ್ನಡದ ಅಗ್ರಕವಿ. ಅವನ ಕಾವ್ಯಗಳು ಕನ್ನಡ ಸಾಹಿತ್ಯದ ಶ್ರೇಷ್ಠವೆನಿಸಿದ ಮೂರು-ನಾಲ್ಕುಕಾವ್ಯಗಳಲ್ಲಿ ಸ್ಥಾನಪಡೆಯತಕ್ಕವು. ಅವುಗಳ ಈ ಹಿರಿಮೆ ಅವನ ಶೈಲಿಯ ಸುಭಗತೆ ಹಾಗೂ ಪಾತ್ರಸೃಷ್ಟಿಯ ನೈಪುಣ್ಯತೆಯಲ್ಲಡಗಿದೆ. ಪ್ರತಿಯೊಂದು ಪಾತ್ರದ ಅಂತರ್ಯವನ್ನು ಮಾನವಸ್ವಭಾವದ ಸೂಕ್ಷ್ಮತೆಯ ಹಿನ್ನೆಲೆಯಲ್ಲಿ ಅವಲೋಕಿಸುವದು ರನ್ನನ ವಿಶೇಷತೆ. ಅದರಿಂದಾಗಿ ಅವು ಜೀವಂತ ಪಾತ್ರಗಳಾಗಿ ಓದುಗನ ಮನದಲ್ಲಿ ಅಚ್ಚಳಿಯದ ಸ್ಥಾನವನ್ನಾಕ್ರಮಿಸುವವು.

ಅಜಿತಪುರಾಣದ ಕಥೆ ಪುರಾಣವಸ್ತು. ಅದರಲ್ಲಿ ಬದಲಾವಣೆಗೆ ಅವನಿಗೆ ಅವಕಾಶವಿಲ್ಲ. ಸಿದ್ಧವಾದ ಚೌಕಟ್ಟಿನಲ್ಲಿಯೇ ಕಥೆಯನ್ನು ಹೆಣೆಯಬೇಕಾಗಿದೆ. ಆದರೂ ಅದರಲ್ಲಿಯೂ ವೈರಾಗ್ಯಬೋಧೆಯ ಸಂದರ್ಭದಲ್ಲಿ, ರಾಜಕುಮಾರರ ಮರಣ ಸುದ್ದಿಯನ್ನು ಕೇಳಿ ಆಕ್ರಂದಿಸುವ ರಾಣಿಯರ ಶೋಕದಲ್ಲಿ ಹಾಗೂ ತಪಸ್ಸಿಗೆ ಹೊರಟ ಅಜಿತಸ್ವಾಮಿಗಾಗಿ ಹಲುಬುವ ಅಂತಃಪುರದ ಜನರ ಪ್ರಲಾಪಗಳಲ್ಲಿ ಮಾನವಸಹಜವಾದ ದುಃಖ-ಶೋಕ ಪ್ರಲಾಪಗಳಿಗೆ ರನ್ನಕವಿ ಕನ್ನಡಿ ಹಿಡಿದಿದ್ದಾನೆ. ತಮಗೆ ತೀರ ನಿಕಟವಾದವರನ್ನು ಅಗಲಬೇಕಾದ ಸನ್ನಿವೇಶದಲ್ಲಿ ಆ ಹೃದಯಕ್ಕಾಗುವ ವ್ಯಥೆಯನ್ನು ಸರಳವಾದ ಕನ್ನಡ ಪದಗಳಲ್ಲಿ ವಿವರಿಸಿ, ಹೃದಯವಿದ್ರಾವಕ ಸನ್ನಿವೇಶವನ್ನು ನಿರ್ಮಿಸುವನು. ಮಗನನ್ನು ಕಳೆದುಕೊಂಡು ದುಃಖತಪ್ತನಾದ ಬಡ ಬ್ರಾಹ್ಮಣನ ಪ್ರಲಾಪ ತೀರ ಹತ್ತಿರದವರ ಶೋಕದಷ್ಟೇ ಸಮೀಪದುದಾಗಿ ಕೇಳುವದು. ಆ ವೃದ್ಧನ ಮಾತುಗಳು ಮಾನವಸಹಜವಾದ ದುಃಖದ ಬೇಗೆಯಿಂದ ಹೊರಹೊಮ್ಮಿ ಪರಿಣಾಮಕಾರಿಯೆನಿಸುವವು.

ಅಜಿತನಾಥಪುರಾಣದಲ್ಲಿ ಅಜಿತನಾಥ, ಸಗರಚಕ್ರವರ್ತಿ ಇವರ ಪಾತ್ರಕ್ಕಿಂತಲೂ ಕಣ್ಣೆದುರು ಸ್ಪುಟವಾಗಿ ನಿಲ್ಲುವ ಪಾತ್ರವೆಂದರೆ ಅತ್ತಿಮಬ್ಬೆಯದು. ಅತ್ತಿಮಬ್ಬೆಯ ಭವ್ಯಮೂರ್ತಿ ಓದುಗರ ಮನಸ್ಸನ್ನು ತನ್ನತ್ತ ಸೆಳೆಯುವದು. ಆವಳ ಬಗೆಗೆ ರನ್ನನ ಭಕ್ತಿ-ಆದರ-ಉತ್ಸಾಹಕ್ಕೆ ಮಿತಿ ಎಂಬುದು ಇಲ್ಲ. ಅವಳನ್ನು ಯಾವ ಹೋಲಿಕೆಯಿಂದ ವರ್ಣಿಸಿದರೂ ಅವನಿಗೆ ತೃಪ್ತಿಯಾಗದ ಮಟ್ಟಿಗೆ ಅವಳ ಜೀವನ ಅವನಿಗೆ ಉದಾತ್ತವಾಗಿ ಕಂಡಿದೆ ಹಾಗೂ ಅದನ್ನು ಕಾಣಿಸುವಲ್ಲಿ ಅವನ ಅದ್ವಿತೀಯತೆ ಕಂಡುಬಂದಿದೆ.

ಅತ್ತಿಮಬ್ಬೆ ಜಿನಧರ್ಮದಲ್ಲಿ ನಿಷ್ಠೆಯುಳ್ಳವಳು. ಪತಿಯನ್ನು ಕಳೆದುಕೊಂಡು ಬಾಳಬೇಕಾದ ಅವಳು

ಒಡಲನುಪವಾಸದಿಂ ತ
ನ್ನೊಡಮೆಯನನವರತದಾನದಿಂ ತಪಿಸಿ ಜಸಂ
ಬಡೆದಳ್ ನೂರ್ಮಡಿ ತೈಲನ
ಪಡೆವಳ ತೈಲಪನ ಜನನಿಗೆಣೆ ಪೆಜರೊಳರೇ ೧-೫೧

ಎಂದು ವ್ರತ-ನಿಯಮ-ಉಪವಾಸದಿಂದ ತನ್ನ ದೇಹವನ್ನು ಸವೆಸುತ್ತ ದಾನಧರ್ಮದಲ್ಲಿ ನಿರತೆಯಾದ ಅವಳಿಗೆ ಸಮಾನರಾರೆಂದು ರನ್ನ ಕೇಳುವನು. ಅವಳು ದಾನಶೂರೆಯಾದಂತೆ ರಣಶೂರೆಯೂ ಆಗಿದ್ದಳು. 'ಮೊನೆಯೊಳ್ ಮನೆಯೊಳ್ ಮೊಳೆವೆತ್ತ ತೈಲಜನನಿಯ ಕೆಲದೊಳ್ ರಂಜಿಪರೆ ಮೀಸೆವೊತ್ತ ಣಂಗಳ್' ಎನ್ನುವನು.

ದಾನಚಿಂತಾಮಣಿ ಅತ್ತಿಮಬ್ಬೆ ಶೀಲಾಲಂಕೃತೆ, ಗುಣಮಾಲಾಲಂಕೃತೆ. ಆ ಮಹಾತಾಯಿಯ ಹೆಸರನ್ನು ತೆಗೆದುಕೊಂಡರೆ ಬಾಲೆಯರಿಗೆ ಕಲಂಕ ಹತ್ತುವದಿಲ್ಲ. ಅವಳ ಚರಿತೆ ಅಷ್ಟು ಪವಿತ್ರವಾದುದು. ಪೂಜ್ಯವಾದುದು.

ಬಿಳಿಯಾರಳೆಯಂತೆ ಗಂಗಾ
ಜಳದಂತೆಸೆವಜಿತಸೇನ ಮುನಿಪತಿಯ ಗುಣಾ
ವಳಿಯಂತೆ ನೆಗಬ್ಬಿಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ

ಪವಿತ್ರತೆಗೆ ಹೋಲಿಕೆಗಳಾದ ಧವಲವರ್ಣದ ಈ ವಸ್ತುಗಳ ಒಂದು ಪಟ್ಟಿ ಯನ್ನೇ ಆಯ್ದುಕೊಡುವನು, ಇದರಿಂದ ಅತ್ತಿಮಬ್ಬೆಯ ಉದಾತ್ತ ಚಿತ್ರ ಪರಿಸ್ಫುಟಗೊಂಡು ನಿಲ್ಲುವದು.

ಪಾತ್ರನಿರೂಪಣೆಯ ದೃಷ್ಟಿಯಿಂದ ಅಜಿತಪುರಾಣಕ್ಕಿಂತ ಗದಾಯುದ್ಧವು ರನ್ನನ ಕಾವ್ಯಸಿದ್ಧಿಗೆ ಹೆಗ್ಗುರುತಾಗಿದೆ. ಮಹಾ ಭಾರತದ ಕಥೆಯನ್ನೇ ಆಯ್ದುಕೊಂಡು, ಸರ್ವಶ್ರೇಷ್ಠತೆಯ ಮನ್ನಣೆಗಳಿಸಿದ ಪಂಪಭಾರತದ ಕೀರ್ತಿ ಪಸರಿಸರುವಾಗಲೂ ಆ ಕಥೆಯನ್ನೇ ಆಯ್ದುಕೊಂಡು, ಅದಕ್ಕೆ ಜೀವಕಳೆ ಯನ್ನು ತುಂಬುವಲ್ಲಿ ರನ್ನನ ಹಿರಿಮೆಯಡಗಿವೆ. ಮಹಾಭಾರತದ ಕಥೆಯನ್ನು ಸಿಂಹಾವಳೋಕನ ಕ್ರಮದಿಂದ ಹೇಳಿರುವದರಿಂದ ಅಲ್ಲಿಯ ಎಲ್ಲ ಪ್ರಮುಖ ಪಾತ್ರಗಳೂ ಇಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕಾಣಿಸಿಕೊಂಡಿವೆ. ಪ್ರಮುಖ ಪಾತ್ರಗಳಾದ ಪಾಂಡವರು, ದ್ರೌಪದಿ, ದುರ್ಯೋಧನ, ಭೀಷ್ಮ, ಧೃತರಾಷ್ಟ್ರ, ಗಾಂಧಾರಿ ಅಶ್ವತ್ಥಾಮ, ಬಲರಾಮ, ಸಂಜಯ ಇವರೆಲ್ಲ ನಾಟಕದಲ್ಲಿಯ ಪಾತ್ರಗಳಂತೆ ಜೀವಂತ ಕಾಣಿಸಿಕೊಳ್ಳುತ್ತಾರೆ. ಅವರೊಂದಿಗೆ, ಮರಣವನ್ನಪ್ಪಿದ ಕರ್ಣ, ದುಃಶಾಸನ, ಅಭಿಮನ್ಯು, ದ್ರೋಣರ ವ್ಯಕ್ತಿತ್ವವೂ ಚಿತ್ರಿತವಾಗಿದೆ.

ಗದಾಯುದ್ಧ ಕಥಾರಂಭವಾಗುವದು ದ್ರೌಪದಿಯ ಪ್ರವೇಶನೊಂದಿಗೆ. ಹಲವಾರು ಕಷ್ಟ-ನೋವು ಅವಮಾನಗಳನ್ನು ಅನುಭವಿಸಿ, ಅನಲದಲ್ಲಿಯೇ ಜ್ವಲಿಸುತ್ತಿರುವವಳು ದ್ರೌಪದಿ, ಭೀಮನೂ ಎಲ್ಲಿ ಸಂಧಿಗೆ ಒಪ್ಪಿಬಿಡುವನೋ ಎಂಬ ಸಂದೇಹವುಳ್ಳ ಅವಳು ಸಂಧಿಯಾದರೆ ನಿಮಗೆ ವನವಾಸ ಹಾಗೂ ಅಗ್ನಿ ಪ್ರತ್ರಿಯಾದ ತನಗೆ ಅಗ್ನಿಯೇ ಗತಿ ಎಂದು ಭೀಮನಿಗೆ ಹೇಳುವಳು, ಅವಳ ಸಂದೇಹನಿವಾರಣೆಯಾಗುವಂತೆ ಪ್ರತಿಜ್ಞೆತೊಟ್ಟ ಭೀಮಸೇನ ಅದನ್ನು ಈಡೇರಿಸುವದನ್ನು ಕೊನೆಯಲ್ಲಿ ಕಾಣುತ್ತೇವೆ. ಹೀಗೆ ಅಪರೂಪ ವಾಗಿ ಕಾಣಿಸಿಕೊಳ್ಳುವ ದ್ರೌಪದಿ ಮಹಾಭಾರತದ ಯುದ್ಧಕ್ಕೆ ಕಾರಣವಾಗು ವಂತೆ, ಮುಂದಿನ ಸಂಗತಿಗಳಿಗೆಲ್ಲ ಸೂತ್ರಧಾರಳಾಗುವಂತೆ ಚಿತ್ರಿತಳಾಗಿದ್ದಾಳೆ.

ದುರ್ಯೋಧನನ ಜೊತೆ ಕಾಣುವ ಸಂಜಯ ಅವನಿಗೆ ಪಾಂಡವರು ಅನುಕೂಲದ್ದೈವರೆಂಬುದನ್ನು ಸಂಧಿಮಾಡಿಕೊಳ್ಳಲು ಹೇಳಿ ಪ್ರಯತ್ನಿಸುವನು.

ಆದರೆ ಅದರ ಪರಿಣಾಮವೆಂದರೆ ದುರ್ಯೋಧನನ ಛಲ, ಅಭಿಮಾನದ ನುಡಿಗಳು ಹೊರಬೀಳುವಂತಾದುದು.

ಕರ್ಣ, ದುಃಶಾಸನರ ಶವಗಳನ್ನು ಕಂಡ ದುರ್ಯೋಧನನ ಚಿತ್ತ ಕಲಕಿ, ಶೋಕತಪ್ತನಾದುದನ್ನು ಕವಿ ವರ್ಣಿಸುತ್ತ, ಅವರೀರ್ವರ ಚಿತ್ರಣವನ್ನು ದುರ್ಯೋಧನನ ಮಾತಿನಲ್ಲಿ ಒಡಮೂಡಿಸಿರುವನು. ಕರ್ಣನ ಶವ ನೋಡಿ,

ನೀನೊಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ

ಎಂದು ಹಲುಬುವಲ್ಲಿ ಅವರೀರ್ವರ ಸ್ನೇಹದ ಆಳ ವೇದ್ಯವಾಗುವದು. ಅದರಂತೆ ದುಃಶಾಸನನ ಶವ ಕಂಡಾಗಲೂ ಅವನ ಕೂಡ ಕರ್ಣನ ಸ್ಮರಣೆಯಾಗುವದು. 'ಎನಗಿರ್ವರುಮೆರಡುಂ ತೋಳೆನಗಿರ್ವರುಮೆರಡು ಕಣ್ಗಳನ್ನರೆ ಯುವರಾಜನುಮಂಗರಾಜನುಂ' ಎಂದು ಶೋಕಿಸುವನು. ಅಭಿಮನ್ಯುವಿನ ಶವವನ್ನು ಕಂಡು ಅವನ ಶೌರ್ಯವನ್ನು ಹೃದಯದುಂಬಿ ಕೊಂಡಾಡಿ, ಅವನಂತಹ ವೀರಮರಣ ತನಗೂ ಲಭಿಸಲೆಂದೂ ಬೇಡಿಕೊಂಡು ಕೈ ಮುಗಿಯುವ ದುರ್ಯೋಧನ ಗುಣಪಕ್ಷಪಾತಿಯಾಗಿಯೇ ಕಾಣುವನು. ಈ ಸಂದರ್ಭಗಳಲ್ಲಿ ಕರ್ಣ, ದುಃಶಾಸನ ಅಭಿಮನ್ಯು ಇವರ ಪಾತ್ರಚಿತ್ರಣ ಒಂದೆಡೆ ಲಭಿಸುವದರ ಜೊತೆ, ದುರ್ಯೋಧನನ ಹೃದಯದ ಇನ್ನೊಂದು ಮಗ್ಗಲು ಚಿತ್ರಿತವಾಗಿದೆ.

ಭೀಮಸೇನನೇ ರನ್ನನ ಕಥಾನಾಯಕ, ದ್ರೌಪದಿಯ ದುಃಖಕ್ಕೆ ಮರುಕಪಡುವ ಗಂಡನಿವನೋರ್ವನೆ. ಅವಳ ಮನದ ಚಿಂತೆಯನ್ನು ಪರಿಹರಿಸಿ, ಅವಳಿಗಾದ ಅಪಮಾನಕ್ಕೆ ಪ್ರತೀಕಾರವನ್ನು ಪಡೆಯಬಯಸಿ ಯಶಸ್ವಿಯಾದವ. ಧರ್ಮನಿಗೂ ಸಹ ಒಂದು ಹಂತದಲ್ಲಿ 'ಆನುಂ ವಿಧೇಯನಲ್ಲ ನೀನುಂ ಗುರುವಲ್ಲ'ವೆಂದು ಹೃದಯ ಬಿಚ್ಚಿ ತನ್ನ ಪ್ರತಿಜ್ಞೆಗೆ ಬದ್ಧನಾದುದನ್ನು ತೋರುವನು. ಭೀಮ–ದುರ್ಯೋಧನರ ಗದಾಯುದ್ಧವಂತೆಯೇ ಮಾತಿನ

ಚಕಮಕಿ ಅಷ್ಟೇ ರಭಸಯುಕ್ತವೂ ಭಯಂಕರವೂ ಆಗಿವೆ. ಹಿಂದಿನ ಘಟನೆಗಳನ್ನು ನೆನೆಪಿಸಿ ಒಬ್ಬರಿನ್ನೊಬ್ಬರಿಗೆ ಹೊಡೆಯುವ ಪೆಟ್ಟು ಅವರಲ್ಲಿ ಆಳವಾಗಿ ಬೇರೂರಿದ ದ್ವೇಷ ರೊಚ್ಚನ್ನು ಪರಿಣಾಮಕಾರಿಯಾಗಿ ಚಿತ್ರಿಸುವದು. ಹೀಗೆ ರನ್ನನ ಪ್ರತಿಯೊಂದು ಪಾತ್ರಗಳು ತಮ್ಮ ಸಹಜವಾದ ನಡೆ-ನುಡಿ-ಕ್ರಿಯೆಯಿಂದ ಸುರಳಿಬಿಚ್ಚುತ್ತ ಜೀವಂತವಾಗಿ ಕಾಣಿಸಿಕೊಳ್ಳುವವು.

೫ ನಾಟಕೀಯತೆ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಾಟಕಗಳ ಅಭಾವ ಸ್ಪಷ್ಟವಾಗಿ ಕಂಡು ಬರುವ ಬಹುದೊಡ್ಡ ಕೊರತೆಯಾಗಿದೆ. ಕಲೆಯ ವಿವಿಧ ಅಂಗಗಳನ್ನು ಮೇಳೈಸಿಕೊಂಡು, ಭಿನ್ನರುಚಿಯ ಪ್ರೇಕ್ಷಕರನ್ನು ಏಕಕಾಲಕ್ಕೆ ತಣಿಸಬಲ್ಲ ನಾಟಕಗಳ ಪ್ರಯೋಜನೆಯನ್ನು ಪ್ರಾಚೀನ ಕನ್ನಡ ಕವಿಗಳು ಅರಿತಿರಲಿಲ್ಲವೆಂದೇನಲ್ಲ. ಆದರೆ ಮಹಾಕಾವ್ಯಗಳನ್ನು ರಚಿಸುವದರತ್ತ ಗಮನಹರಿಸಿದ ಪಂಪಾದಿ ಕವಿಗಳು ನಾಟಕದತ್ತ ಆಕರ್ಷಿತರಾಗಲಿಲ್ಲ. ಅವರ ಕಾವ್ಯಗಳಲ್ಲಿ ನಾಟಕೀಯ ಸನ್ನಿವೇಶಗಳು ವಿಪುಲವಾಗಿದ್ದರೂ ರನ್ನನ ಗದಾಯುದ್ಧ ತನ್ನ ನಾಟಕೀಯ ಗುಣದಿಂದ ಆಕರ್ಷಕವೆನಿಸುವದು.

ಕಾಲೈಕ್ಯ (unity of time), ಸ್ಥಳೈಕ್ಯ (unity of place), ಕ್ರಿಯೈಕ್ಯ (unity of action) ಗಳು ನಾಟಕದ ಪ್ರಮುಖ ಅಂಶಗಳೆಂದು ಅರಿಸ್ಟಾಟಲ್ ಹೇಳಿದ್ದಾನೆ. ಈ ಮೂರೂ ಅಂಗಗಳೂ ರನ್ನನ ಗದಾಯುದ್ಧದಲ್ಲಿ ಪರಿಪಾಲಿತವಾದುದನ್ನು ನಾವು ಕಾಣುತ್ತೇವೆ. ಕೇವಲ ಒಂದುವರೆ ದಿನದ ಕಥಾವಸ್ತು, ಅದೆಲ್ಲ ಸಂಭವಿಸುವದು ಕುರುಕ್ಷೇತ್ರ ಯುದ್ಧ ಭೂಮಿಯಲ್ಲಿ, ಹಾಗೂ ಭೀಮಪ್ರತಿಜ್ಞೆಯಾದ ದುರ್ಯೋಧನನ ಊರು ಭಂಗದೊಂದಿಗೆ ಮುಕ್ತಾಯವಾಗುವದು. ಹೀಗೆ ಕಥೆಯ ಆರಂಭ, ಮಧ್ಯ, ಅಂತ್ಯ ಇವುಗಳಲ್ಲಿಯೂ ಒಂದು ಸುಸಂಬದ್ಧತೆಯುಂಟಾಗಿ ನಾಟಕದಲ್ಲಿ ಕಥಾ ಬೆಳವಣಿಗೆ ಕ್ರಮ ಕಂಡು ಬರುವದು. ಅಲ್ಲಲ್ಲಿ ಸೂಚಿಸಿರುವ ವಿವರಣೆಗಳು ಪ್ರತಿಯೊಂದು ಸಂಧಿಯನ್ನು ನಾಟಕದ ಒಂದು ಅಂಕದಂತೆ ಆಯಾ ಸನ್ನಿವೇಶಗಳನ್ನು ಕಣ್ಣುಮುಂದೆ ನಿಲ್ಲಿಸುವವು.

ಆರಂಭದಲ್ಲಿ ಪ್ರವೇಶಿಸುವ ದ್ರೌಪದಿ 'ದೇವಾಸುರ ಯುದ್ಧಕ್ಕೆ ಕರ ಗಂಬೊತ್ತಳೆಂಬಂತೆ ಅನವರತವಾರಿಧಾರಾಪೂರಪರಿವಾಹಿತ ಪಕ್ಷ್ಮವನೇತ್ರೆಯುಂ ಅಸಹ್ಯಪರಿಭವಾನಲದಂದಹ್ಯಮಾನ ಗಾತ್ರೆಯುಂ ಆಗಿ' ಬರುವದಾಗಿ ಕವಿ ಚಿತ್ರಿಸಿದ್ದಾನೆ. ನಾಟಕಗಳಲ್ಲಿ ನಿರ್ದೇಶಕರು ನೀಡುವ ಸೂಚನೆಗಳೆಲ್ಲವನ್ನು ಈ ವಿವರಣೆ ಒಳಗೊಂಡಂತಿದೆ.

ಸಂಧಿ ಬೇಡವೆಂಬುದನ್ನು ಅವಳು ಭೀಮಸೇನನಲ್ಲಿ ಅರಿಕೆ ಮಾಡಿ ಕೊಳ್ಳಲು,

ಗಳಿಯಿಸುತಿರೆ ಕಬರಿಭರಂ
ಗಳಿಯಿಸುತಿರೆ ನಯನವಾರಿ ನಿನ್ನಾನನದಿಂ
ನಳಿನಾನನೆ ನೀನಿರೆ ಕುರು
ಕುಳಾಂತಕಂ ಗಳಿತಕೋಪನೇ ?

ಎಂದು ಭೀಮ ಪ್ರಶ್ನಿಸುವನು. ಅಲ್ಲದೆ "ಊರುಗಳನುಡಿವೆನೊವೆಂ ಸಾರನ ಕೌರವ ಪರಿವೃಢನ ಮಕುಟಮಂ ವೇಣೀಸಂಹಾರವ ಮಾಡುವೆಂ" ಎಂದು ಪ್ರತಿಜ್ಞೆಗೈಯುವನು. ಈ ಚಿಕ್ಕ ಸನ್ನಿವೇಶದಲ್ಲಿ ಅವಮಾನದ ಬೇಗೆಯಲ್ಲಿ ಬೆಂದ ದ್ರೌಪದಿಯ ದೀನಾವಸ್ಥೆ, ಭೀಮನು ವೈರಿಗಳಲ್ಲಿ ಪ್ರತೀಕಾರ ಕೈಕೊಳ್ಳುವ ನಿರ್ಣಯಕ್ಕೆ ಬರುವಂತೆ ಮಾಡುವಲ್ಲಿ ಯಶಸ್ವಿಯಾಗುವದು. ಭೀಮನ ಕೋಪಾಟೋಪವೂ ವ್ಯಕ್ತವಾಗಿದೆ. ಹೀಗೆ ಆರಂಭದಲ್ಲಿಯೇ ದ್ರೌಪದಿಯ ಆಗಮನವನ್ನು ಮಾಡಿಸಿ, ಅವಳಿಂದ ಮಹಾಭಾರತ ಯುದ್ಧಕ್ಕೆ ನಾಂದಿ ಹಾಡುವಂತೆ ಮಾಡಿದ್ದಾನೆ ಕವಿರನ್ನ.

ಯುದ್ಧ ಭೂಮಿಯಲ್ಲಿ ದುರ್ಯೋಧನ–ಸಂಜಯರ ಸಂಭಾಷಣೆಯೂ ದುರ್ಯೋಧನನ ಮನವನ್ನು ಬಿಚ್ಚಿ ತೋರುವಲ್ಲಿ ಪರಿಣಾಮಕಾರಿಯಾಗಿದೆ. ಕೌರವರು ಅನುಕೂಲದೈವರೂ, ಬಲಯುತರೂ ಆದುದರಿಂದ ಸಂಧಿ ಸೂಕ್ತ ಎಂಬ ಸಂಜಯನ ಮಾತಿಗೆ— 'ಪೆಜರಂ ಪೊಗೞ್ದಪೆ ಎಮ್ಮಂ ಕಿಜಿಯುಂ ಮಾಡಿದಪೆ ನೀನುಂ ಮಜಿಯಿಸು ಪಾಂಡವಂ' ಎಂದು ದುರ್ಯೋಧನ ಆರೋಪಿ ಸುವನಲ್ಲದೆ, ತಾನು ಒಡ್ಡಿದ ಆಪತ್ತು, ಎಸಗಿದ ಅವಮಾನಗಳನ್ನು ಬಾಯಿ

ಮುಚ್ಚಿ ಸಹಿಸಿಕೊಂಡ ಪಾಂಡವರ ಬಲವು ಆಗ ಅದೆಲ್ಲಿ ಹೋಗಿತ್ತೆಂದು ಪ್ರಶ್ನಿಸುವನು.

ಸತ್ತ ಮಕ್ಕಳು ಸತ್ತರು ಸಂಧಿಮಾಡಿಕೊಂಡು ಉಳಿದ ನೀನೊಬ್ಬನೇ ನಮಗೆ ಮಗನಾಗಿರು ಎಂದು ಕೈಮುಗಿದು ಬೇಡಿಕೊಳ್ಳುವ ಧೃತರಾಷ್ಟ್ರ-ಗಾಂಧಾರಿಯರ ಸಂದರ್ಶನ ಮನಮಿಡಿಯುವಂತಿದೆ. ಇವೆಲ್ಲವುಗಳಿಗೂ ಮಿಗಿಲಾಗಿ ದುರ್ಯೋಧನನ ಭವಿಷ್ಯದ ಮುನ್ಸೂಚನೆಯೀಯುವ ಮರುಳಗಳ ಸೃಷ್ಟಿ ರನ್ನನ ಅದ್ಭುತ ನಾಟಕೀಯ ಸನ್ನಿವೇಶ ನಿರ್ಮಾಣಶಕ್ತಿಗೆ ಸಾಕ್ಷಿಯಾಗಿದೆ.

ಕರ್ಣ, ದುಃಶಾಸನರ ಶವಗಳನ್ನು ಕಂಡ ಸಂದರ್ಭ, ಭೀಮನೊಂದಿಗೆ ಹೋರಾಡುವ ಸಂದರ್ಭ— ದುರ್ಯೋಧನನ ಮಾತು ನಾಟಕೀಯ ಸಂವೇದನೆಯನ್ನೊಳಗೊಂಡಿವೆ.

ಹೀಗಾಗಿ ರನ್ನಕವಿ ನಾಟಕೀಯ ಗುಣವನ್ನು ಸಂವಾದ ರಚನೆಯ ಮೂಲಕ, ಪರಿಣಾಮಕಾರಿ ಸನ್ನಿವೇಶಗಳ ಜೀವಂತ ಚಿತ್ರವನ್ನು ಒಡಮೂಡಿಸುವವರ ಮೂಲಕ ವ್ಯಕ್ತಪಡಿಸಿದ್ದಾನೆ,

೬ ಶೈಲಿ

ಪಾತ್ರಪೋಷಣೆ, ಸಂಭಾಷಣೆ, ಸನ್ನಿವೇಶ ನಿರ್ಮಾಣ, ರಸಪ್ರತಿಪಾದನೆಯಲ್ಲಿ ರನ್ನನದು ಎತ್ತಿದ ಕೈ ಅವನ ಗದಾಯುದ್ಧವು ನಾಟಕೀಯ ಗುಣಗಳಿಂದ ಕನ್ನಡ ಕಾವ್ಯಗಳಲ್ಲಿಯೇ ಎತ್ತರದ ಸ್ಥಾನವನ್ನು ಪಡೆದಿವೆ. 'ಕಾವ್ಯಂಗಳೊಳ್ ಗುಣಮಂ ಬಯ್ಸಿಡವೇಡಾ'—

ಕವಿಮಾರ್ಗದೊಳಪೊಕ್ಕುಂ
ನವರಸಮಂ ತೆಱಿಯೆ ನುಡಿದನೆನಿಸಿದ ಕವಿ ಸ
ತ್ಕವಿಯೆನಿಕುಂ ಗೂಡಾರದ
ಕವಿಯಂತಿರೆ ಮುಚ್ಚಿ ಪೋದ ಕವಿಯುಂ ಕವಿಯೇ

ಎಂದು ಬರೆಯುವುದೆಲ್ಲವನ್ನು ವಿಶದವಾಗಿ ಬರೆಯಬೇಕೆಂದು ಅವನೇ ಹೇಳಿದ್ದಾನೆ.

ರನ್ನ ಕನ್ನಡ-ಸಂಸ್ಕೃತ ಉಭಯ ಭಾಷಾ ಪಂಡಿತ, ಅಗತ್ಯವೆನಿಸಿದಲ್ಲಿ ಕಾವ್ಯಕ್ಕೆ ಉಚಿತವಾದ ಸಂದರ್ಭಗಳಲ್ಲಿ ಸಂಸ್ಕೃತವನ್ನು ಬಳಸುವಲ್ಲಿ ಹಿಂದೇಟು ಹಾಕುವದಿಲ್ಲ. 'ಬಹುರತ್ನ ವಸುಂಧರಾ', 'ಮೌನಂ ಸರ್ವಾರ್ಥ ಸಾಧನಂ', 'ಗಂಡಸ್ಯೋಪರಿ ಸ್ಫೋಟಕಮ್', 'ಅಶುಭಸ್ಯ ಕಾಲಹರಣಮ್' ಮೊದಲಾದ ಸಂಸ್ಕೃತ ಲೋಕೋಕ್ತಿಗಳನ್ನು ಬಳಸಿದ್ದಾನೆ.

ರನ್ನನ ಕಾವ್ಯದಲ್ಲಿ ನೇರವಾದ, ಜನಸಾಮಾನ್ಯರ ಪದಪ್ರಯೋಗಗಳ ಬಳಕೆಯನ್ನೂ ಕಾಣುತ್ತೇವೆ: 'ನೀರೊಳಗೆಸಡಿರ್ಕುಂ ಮೀನಿರ್ಕುಂ. ಕಪ್ಪೆಯಿರ್ಕು ಮಿರ್ಪರೆ ಗಂಡರ್', 'ತದ್ರುಥದ ಗಾಲಿಗಳ್ ದೊಡ್ಡಿದುವೇ ?' ಈ ಮೊದಲಾದ ಸಾಮಾನ್ಯರ ಮಾತುಗಳು ಪಾತ್ರಗಳೊಂದಿಗೆ ಹೊಂದಿಕೊಂಡು ಕಾವ್ಯಕ್ಕೆ ಮೆರುಗನ್ನಿತ್ತಿವೆ.

ರನ್ನ ಕನ್ನಡದ ಗಂಡು ಕವಿ. ಅವನ ಶೈಲಿ ವೀರ್ಯವತ್ತಾದುದು. ದುರ್ಯೋಧನನ ಅಭಿಮಾನ, ದರ್ಪ; ಭೀಮನ ಕೋಪ, ಆಡಂಬರವನ್ನು ಪರಿಣಾಮಕಾರಿಯಾಗಿ ಚಿತ್ರಿಸಲು ವೀರ್ಯವತ್ತಾದ ಶೈಲಿಯನ್ನೇ ಬಳಸುವನು. ಭೀಮ-ದುರ್ಯೋಧನರ ಗದೆ ಗದೆಯಂ ಘಟ್ಟಿಸೆ ಪುಟ್ಟಿದ ಕೆಂಡದ ಕಿಡಿಗಳೇ ರನ್ನನ ಈ ಪದಗಳು.

ದಪ್ಪರದಟ್ಟುಂ ಪೊಟ್ಟೆನೆ
ಧೊಪ್ಪ ಧೊಗಪ್ಪೆನೆ ದಿಧಿಲ್ಬುಧಿಲ್ಲೆನೆ ಗದೆಗಳ್
ಸೊಪ್ಪು ಸೊವಡಪ್ಪಿನಂ ಸೂ
ಟ್ಟಿಪ್ಪವೆ ಕಡುಕಯ್ದು ಪೊಯ್ದುರೊರ್ವರನೊರ್ವರ್

ಈ 'ಪದೋಕ್ತಿ ಭೇರಿ' ರನ್ನನಿಗೆ ಮೀಸಲು !

ಕೆಲವು ಸಲ ಒಂದೇ ಪದವನ್ನು ಪುನಃ ಬಳಸಿ ಅದ್ಭುತ ಪರಿಣಾಮವನ್ನು ಸಾಧಿಸುವದನ್ನು ಕಾಣಬಹುದು: 'ಮುಲ್ಮುಲ ಮುಱಿಗುವೆ' 'ನುಣ್ಣನೆ ನೊಣೆದಂ' 'ಸೌಳನೆ ಸೀಳ್ದಂ' 'ತಿಱ್ರನೆ ತಿರಿವೈ.' ಸಹಜವಾದ ಭಾಷೆಯನ್ನು ಬಳಿಸಿ ಕಾವ್ಯಕ್ಕೆ ಕಳೆಕಟ್ಟಿದ್ದಾನೆ. ಸಾಮಾನ್ಯರ ಮಾತು ನಾಣ್ಣುಡಿ-ಗಾದೆಮಾತುಗಳೂ ಅವನಿಗೆ ಪ್ರಿಯ. 'ಸಮರಜಯಂ ದೈವಾಯತ್ತಂ;' 'ಗಂಡರ್ ಗುಣಮನೆ ಮೆಚ್ಚುವುದು.'

‘ಕಯ್ಪೆ ಸೊರೆಯುಂ ಕುಡಿಯೇಂ ಮಿಡಿಯೇಂ;’ ‘ಕರವಾಳಂ ಮಸೆವಂದದೆ ಮರವಾಳಂ ಮಸೆಯೆ ಕೂರಿತಕ್ಕುಮೆ;’ ‘ಕಪಿಗೆ ಚಪಲತೆ ಸಹಜಂ’ ಈ ಪ್ರಯೋಗಗಳ ಬಳಕೆಯಿಂದ ಅರ್ಥಸ್ಪಷ್ಟತೆಯಾಗುವದಲ್ಲದೆ ಶೈಲಿಗೂ ಬಿಗುವನ್ನುಂಟುಮಾಡುತ್ತದೆ.

ಗದಾಯುದ್ಧದಲ್ಲಿ ವೀರ, ಶೋಕ, ಕರುಣ ರಸಗಳು, ಅಜಿತಪುರಾಣದಲ್ಲಿ ಶಾಂತ, ಅದ್ಭುತ, ಶೃಂಗಾರಾದಿ ರಸಗಳು ಕಾಣಿಸಿಕೊಂಡಿವೆ. ಎರಡರಲ್ಲಿಯೂ ಅವು ಕಾವ್ಯದ ವಸ್ತು-ನಿರೂಪಣೆಗೆ ಹೊಂದಿಕೊಂಡು, ಒಂದು ಜೀವವಾಗಿ ರೂಪತಾಳಿದುದು ರನ್ನನ ಶೈಲಿಯ ಸಿದ್ಧಿಯ ಹೆಗ್ಗುರುತು. ಆದರೆ ಪಂಪನನ್ನು ಕಣ್ಣುಮುಂದೆ ಇರಿಸಿಕೊಂಡು ನೋಡಿದಾಗ, ದ್ವಿತೀಯ ದರ್ಜೆಯ ಕವಿಯೆಂದು ಹೇಳುವದುಂಟು. ಆದರೆ ರನ್ನನ ಶಬ್ದಸಂಪತ್ತು, ಪಾತ್ರಪೋಷಣೆ, ಸಂವಾದರಚನಾಶಕ್ತಿ, ನಾಟಕೀಯತೆ–ಗುಣಗಳನ್ನು ಅವಲೋಕಿಸಿದಲ್ಲಿ ಅವನು ದ್ವಿತೀಯನಲ್ಲ ಅದ್ವಿತೀಯ ಕವಿಯೋ !

ಅಜಿತಪುರಾಣ ಸಾರ

೧ ಜಿತಶತ್ರುನಾಮ ಅನ್ವರ್ಥವಾದುದು

ಅಖಿಲ ಜಲಚರಕುಲದ ಕೋಲಾಹಲದಿಂದ ಕೂಡಿದ ಪ್ರಬಲ ರೌದ್ರ ಲವಣ ಸಮುದ್ರದ ಮಧ್ಯದಲ್ಲಿ ಜಂಬೂ ವೃಕ್ಷಗಳಿಂದ ಕೂಡಿದ ಜಂಬೂ ದ್ವೀಪವಿದೆ. ಅದು ಸಕಲ ಜಲಾಚಲ ಚಕ್ರವರ್ತಿಯೂ, ನಿಖಿಳ ಶೈಲ ಕುಲ ಚಕ್ರಗಳ ಚೂಡಾಮಣಿಯೂ ಆಗಿದೆ. ಅದರ ಎರಡು ವಿದೇಹ ವಿಷಯಗಳ ಭರತೈರಾವತದ ನಟ್ಟನಡುವೆ ಮಂದರಪರ್ವತವು ಕಿನ್ನರಾಮರ ರಮಣಿಯರಿಂದ ತುಂಬಿದ ಕಂದರಗಳಿಂದ ಅತ್ಯಂತ ರಮಣೀಯವಾಗಿದೆ. ಸರೋವರ, ದ್ವೀಪ, ಕುಲಪರ್ವತಗಳಿಂದ ಆವರಿಸಲ್ಪಟ್ಟ ಆ ಬನವಾಸವು ಸುಂದರವಾಗಿ ಕಾಣುತ್ತಿತ್ತು. ಅಲ್ಲಿ ಸೂರ್ಯ, ಚಂದ್ರ ಮಂಡಲಗಳೂ, ತಾರಾಚಕ್ರಗಳೂ, ಆಕಾಶಶ್ರೀಯೂ ಮೇರುನೃಪನಿಗೆ ಪ್ರೀತಿಯಿಂದ ನೀಲಾಂಜನೆ ಮಾಡುವಂತೆ ತೋರುವವು.

ಅಲ್ಲಿ ಮಂದರಪರ್ವತವು ಆದಿತೀರ್ಥಂಕರ ವೃಷಭದೇವರ ಜನ್ಮಾಭಿಷೇಕದ ಅಮೃತಪ್ರವಾಹದಿಂದ ತನ್ನ ಕೀರ್ತಿಪತಾಕೆಯನ್ನು ಮೆರೆಯುವಂತೆ ಕಂಗೊಳಿಸುತ್ತಿದೆ. ಆ ಮಂದರಪರ್ವತದ ದಕ್ಷಿಣ ಭಾಗದ ಮಧ್ಯದಲ್ಲಿ ಪವಿತ್ರವಾದ ಭರತಕ್ಷೇತ್ರ, ಇದೆ. ಅದರಲ್ಲಿಯ ಅಯೋಧ್ಯೆಯು ಅವರ ಹೃದಯವಾಗಿತ್ತು. ಇಕ್ಷ್ವಾಕುವಂಶದ ರಾಜರಿಗೆ ಆಧಾರವಾಗಿ, ಆದಿತೀರ್ಥಂಕರರ ಜನ್ಮಭೂಮಿಯಾಗಿ, ಅವರ ಮಗ ಭರತಚಕ್ರವರ್ತಿಯ ರಾಜಧಾನಿಯಾಗಿ ಮೆರೆದಿತ್ತು. ಆ ಅಯೋಧ್ಯಾನಗರವನ್ನು ಉಪವನಗಳು ಸುತ್ತುವರಿದಿವೆ. ತೋಪುಗಳ ನೆಳಲಿನಲ್ಲಿ ಸುಳಿದಾಡುವ ಕಾಮಿನಿಯರ ಗುಂಪುಗಳನ್ನು ಮದನ ಬಾಣವು ಕೆಡಿಯುತ್ತಿದ್ದಿತು. ಕಾಮನ ವಿಜಯ ಚಾಪಗಳಂತೆ ಪುಂಡ್ರೇಕ್ಷುವಾಟ, ಪುಷ್ಪ

ಪಾಟಗಳಿದ್ದವು. ಸುರಪುರವನ್ನು ತಲುಪುವ ಹೊಲಗದ್ದೆಗಳ ವೈಭವ–ಭೋಗಶಾಲಿಯಾದ ಅಮರಾವತಿಯನ್ನು ಮೀರಿಸುತ್ತಿದ್ದಿತು. ಆ ಪಟ್ಟಣದ ರತ್ನಖಚಿತ ಭವನಗಳ ಮೆರಗು ಭೂಮಿಯ ಮೇಲೆಲ್ಲ ಹಬ್ಬಲು, ನವಿಲುಗಳು ತಮ್ಮ ಗರಿಗಳನ್ನು ಬಿಚ್ಚಿ, ಮಧುರ ಕೇಕಾರವವನ್ನು ಮಾಡುತ್ತ ಆಡುವವು. ಕೆಂಪುಮಣಿಯ ಪ್ರಕಾಶವು ಕೋಣೆ ಕೋಣೆಗಳಲ್ಲಿ ಹೊಳೆಯುತ್ತಿರಲು ಶುದ್ಧ ಚಿನ್ನದಿಂದ ಕೆತ್ತನೆಮಾಡಿದ ರಾಣಿವಾಸವು ಮೆರೆಯುತ್ತಿದ್ದಿತು.

ಅಯೋಧ್ಯೆಯು ಅಮರಾವತಿಯನ್ನು, ಇಲ್ಲಿಯ ಉದ್ಯಾನಗಳು ನಂದನವನವನ್ನು, ಸ್ತ್ರೀಪುರುಷರು ದೇವಲೋಕದ ಸ್ತ್ರೀ ಪುರುಷರನ್ನೂ ಮೀರಿದ್ದರು. ಹೀಗೆ ನಾಲ್ಕೂ ದಿಕ್ಕಿನಿಂದ ನೋಡಲಾಗಿ ಸಾಕೇತಪುರವು ನಲ್ವತ್ತೆಂಟು ಗಾವುದ ಪ್ರಮಾಣಕ್ಕೆ ಆಶ್ರಯಸ್ಥಾನವಾಗಿದ್ದಿತು, ಸಂಪತ್ತು, ಕೌಶಲ್ಯಗಳಿಗೆ ಇನ್ನೊಂದು ಹೆಸರಾಗಿದ್ದಿತು. ಇದನ್ನು ಭೂಲೋಕಕ್ಕೆಲ್ಲ ಒಡೆಯನೂ, ಉದಾತ್ತ ಕ್ಷತ್ರಿಯ ಕುಲತಿಲಕನೂ, ಇಕ್ಷ್ವಾಕುವಂಶದ ಜಗತ್ಪವಿತ್ರ ಕಾಶ್ಯಪಗೋತ್ರದ ನಿಜಭುಜಬಲ ಪರಾಕ್ರಮಿಯೂ, ಅನೇಕ ವೈರಿಗಳನ್ನು ಜಯಿಸಿದವನೂ ಆದ ಜಿತಶತ್ರು ರಾಜನು ಧರ್ಮದಿಂದ ಆಳುತ್ತಿದ್ದನು. ಅವನ ಮನೋವಲ್ಲಭೆ ವಿಜಯಸೇನೆಯು ಅಂತಃಪುರದಲ್ಲಿ ಪ್ರಧಾನೆಯೂ, ಗುಣಾಲಂಕೃತೆಯೂ ಆಗಿದ್ದಳು. ಅವಳ ಕೋಮಲವಾದ, ಕೈ, ತುಟಿಗಳು ಚಿಗುರಿದ ವನಲತೆಯನ್ನು ಹೋಲುತ್ತಿದ್ದವು. ಕೇದಗೆಯಂತೆ ಸೆಳ್ಳುಗುರು, ಬಂಗಾರ ಕಳಸದಂತೆ ಮೊಲೆ, ನೀಲಕಮಲದಂತೆ ಮುಖ, ಕಾಮನಬಿಲ್ಲಿನಂತೆ ಹುಬ್ಬುಗಳಿಂದ ಆ ಮಹಾದೇವಿಯು ಅತಿಗಂಭೀರಳೂ, ಪ್ರಸನ್ನಳೂ ಆಗಿದ್ದಳು. ಮಣಿಖಚಿತ ನೂಪುರ, ಡಾಬು, ಮಣಿಹಾರಗಳಿಂದ ಆ ಲಲನೆ ರನ್ನದ ಬೊಂಬೆಯಂತಿರುವಳು, ಚಿರಯೌವನ ಲಕ್ಷ್ಮೀಗೆ, ಕಾಮದೇವನಿಗೆ, ಮಹಾರಾಜನ ಕಣ್ಮನಗಳಿಗೆ ನೆಲೆಯೆಂಬಂತೆ ಅಬಲೆಯ ಮೊಲೆಗಳಿದ್ದವು. ಅವಳ ಕಂಠಾಭರಣವು ವಿದ್ಯುಲ್ಲತೆಯಂತೆ. ಕರಪಲ್ಲವಗಳು ಶೃಂಗಾರ ಜಲದಲ್ಲಿ ಬೆಳೆದ ಲತೆಗಳಂತೆ, ಹುಬ್ಬು ಮನ್ಮಥನ ಬಿಲ್ಲಿನಂತೆ, ಕಣ್ಣು ಅರಳಿದ ತಾವರೆಯಂತೆ, ಆಕೆಯ ದೇಹಕಾಂತಿ ಬೆಂಕಿಯಲ್ಲಿ ಪುಟವಿಟ್ಟ ಚಿನ್ನದ ಹೊಳಪನ್ನು ಮೀರಿಸಿದಂತೆ ಇದ್ದವು. ಜಿಂಕೆಯಂತಹ ಚಂಚಲವಾದ ಕಡೆಗಣ್ಣನೋಟ, ಸುಂದರವಾದ ಹವಳದಂತಹ ತುಟಿ ಹಾಗು

ಹೊಳೆಯುವ ದಂತಪಂಕ್ತಿಗಳೇ ಅವಳ ಆಡಂಬರಗಳಾಗಿದ್ದವು. ಹೀಗೆ ಸೌಂದರ್ಯದ ಖನಿಯೂ, ಗುಣಾಲಂಕೃತೆಯೂ ಆದ ವಿಜಯಸೇನಾ ಮಹಾದೇವಿಯಲ್ಲಿ ಜಿತಶತ್ರು ಮಹಾರಾಜನು ಅನಂಗಸುಖಸಾಮ್ರಾಜ್ಯವನ್ನು ಅನುಭವಿಸುತ್ತಿದ್ದನು.

ಜಿತಶತ್ರು ಮಹಾರಾಜನು ಧರ್ಮ ಸಮ್ಮತವಾದ ಧರ್ಮ ಅರ್ಥ, ಕಾಮ, ಮೋಕ್ಷವನ್ನು ಅನುಭವಿಸುತ್ತಿದ್ದನು. ಅದರೊಂದಿಗೆ ಚತುರ್ವಿಧ ರಾಜವೃತ್ತಿಯನ್ನು ಉದಾತ್ತರೀತಿಯಲ್ಲಿ ಆಚರಿಸುತ್ತ ದಿಗ್ವಿಜಯ ಕೈಕೊಳ್ಳಲು ಅವನ ಶೌರ್ಯ, ಸಾಹಸಕ್ಕೆ ಹೆದರಿ ಶತ್ರುಮಂಡಳವು ಹೆದರಿ ನಡುಗಹತ್ತಿತು. ಬಾಹ್ಯ ಶತ್ರುಗಳನ್ನೂ, ಅಂತರಂಗದ ಕಾಮ, ಕ್ರೋಧ. ಮಾಯಾ, ಲೋಭಗಳೆಂಬ ಶತ್ರುಗಳನ್ನೂ ದಮನಮಾಡಿ ಗೆದ್ದುದರಿಂದ ಶತ್ರುಂತಪನಾದ ಜಿತಶತ್ರುವಿಗೆ ಆ ಹೆಸರು ಅನ್ವರ್ಥವಾಗಿದ್ದಿತು. ಅವನು ಏಕಾಂಗವೀರನೂ, ಉಭಯಕುಲಶುದ್ಧನೂ, ತ್ಯಾಗಾದಿ ಮಹಾಗುಣತ್ರಯಪವಿತ್ರನೂ ಆಗಿ ಸುಖದಿಂದ ಇದ್ದನು. ಈ ರಾಜದಂಪತಿಗಳ ಪುಣ್ಯಗರ್ಭದಲ್ಲಿ ಎರಡನೆಯ ತೀರ್ಥಂಕರನು ಹುಟ್ಟಲನುವಾದನು.

• • •

೨ ವಿಮಲವಾಹನ ಭವ

ದ್ವಿತೀಯ ತೀರ್ಥಂಕರನಾದ ಅಜಿತನಾಥನು ತನ್ನ ಪೂರ್ವಜನ್ಮದಲ್ಲಿ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ದಕ್ಷಿಣ ದಂಡೆಯ ಮೇಲಿದ್ದ ವತ್ಸಕಾವತಿ ವಿಷಯದ ಸುಸೀಮಾ ನಗರವನ್ನು ಆಳುತ್ತಿದ್ದ ವಿಮಲವಾಹನನಾಗಿದ್ದನು. ಕೆಲವು ವರ್ಷಗಳು ಕಳೆದ ಮೇಲೆ, ಒಂದು ದಿವಸ ರಾಜ್ಯ ವಿದ್ಯಾವಿಲಾಸಿನೀವಿಲಾಸಮಣಿದರ್ಪಣದ ಪ್ರತಿಬಿಂಬದಲ್ಲಿ ನಯವಾದ ಕೆನ್ನೆಯ ಮೇಲೆ ಬೆಳೆದ ನರೆಗೂದಲನ್ನು ಕಂಡು ಅವನು ಪರಮ ವೈರಾಗ್ಯಪರನಾಗಿ ಯೋಚಿಸಿದನು :

'ಈ ಶರೀರವೆಂಬುದು ಮಲಮೂತ್ರಗಳ ವಾಸಸ್ಥಾನವಾಗಿದೆ. ಸಪ್ತ ಧಾತು ವಿಕಾರಗಳಿಂದ ಕೂಡಿದೆ; ಸದ್ಗುಣರಹಿತವಾಗಿದೆ. ವಿಷವೃಕ್ಷದಂತಿದೆ, ದುರಂತವ ದುಃಖಕ್ಕೆ ಮೂಲವಾಗಿದೆ. ಈ ಶರೀರದ ಸಂಗದಿಂದ ತಟ್ಟೆಯಲ್ಲಿ ಬಡಿಸಿದ ಒಳ್ಳೆಯ ಆಹಾರ ಪದಾರ್ಥಗಳು ಎಂಜಲಾಗುವವು. ತೊಟ್ಟ ಬಟ್ಟೆಗಳು ಮೈಲಿಗೆಯಾಗುವವು. ಮುಡಿದ ಹೂಮಾಲೆ ಬಾಡಿ ನಾರುವದು. ಸುವಾಸನೆಯನ್ನು ಬೀರುವ ಚಂದನಾದಿಗಳು ಮಲಿನವಾಗುವವು.

'ಈ ದೇಹದಲ್ಲಿ ಜೀವವಿದ್ದರೂ ಅದು ಈ ದೇಹದ ಕೇಡನ್ನು ನೆನೆಯದೆ, ಕಾಣದೆ, ಕೇಳದೆ. ತಿಳಿದೂ ತಿಳಿಯದಂತೆ ಇರುವಾಗ, ಅದನ್ನು ತೊರೆಯಲು ಮನಸ್ಸು ಆಗದಿದ್ದರೆ ವೈರಾಗ್ಯಕ್ಕೆ ಬೇರಿನ್ನಾವ ಕಾರಣ ಬೇಕು ?

'ಶರೀರದಲ್ಲಿ ನೆಲೆಸಿರುವ ಏಳು ಧಾತುಗಳೇ ಏಳು ನರಕಗಳಲ್ಲವೆ ? ತನಗಾಗದ ಈ ದೇಹವನ್ನು, ಸಂಪತ್ತನ್ನು ಬಯಸಿ, ಮೋಕ್ಷಮಾರ್ಗದಿಂದ ದೂರವಿರುವಂತೆ ಮಾಡುವ ಈ ಆತ್ಮನಂತಹ ಆತ್ಮವಂಚಕರು ಬೇರಾರು ?

'ಈ ಆತ್ಮವು ಸಾರವತ್ತಾದ ಜಿನಧರ್ಮವನ್ನವಲಂಬಿಸದೆ, ನಿಸ್ಸಾರವಾದುದನ್ನೇ ಸಾರವತ್ತಾದುದೆಂದು ಭಾವಿಸಿ, ತನಗೆ ಯೋಗ್ಯವಲ್ಲದುದನ್ನು ಯೋಗ್ಯವೆಂದು ನಂಬಿ, ಭೂಮಿ, ಯಾತ್ರೆ, ಸೋದರರು, ಕೃಶೋದರಿಯಾದ ಸುಂದರ ಹೆಂಡತಿ, ಮಕ್ಕಳು— ಇವೇ ಮೊದಲಾದ ವಿಮೋಹದಲ್ಲಿ ಆಸಕ್ತವಾಗಿ ದಾರುಣವಾದ ದುಃಖಕ್ಕೆ ಈಡಾಗದೆ ಉಳಿಯುವದೇ ?

'ಮುನಿದು, ಎಳೆದು ಕರೆದು ಒಯ್ಯಬಲ್ಲ ಯಮನಿಗೆ ನಿಲ್ಲು ಎಂದು ಹೇಳಬಲ್ಲವರು ಯಾರೂ ಇಲ್ಲ. ಎಲೈ ಜೀವನೇ, ನಿನಗೆ ಜಿನಧರ್ಮವೊಂದೇ ರಕ್ಷೆ, ಆದುದರಿಂದ ಸೂರ್ಯನಂತೆ ಲೋಕತ್ರಯಕ್ಕೆ ಬೆಳಕನ್ನೀಯುವ ಜಿನನನ್ನು ಸ್ಮರಿಸು.

'ಎಲೈ ಜೀವನೆ, ಕಳೆದು ಹೋದ ಭವಗಳನ್ನು ಎಷ್ಟರಮಟ್ಟಿಗೆ ನೆನೆಯುವಿ ? ಯಾವ ಯಾವ ಭವದ ಬಂಧುಗಳನ್ನು ನೆನಿಸಬಲ್ಲೆ ? ನಿನ್ನ ಯಾವ ಯಾವ ಭವದ ದೇಹದ ರೂಪವನ್ನು ನೀನು ನೆನಪಿಡಬಲ್ಲೆ ? ಇದು ನಿನಗೆ ಸಾಧ್ಯವೇ ?

'ಎಲೈ ಜೀವನೆ, ಹೀಗೆ ಕುದಿಯುತ್ತ, ಸಿಟ್ಟಾಗುತ್ತ ಬೇರೆ ಬೇರೆ ದೇಹಗಳನ್ನು ಹೊತ್ತು ಎಷ್ಟು ಭವಗಳಲ್ಲಿ ಸುತ್ತಾಡುವಿ ?

'ಕೊನೆಯಿಲ್ಲದ ಈ ಸಂಸಾರದ ಅಂತ್ಯವನ್ನು ಕಾಣುವ ಬಯಕೆ ನಿನಗೆ ಇದ್ದುದಾದರೆ ನಾನು ಹೇಳುವ ಮಾತನ್ನು ಕೇಳಿ ಒಪ್ಪಿಕೊಳ್ಳು. ಧರ್ಮವನ್ನೇ ಆಶ್ರಯಿಸು, ಪರಮತಗಳಲ್ಲಿ ಫಲವಿಲ್ಲ. ಅವುಗಳನ್ನು ಅನುಸರಿಸಿ ಕೆಡಬೇಡ. ನೀನು ಅಲ್ಲಿಯೇ ಆಶ್ರಯ ಹೊಂದುವುದಾದರೆ ತಿನ್ನುವವನನ್ನಲ್ಲದೆ ಕುರಿ ಬೇರೆಯವರನ್ನು ಮೆಚ್ಚಲಾರದೆಂಬ ಮಾತು ಸುಳ್ಳಾಗದು.

'ಹುಟ್ಟಿಸಾಯುವ ದೇವ-ಮಾನವ-ನರಕ-ತಿರ್ಯಕ್— ಈ ನಾಲ್ಕೂ ಗತಿಗಳಲ್ಲಿ ನಿನಗೆ ಎಳ್ಳಷ್ಟೂ ಸುಖವಿಲ್ಲ. ಈ ಸಂಸಾರ ಅಸಾರವೆಂಬುದನ್ನು ಮನದಲ್ಲಿ ನೇರವಾಗಿ ಭಾವಿಸು.

'ಹಿಂಸೆ, ಅಸತ್ಯ, ಕಳವು, ಪರಸ್ತ್ರೀಗಮನ ಪರಿಗ್ರಹಗಳು. ದ್ಯೂತ, ಮದ್ಯ, ಮಾಂಸಗಳ ವ್ಯಸನಗಳು ಮಾನವರನ್ನು ಬಂಧಿಸಿ ಈ ಭವಸಾಗರದಲ್ಲಿ ಮುಳುಗಿಸುವವು.

'ನನ್ನ ಕೆನ್ನೆಯ ಮೇಲಿನ ಬಿಳಿ ಕೂದಲುಗಳು ಯಮನು ಅಟ್ಟಿ ಕೊಲ್ಲುವುದನ್ನೂ, ನಮ್ಮ ಸಂಸಾರದ ಅಸಾರತೆಯನ್ನೂ ಮೈನೀರಿಳಿಯುವ ಹಾಗೆ ಹೆದರಿಸಿ ತೋರಿದವು.

'ಹಿತಕರವಾದ ಜಿನಮತವನ್ನು ಸ್ವೀಕರಿಸದೆ ನರಕಗತಿಯನ್ನು ಸ್ವೀಕರಿಸುವುದೇ ?

'ಈ ನರಕ ತಿರ್ಯಕ್ ಗತಿಗೆ, ಈ ಮನುಷ್ಯ ದೇವಗತಿಗೆ ಹೇಸಿದ್ದೇನೆ. ಆದುದರಿಂದ ದರ್ಶನದಿಂದ, ಜ್ಞಾನದಿಂದ ಶೋಭಿಸುವ ಪರಮಸ್ಥಾನವಾದ ಪಂಚಮಗತಿಯಾದ ಮೋಕ್ಷವನ್ನು ಪಡೆಯುವೆನು.

'ಮುಪ್ಪು ಎಂಬ ಸ್ತ್ರೀ ಹೆಂಗಸರ ಸವತಿಯಾಗಿದ್ದಾಳೆ. ನಿಯತಿ ಎಂಬ ಸ್ತ್ರೀ ಆ ಮುಪ್ಪಿನ ಸವತಿಯಾಗಿದ್ದಾಳೆ. ಆ ಸವತಿಯನ್ನೂ ಹಿಂಗಿಸಿ ನಾನು ಮುಕ್ತಿ ಎಂಬ ಸ್ತ್ರೀಯ ಜೊತೆ ವಾಸ ಮಾಡುವಂತಾಗಲಿ.

'ನಾಯಿಯ ಹಾಲು, ಕಳ್ಳಿಯ ಹಾಲು ಹಸುವಿನ ಹಾಲಿಗೆ ಸಮಾನ ವಾಗದಂತೆ ಅನ್ಯರು ಉಪದೇಶಿಸುವ ಧರ್ಮಗಳು ಶ್ರೇಷ್ಠ ಜಿನಧರ್ಮವನ್ನು ಹೋಲಲಾರವು.

'ನಮ್ಮ ಶಕ್ತಿ, ಆಯುಷ್ಯ, ದೇಹ ಇವೆಲ್ಲ ದಿನದಿನಕ್ಕೆ ಕುಂದುವವು. ಆದುದರಿಂದ ಈ ವಿಷಯಸುಖಗಳಿಗೆ ನಾನು ಬೇಸತ್ತಿದ್ದೇನೆ. ನನಗೆ ಅಕ್ಷಯ ಸುಖ ಲಭಿಸುವಂತಾಗಲಿ.

'ಊಟದಿಂದ, ಆಟದಿಂದ, ಇಂಪಾದ ಗಾಯನದಿಂದ, ಇಷ್ಟವಾದ ಸ್ಪರ್ಶದಿಂದ, ಮಧುರ ವಿಲಾಸದಿಂದ ದೊರೆಯುವ ಸುಖವು ಇಂದ್ರಿಯಗಳ ಮೂಲಕ ದೊರೆಯುವ ಸುಖವಾಗಿದೆ. ಈ ವಿಷಯಸುಖಕ್ಕೆ ಒಲಿಯದೆ ಅತೀಂದ್ರಿಯ ಸುಖಕ್ಕೆ ಬಾಗುವೆ.'

'ಕೆಲವರು ಕರಗುವ ಮುಗಿಲನ್ನು, ಕೆನ್ನೆಯ ಮೇಲಿನ ನರೆದ ಕೂದ ಲನ್ನು ಕಂಡು ಪರಮತಪದಲ್ಲಿ ಮಗ್ನರಾದರು.'

'ನುಡಿಯದೆ, ಮಾತನಾಡದೆ, ಕೇಳದೆ, ಅಳುಗಾಡದೆ ಸಮತಾ ಭಾವ ದಿಂದ ಸಂಯಮದಿಂದ ಕೂಡಿ ಹೆಜ್ಜೆ ಹೆಜ್ಜೆಗೂ ಧರ್ಮಶುಕ್ಲಕ್ಕೆ ದಾನಮಾಡಿ ಕೊಡದೆ ಆರ್ತರೌದ್ರಧ್ಯಾನಗಳು ಅಡ್ಡಿಮಾಡುವವು.'

'ಇವು ನಮ್ಮ ಆನೆ, ಇವು ನಮ್ಮ ಕುದುರೆ, ಇವರು ನನ್ನ ಅರಸಿಯರು, ಇವರು ನನ್ನ ಮಕ್ಕಳು ಎಂಬ ಮಾತು ಮನಸ್ಸನ್ನು ಆಕ್ರಮಿಸಿದವರು ಬ್ರಮೆ ಯುಳ್ಳವರು. ರಾಜರು ಯಮಪುರಕ್ಕೆ ಹೋಗುವಾಗ ಅವರ ಜೊತೆ ಇವು ಗಳಲ್ಲಿ ಯಾವವೂ ಹೋಗುವದಿಲ್ಲ. ಒಬ್ಬರೇ ಹೋಗುತ್ತಾರೆ.'

—ಹೀಗೆಂದು ವಿಮಲವಾಹನನು ಯೋಚಿಸಿ, ಶರೀರದ ಅನಿತ್ಯತೆ ಯನ್ನೂ, ಆತ್ಮದ ಜಡತ್ವವನ್ನೂ, ಭೋಗದ ಕ್ಷಣಿಕತೆಯನ್ನೂ ತನ್ನ ಮನದಲ್ಲಿ ನೆನಿಸಿಕೊಂಡು, ಸಂಸಾರಭೋಗ, ಶರೀರಭೋಗಗಳಲ್ಲಿ ವೈರಾಗ್ಯವನ್ನು ತಾಳಿ ದನು. ತನ್ನ ಸಮಸ್ತ ಐಶ್ವರ್ಯವನ್ನು ಹುಲ್ಲುಕಡ್ಡಿಗೆ ಸಮಾನವೆಂದು ಭಾವಿಸಿ, ಅದನ್ನು ತ್ಯಜಿಸುವ ನಿರ್ಧಾರ ಕೈಕೊಂಡನು. ಆಗ ಅವನ ಮನಸ್ಸು ಮೋಕ್ಷಲಕ್ಷ್ಮಿಯಲ್ಲಿ ಅನುರಕ್ತವಾಯಿತು. ಹೀಗೆ ಜೈನ ಧರ್ಮೋದ್ಧಾರಿಯೂ,

ಭವ್ಯರೆಂಬ ತಾವರೆಗಳ ಸಮೂಹಕ್ಕೆ ಸೂರ್ಯನೂ, ವಿನಯನಿಧಿಯೂ, ಸ್ನೇಹವತ್ಸಲನೂ ಆದ ವಿಮಲವಾಹನನು ಒಂದು ದಿನ ತನ್ನ ಮಂತ್ರಿ, ಪ್ರಮುಖರನ್ನೆಲ್ಲ ಕರೆಸಿಕೊಂಡು, ಅವರಿಗೆ ತನ್ನ ನಿರ್ಧಾರವನ್ನು ತಿಳಿಸಿ, ತನ್ನ ಮಗನಿಗೆ ವೈಭವದಿಂದ ಪಟ್ಟವನ್ನು ಕಟ್ಟಿ, ರಾಜ್ಯಭಾರವನ್ನು ಒಪ್ಪಿಸಿ, ತಾನು ದೀಕ್ಷೆಯನ್ನು ಕೈಕೊಂಡು ವಿಜಯಿಯಾಗಲು ನಿಶ್ಚಯಿಸಿದನು.

ಆಗ ಕಾಲಲಬ್ಧಿ, ಕರಣಲಬ್ಧಿ, ಉಪಶಮಲಬ್ಧಿಗಳು ಲಭಿಸಿದ ವಿಮಲವಾಹನನು ಸಂಸಾರವಿಮುಖನಾಗಿ ದೀಕ್ಷಾಭಿಮುಖನಾಗಿ ಹಲವಾರು ಅರಸುಮಕ್ಕಳೊಂದಿಗೆ ಜಿನದೀಕ್ಷೆ ವಹಿಸಿ ತಪಸ್ಸಿನಲ್ಲಿ ನಿರತನಾದನು. ಅವನ ಮನಸ್ಸಿನಲ್ಲಿ ಪರಮಾಗಮ ಭಾವನೆ, ನಾಲಿಗೆಯ ಮೇಲೆ ಜಿನೇಂದ್ರ ನಾಮಸ್ತುತಿ, ಕರಣತ್ರಯಗಳಲ್ಲಿ ಪರಿಶುದ್ಧತೆಗಳಿದ್ದವು. ಹೀಗೆ ತೀರ್ಥಂಕರ ನಾಮಕರ್ಮಕ್ಕೆ ಕಾರಣವಾದ ಹದಿನಾರು ಭಾವನೆಗಳನ್ನು ಭಾವಿಸಿದನು. ದರ್ಶನವಿಶುದ್ಧಿಯನ್ನೂ, ವಿನಯಸಂಪನ್ನತೆಯನ್ನೂ ತಾಳಿ ಸದಾ ಜಿನೇಂದ್ರನನ್ನು ಸ್ತುತಿಸುತ್ತ ತೀರ್ಥಂಕರ ಪುಣ್ಯವನ್ನು ಕಟ್ಟಿಸಿಕೊಂಡು, ಸಮಾಧಿ ಮರಣದಿಂದ ದೇಹ ತ್ಯಜಿಸಿ ವಿಜಯದಲ್ಲಿ ಅಹಮಿಂದ್ರನಾಗಿ ಸಾಗರೋಪಮ ಆಯುಷ್ಯವನ್ನು ಕಳೆದನು.

೩ ಅಜಿತ ತೀರ್ಥಂಕರ ಉದಯ : ಗರ್ಭಾವತರಣ ಕಲ್ಯಾಣ

ವಿಮಲವಾಹನ ಭವವನ್ನು ಕಳೆದು, ಪಂಚಾನುತ್ತರಗಳಲ್ಲಿಯ 'ವಿಜಯ'ದಲ್ಲಿ ಅಹಮಿಂದ್ರನಾಗಿ ಸ್ವರ್ಗಸುಖವನ್ನು ಅನುಭವಿಸಿದ ಆತ್ಮವೇ ಭರತಕ್ಷೇತ್ರದಲ್ಲಿ ಎರಡನೆಯ ತೀರ್ಥಂಕರನಾಗಿ ಉದಯವಾಗಲಿತ್ತು. ಭವ್ಯರೆಂಬ ಕಮಲಗಳ ಬಂಧುವಾದ ಸೂರ್ಯನು ಹುಟ್ಟಿರುವದನ್ನು ತಿಳಿಸಲೆಂಬಂತೆ ಇಂದ್ರನ ಆಸನ ಕಂಪವಾಯಿತು. ಆಗ

ಅಜಿತನಾಥನು ಜಿತಶತ್ರು ನೃಪತಿಗೆ ಮಗನಾಗಿ ಹುಟ್ಟುವುದನ್ನು ಅರಿತ ಇಂದ್ರನು ಕುಬೇರನಿಗೆ ಆಜ್ಞಾಪಿಸಿದನು. ಅದರಂತೆ ಕುಬೇರನು ಜಿತಶತ್ರುವಿನ ಅರಮನೆಯ ಮೇಲೆ ಆರು ತಿಂಗಳ ವರೆಗೆ ಮೂರು ಹೊತ್ತೂ ಚಿನ್ನ, ಮುತ್ತು, ರತ್ನಗಳ ಮಳೆಗರೆದನು. ವಿಜಯಸೇನಾ ದೇವಿಯು ಗರ್ಭ ಸಂಶೋಧನೆಗಾಗಿ ಶ್ರೀ, ಹ್ರೀ, ಕೀರ್ತಿ, ಧೃತಿ, ಬುದ್ಧಿ, ಲಕ್ಷ್ಮಿ ಮೊದಲಾದ ದೇವಲೋಕದ ಅನೇಕ ದೇವಿಯರನ್ನು ಇಂದ್ರನು ನಿಯಮಿಸಿದನು. ಅವರು ಬಂದು ಗರ್ಭಶುದ್ಧಿ ಮಾಡಿ, ಮಧುರ ಸ್ವರದಲ್ಲಿ ರಸವತ್ತಾಗಿ ಹಾವಭಾವದೊಂದಿಗೆ ಹಾಡಿ, ದಿವ್ಯವಸ್ತು, ಸುಗಂಧ, ಫಲ, ಪುಷ್ಪಗಳಿಂದ ಅಲಂಕರಿಸಿ ಸೇವೆ ಮಾಡಿದರು.

ಆ ಲತಾಂಗಿಯು ಪುಷ್ಪವತಿಯಾಗಿ ಪರಮ ಪವಿತ್ರವಾದ ಜಂಗಮ ಲತೆಯಂತೆ ಇದ್ದಳು. ಮನೆಗೆ ಅತಿಥಿಗಳು ಬರುವ ಮುಂಚೆ ಮನೆಯನ್ನು ಶುಚಿಗೊಳಿಸುವಂತೆ ಅಜಿತತೀರ್ಥಂಕರನು ಬರಲಿರುವನೆಂದು ದೇವತೆಗಳು ಗರ್ಭಶೋಧವನ್ನು ಮಾಡಿದರು. ವಿಜಯಸೇನಾ ದೇವಿಯು ತನ್ನ ದಿವ್ಯವಾದ ಶಯ್ಯಾಗೃಹದ ರತ್ನಖಚಿತ ಮಂಚದ ಮೇಲೆ ಮಲಗಿರಲು ಜೇಷ್ಠಮಾಸದ ಅಮಾವಾಸ್ಯೆಯ ರೋಹಿಣಿ ನಕ್ಷತ್ರದಂದು ಬೆಳಗಿನ ಜಾವದಲ್ಲಿ ಆನೆ, ಗಿಳಿ, ಎತ್ತು, ಸಿಂಹ, ಲಕ್ಷ್ಮಿ, ಹೂಮಾಲೆ, ಚಂದ್ರ, ಸೂರ್ಯ, ಜೋಡು ಮೀನು, ಪೂರ್ಣ ಕುಂಭಗಳು, ಸರೋವರ, ಸಮುದ್ರ, ಸಿಂಹಾಸನ, ಸುರವಿಮಾನ, ಸರ್ಪಮನೆ, ಹೊಳೆಯುವ ರತ್ನಕಾಂತಿ ಅಗ್ನಿ. ಈ ಹದಿನಾರು ವಸ್ತುಗಳನ್ನು ಕನಸಿನಲ್ಲಿ ಕಂಡಳು. ಅದರೊಂದಿಗೆ ಐರಾವತವು ತನ್ನ ಮುಖವನ್ನು ಪ್ರವೇಶಿಸಿದಂತೆ ಕನಸು ಕಂಡಳು.

ಅಷ್ಟರಲ್ಲಿ ಮಂಗಳಕರ ಪಾತಕರ ಪುಣ್ಯಧ್ವನಿಯಿಂದ ಅಂತಃಪುರದ ಪುರಂಧ್ರಿಯರ ಮಂಗಳಗೇಯದಿಂದ ಎಚ್ಚೆತ್ತಳು. ನಿದ್ರೆ ಕಳೆಯಿತು. ಸ್ನಾನ ಅಲಂಕಾರ ಮುಂತಾದ ನಿತ್ಯವಿಧಿಗಳನ್ನು ಮುಗಿಸಿ, ತಾನು ಕಂಡ ಕನಸುಗಳನ್ನು ಪತಿಗೆ ತಿಳಿಸಲೆಂದು ಬಂದಳು. ಪತಿಗೆ ವಂದಿಸಿ, ಸಿಂಹಾಸನದ ಅರ್ಧ ಭಾಗದಲ್ಲಿ ಕುಳಿತುಕೊಂಡಳು. ತನ್ನ ಕನಸುಗಳನ್ನು ಕ್ರಮವಾಗಿ ವಿವರಿಸಿದಳು. ಆಗ ದೇಶಾವಧಿ ಬೋಧವನ್ನು ಅರಿತ ಮಹಾರಾಜನು ಆ ಶುಭಸ್ವಪ್ನಗಳ

ಫಲವನ್ನು ಅರಿತು, ತನ್ನ ಜನ್ಮ ಸಫಲವಾಯಿತೆಂದು ಭಾವಿಸಿ 'ಕುಲತಿಲಕನೂ ಜಗತ್ತಿಗೇ ತಿಲಕಪ್ರಾಯನೂ ಆದವನು ನಮಗೆ ಮಗನಾಗಲಿರುವನು. ಅವನು ನಮ್ಮ ಜೈನ ಧರ್ಮವನ್ನು ಬೆಳಗುವನು' ಎಂದು ಹದಿನಾರು ಶುಭಸ್ವಪ್ನಗಳ ಫಲವನ್ನು ತಿಳಿಸಿದನು.

ಮಹಾರಾಜನ ವಚನವೆಂಬ ಅಮೃತದಿಂದ ವಿಜಯಸೇನಾಮಹಾದೇವಿಯು ಆಗಲೇ ತನ್ನ ಗರ್ಭದಲ್ಲಿ ತೀರ್ಥಂಕರನ ಅಂಕುರವಾದಂತೆ, ಅಂದೇ ಮಗನನ್ನು ಹೆತ್ತಂತೆ ಸಂತೋಷಪಟ್ಟಳು.

ಉತ್ಸರ್ಪಿಣಿ, ಅವಸರ್ಪಿಣಿಯೆಂಬ ಕಾಲದ ಮೂರು ಮೂರು ಭೇದಗಳಲ್ಲಿಯ ದುಃಷಮ ಸುಷಮವೆಂಬ ನಾಲ್ಕನೆಯ ಕಾಲದಲ್ಲಿ, ಜ್ಯೇಷ್ಠಮಾಸದ ಅಮಾವಾಸ್ಯೆಯಂದು ರೋಹಿಣಿ ನಕ್ಷತ್ರದ ಬೆಳಗಿನಜಾವದಲ್ಲಿ, ವಿಜಯಸೇನಾ ಮಹಾದೇವಿಯ ಗರ್ಭದಲ್ಲಿ ವಿಮಲವಾಹನನಾದ ಅಹಮಿಂದ್ರನು ಸ್ವರ್ಗಾವತರಣ ಮಹಾಕಲ್ಯಾಣದೊಂದಿಗೆ ಇಳಿದು, ಸರೋವರದಲ್ಲಿ ಚಂದ್ರನು ನೆಲಸುವಂತೆ ನೆಲೆನಿಂತನು, ಹಾಗೂ ದಿನದಿನವೂ ಬೆಳೆಯುತ್ತಿದ್ದನು.

ವಿಜಯಸೇನಾ ಮಹಾದೇವಿಯು ಗರ್ಭವತಿಯಾದರೂ ಸುಂದರವಾದ ವಳಿತ್ರಯಗಳು ಮಾಯವಾಗಲಿಲ್ಲ. ಮುಖ ಬಿಳಚಿಕೊಳ್ಳಲಿಲ್ಲ, ತೆಳ್ಳನೆಯ ಹೊಟ್ಟೆ ದಪ್ಪವಾಗಲಿಲ್ಲ, ಕುಚಾಗ್ರದಲ್ಲಿ ಕಪ್ಪು ಕಾಣಲಿಲ್ಲ. ಶುದ್ಧ ಸ್ಫಟಿಕ ಪಾತ್ರದಲ್ಲಿ ಬೆಳಗುವ ಮಣಿದೀಪದಂತೆ, ತಪ್ತಕಾಂಚನ ಕಾಂತಿಯುಕ್ತನಾದ ತೀರ್ಥಂಕರನು ಆಕೆಯ ಗರ್ಭದಲ್ಲಿ ಮೂಡಿ ವಿಜಯಸೇನಾ ಮಹಾದೇವಿಗೆ ಯಾವ ಗರ್ಭಬಾಧೆಯೂ ಗೋಚರವಾಗಲಿಲ್ಲ. ಇದನ್ನು ಕಂಡ ಜನತೆಗೆ ಆಶ್ಚರ್ಯವಾಯಿತು. ಪರಮೇಶ್ವರನೂ, ತ್ರಿಲೋಕಕ್ಕೂ ಒಡೆಯನಾದ ಅಜಿತನಾಥನನ್ನು ತನ್ನ ಗರ್ಭದಲ್ಲಿ ಧರಿಸಿದ ಆ ಮಹಾದೇವಿಯ ಮಹಿಮೆ ಅಗಾಧವಾದುದು! ಜಿನೋತ್ತಮರ ಹೊಗಳಿಕೆಯಲ್ಲಿ ಅವಳು ಗುಣವಂತೆಯಾಗಿದ್ದಳು. ಆಹಾರ, ಅಭಯ, ಭೈಷಜ್ಯ, ಶಾಸ್ತ್ರದಾನಗಳೂ, ಶೀಲವೂ ಅವಳಿಗೆ ಅಲಂಕಾರವಾಗಿದ್ದವು. ರತ್ನತ್ರಯಗಳಿಂದ ಅಲಂಕೃತಳಾದ ಅವಳಿಗೆ, ಆ ತೀರ್ಥಂಕರ ಜನನಿಗೆ ತೀರ್ಥದರ್ಶನ ಪಡೆಯಬೇಕೆಂಬ ಬಯಕೆಯಾಯಿತು. ಹೀಗೆ ಭವ್ಯರಿಗೆ

ಸಂತೋಷವಾಗುವಂತೆ ಮಾಘ ಶುದ್ಧ ದಶಮಿಯ ಪವಿತ್ರ ದಿನ, ಪ್ರಜಾಪತಿ ಯೋಗದಲ್ಲಿ, ರೋಹಿಣಿ ನಕ್ಷತ್ರದಲ್ಲಿ ಸಮುದ್ರಘೋಷಕ್ಕೆ ಸಮಾನಾದ ಇಂದ್ರನ ವಾದ್ಯಧ್ವನಿ ಮೊಳಗುತ್ತಿದ್ದಿತು. ಆಗ ಇಕ್ಷ್ವಾಕುವಂಶದ ಉದಯೋನ್ನತ ಪರ್ವತದ ತುದಿಯಲ್ಲಿ ಅಜಿತ ತೀರ್ಥಂಕರನೆಂಬ ಸೂರ್ಯನ ಉದಯವಾಯಿತು.

•••

೬ ಜನ್ಮಾಭಿಷೇಕ ಕಲ್ಯಾಣ: ಇಂದ್ರನ ತಾಂಡವನೃತ್ಯ

ಶ್ರೀಕಾಂತೆಗೂ, ಮೋಕ್ಷ ಶ್ರೀಕಾಂತೆಗೂ ರಾಜನೂ, ಜಿನಧರ್ಮಕ್ಕೆ ಪ್ರಾಕಾರಸ್ವರೂಪನೂ, ಪುಣ್ಯಚರಿತನೂ, ಅಪಗತದುರಿತನೂ ಆದ ಅಜಿತ ಸ್ವಾಮಿಯು ಜನಿಸಿದನು. ಸುವರ್ಣ ವರ್ಣವನ್ನು ಹೊಂದಿದ ತೇಜೋಮಯ ವಾದ ಅವನು ಪಾಪನಾಶನಾಗಿದ್ದು, ಹದಿನಾಲ್ಕು ಲಕ್ಷ ವರ್ಷ ದೀರ್ಘಾಯುಷ್ಯವುಳ್ಳವನಾಗಿದ್ದನು. ಮತಿ, ಶ್ರುತಿ, ಅವಧಿ, ಜ್ಞಾನಗಳನ್ನು ಜನ್ಮತಃ ಪಡೆದಿದ್ದನು. ಅವನ ಮುಖವನ್ನು ನೋಡಿದ ವಿಜಯಸೇನಾದೇವಿಯು ಸುಗ್ಗಿಯ ಕಾಲದಲ್ಲಿ ಚಿಗುರಿದ ಹೊಸ ಮಾವಿನ ಬಳ್ಳಿಯಂತೆ ಕಂಗೊಳಿಸಿದಳು. ಜಿತಶತ್ರು ಮಹಾರಾಜನೂ ಅಕ್ಷಯ ನಿಧಿಯನ್ನು ಪಡೆದ ಬಡವನಂತೆ, ದೇವೇಂದ್ರ ಪದವಿಯನ್ನೇ ಪಡೆದಂತೆ ಸಂತೋಷಪಟ್ಟನು.

ಆ ಕುಮಾರನ ಉದಯದಿಂದ ಜಗತ್ತು ನಾನಾರೀತಿಯ ಆನಂದವನ್ನು ಅನುಭವಿಸಹತ್ತಿತು. ಮಂಗಳವಾದ್ಯಗಳ ಧ್ವನಿ ಅಷ್ಟದಿಕ್ಕುಗಳವರೆಗೆ ಹಬ್ಬಿತು. ಕನಕಮಣಿ ತೋರಣಗಳಿಂದ, ಛತ್ರಚಾಮರಗಳಿಂದ ಅರಮನೆ ಸಿಂಗರಿಸಲ್ಪಟ್ಟಿತು. ಅರಮನೆ ಹಾಗೂ ರಾಜಬೀದಿಗಳು ಬಣ್ಣದ ಓಕುಳಿಯ ಗಿಂಡಿಗಳಿಂದ ಗಣಿಕಾಸ್ತ್ರೀಯರ ನರ್ತನದಿಂದ, ಚಾರಣರ ಕಂದವೃತ್ತಗಳಿಂದ ಶೋಭಿಸಿದವು. ವೃದ್ಧರು ಸಂತೋಷದಿಂದ ಕುಣಿದಾಡುತ್ತಿದ್ದರೆ, ಚಿಕ್ಕವರು ಅವರ ಕಾಲ ಸಂದಿಯಲ್ಲಿಂದ ನುಸುಳುತ್ತಿದ್ದರು. ವನಿತೆಯರು ಕನಕ ಚಾಮರಗಳನ್ನು

ಬೀಸುತ್ತಿದ್ದರು. ಕಳಶ-ಕನ್ನಡಿ, ಫಲ-ಕುಸುಮಗಳನ್ನು ಕೈಯಲ್ಲಿ ಹಿಡಿದು ಕೊಂಡ ಶೃಂಗಾರಭರಿತ ಸುವಾಸಿನಿಯರು ಸಂಭ್ರಮದಿಂದ ಆಲಿವಾಡುತ್ತಿದ್ದರು. ಅಯೋಧ್ಯೆಯು ಸಡಗರದ ತವರುಮನೆಯಾಯಿತು.

ಆಗ ಎರಡನೆಯ ತೀರ್ಥಂಕರನೆಂಬ ಸೂರ್ಯನ ಉದಯವನ್ನು ತಿಳಿಸಲೆಂಬಂತೆ ದೇವಲೋಕದಲ್ಲಿ ಇಂದ್ರನ ಆಸನ ಕಂಪನವಾಯಿತು. ದೇವೇಂದ್ರನು ವಿಷಯವನ್ನು ಅರಿತನು. ಅದರಂತೆ ಶಂಖನಾದದಿಂದ ಭವನ ವಾಸಿಗರು, ಭೇರಿರವದಿಂದ ವ್ಯಂತರರು, ಸಿಂಹಧ್ವನಿಯಿಂದ ಜ್ಯೋತಿಷ್ಕರು, ಘಂಟಾನಿನಾದದಿಂದ ಕಲ್ಪಾಮರರು ತಿಳಿದು ತಮ್ಮ ಆಸನಗಳಿಂದ ಇಳಿದು ಅಲ್ಲಿಂದಲೇ ತೀರ್ಥಂಕರನಿಗೆ ವಂದಿಸಿದರು. ತರುವಾಯ ಸೌಧರ್ಮೇಂದ್ರ, ಈಶಾನೇಂದ್ರ, ಸನತ್ಕುಮಾರ, ಮಾಹೇಂದ್ರ, ಬ್ರಹ್ಮ-ಬ್ರಹ್ಮೋತ್ತರ ಮೊದಲಾದ ಕಲ್ಪೇಂದ್ರರು ಆನೆ, ಕುದುರೆ, ವೃಷಭ, ರಥ, ಗಂಧರ್ವ, ನರ್ತಕಿ ಕಾಲಾಳುಗಳೊಂದಿಗೆ ದೇವೇಂದ್ರನು ಶಚಿದೇವಿಯೊಂದಿಗೆ ಐರಾವಣ ವೆಂಬ ಮಹಾಗಜವನ್ನೇರಿ ಅಜಿತನಾಥನ ಜನ್ಮಾಭಿಷೇಕ ಕಲ್ಯಾಣ ಪೂಜೆಯನ್ನು ಮಾಡಲೆಂದು ಅಯೋಧ್ಯೆಗೆ ಬಂದನು.

ದೇವಲೋಕದಿಂದ ಬರುತ್ತಿದ್ದ ದೇವತೆಗಳ ಹೊಳೆಯುವ ಶ್ವೇತಛತ್ರಗಳ ಸಮೂಹದಿಂದ ಆಕಾಶಮಾರ್ಗವು ದೇವಗಂಗೆಯಂತೆ ಶೋಭಿಸಿತು, ದೇವ ಲೋಕ, ನಾಗಲೋಕಗಳೆರಡೂ ಹಾಳುಬಿದ್ದು, ಅವರೆಲ್ಲ ಒಟ್ಟಾಗಿ ಬಂದು ಭೂಲೋಕ ತುಂಬಿ ತುಳುಕಿದಂತೆ ಕಂಡಿತು. ದೇವತಾಸ್ತ್ರೀಯರ ನೃತ್ಯಗಾನವು ಮೊಳಗುತ್ತಿರಲು, ಇಂದ್ರನು ಬಂದು ಜಿನಶಿಶುವಿಗೆ ನಮಸ್ಕರಿಸಿದನು, ಭಗವಂತನಾದ ಅರ್ಹಂತನ ದರ್ಶನದಿಂದ ರೋಮಾಂಚಿತಗೊಂಡನು. ಆನಂದಾಶ್ರುಗಳನ್ನು ಸುರಿಸುತ್ತ, ಬಾಲತೀರ್ಥಂಕನಿಗೆ ಮೂರುಬಾರಿ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ "ಜಿನಮಾತೆಗೆ ಮಾಯಾನಿದ್ರೆಯನ್ನು ಉಂಟುಮಾಡಿ ತೀರ್ಥಂಕರನನ್ನು ತನ್ನಿರಿ" ಎಂದು ಶಚಿದೇವಿಗೆ ಹೇಳಿದನು ಅದರಂತೆ ಶಚಿದೇವಿಯು ಸೂತಿಕಾಗೃಹವನ್ನು ಹೊಕ್ಕು ಮಾಯಾಶಿಶುವನ್ನು ಅಲ್ಲಿಟ್ಟು, ಶುಭಲಕ್ಷಣಗಳಿಂದ, ಮುಖಚಂದ್ರಕಾಂತಿಯಿಂದ ಶೋಭಿಸುತ್ತಿದ್ದ ಜಿನಬಾಲಕ ನನ್ನು ಕಣ್ಣಿನ ಹಸಿವು ಹಿಂಗುವವರೆಗೆ ನೋಡಿ, ಪ್ರೀತಿಯಿಂದ ಮಗುರಾಗಿ ಎತ್ತಿಕೊಂಡು ಬಂದಳು.

ಅಷ್ಟಮಂಗಳ ಧಾರಿಣಿಯರಾದ ದೇವತಾಸ್ತ್ರೀಯರೊಂದಿಗೆ ತಂದ ಆ ಬಾಲಕನನ್ನು, ಅಮೌಲ್ಯ ರತ್ನವನ್ನು ಕೊಡುವಂತೆ ದೇವೇಂದ್ರನ ಕೈಗೆ ಕೊಟ್ಟಳು. ಆಗ ಇಂದ್ರನು ಆ ಮಗುವಿಗೆ ಪುನಃ ಪುನಃ ನಮಸ್ಕರಿಸಿ, ತಲೆಯ ಮೇಲೆ ಎತ್ತಿ ಇಟ್ಟುಕೊಂಡು, ಹಣೆಯ ಮೇಲೆ ಇಟ್ಟುಕೊಂಡು, ಎದುರಿಗೆ ಇಟ್ಟುಕೊಂಡು. ಏನ್ನುಮಾಡಿದರೂ ಆ ಮಗುವಿನಿಂದ ಅಗಲಲು ಮನಸ್ಸಾಗದ ಸ್ಥಿತಿಯಲ್ಲಿದ್ದನು.

ಜಿನಶಿಶುವಿನ ಮುಖಕಮಲದ ದರ್ಶನದಿಂದ ಉತ್ಸಾಹ ಸಂತೋಷ ಪುಟಾದ ದೇವತೆಗಳ ಮುಖದಿಂದ ಜಯಜಯಕಾರ ಧ್ವನಿಗಳು ಹೊರ ಹೊಮ್ಮಿದವು. ಅಲ್ಲದೆ 'ಆದಿತೀರ್ಥಂಕರನನ್ನು ಪಡೆದ ನಾಭಿ–ಮರುದೇವಿ ಯಂತೆಯೇ ಅಜಿತನಾಥನನ್ನು ಪಡೆದ ಜಿತಶತ್ರು–ವಿಜಯಸೇನೆಯರು ಪುಣ್ಯ ದಂಪತಿಗಳಲ್ಲವೆ ?' ಎಂದು ಹೊಗಳಿದರು.

ಆಗ ದೇವೇಂದ್ರನು ಅಜಿತನಾಥನನ್ನು ತನ್ನ ಐರಾವತದ ಮೇಲೆ ಕುಳ್ಳಿ ರಿಸಿಕೊಂಡು ಮೇರುಪರ್ವತದ ಕಡೆಗೆ ಹೊರಟನು. ಆ ದಿವಿಜಗಜವು ನವ ಕನಕದಿಂದ ಅಲಂಕರಿಸಲ್ಪಟ್ಟು,ಮಣಿಗಣದಿಂದ ಅಲಂಕೃತವಾಗಿ ಮನಮೋಹಕ ವಾಗಿತ್ತು. ಆ ಐರಾವತಕ್ಕೆ ಮೂವತ್ತೆರಡು ಸೊಂಡಿಲುಗಳು, ಒಂದೊಂದು ಸೊಂಡಿಲಿನಲ್ಲಿ ಎಂಟೆಂಟು ದಂತಗಳು, ಒಂದೊಂದು ದಂತವಲ್ಲಿ ಒಂದೊಂದು ತಾವರೆಯ ಕೊಳವು ಶೋಭಿಸುತ್ತಿದೆ. ಪ್ರತಿಯೊಂದು ಕೊಳವಲ್ಲಿ ಮೂವ ತ್ತೆರಡು ಕಮಲಗಳೂ, ಪ್ರತಿಯೊಂದು ಕಮಲಗಳಿಗೆ ಮೂವತ್ತೆರಡು ಎಸಳು ಗಳು, ಒಂದೊಂದು ಎಸಳುಗಳ ಮೇಲೆ ಮೂವತ್ತೆರಡು ಜನ ಅಪ್ಸರೆಯರು ನರ್ತಿಸುತ್ತಿದ್ದರು.

ದ್ವಿತೀಯಕಲ್ಪದ ಅಮರರು ಜಿನಬಾಲಕನಿಗೆ ಕೊಡೆಯನ್ನು ಹಿಡಿದಿ ದ್ದರು, ತೃತೀಯ ಕಲ್ಪದ ಈಶ್ವರ ಮಾಹೇಶ್ವರರು ಚಾಮರವನ್ನು ಹಿಡಿದಿ ದ್ದರು. ಉಳಿದವರು ಐರಾವತದ ಎರಡೂ ಬದಿಗಿದ್ದು ಭಕ್ತಿಯಿಂದ ಕೈಮುಗಿದು ಸಾಗಿದ್ದರು. ಹೀಗೆ ವೈಭವದಿಂದ ಸಾಗಿ ಪ್ರಸಿದ್ಧವಾದ ಮೇರು ಪರ್ವತದ ಬಳಿಗೆ ಆ ಐರಾವತವು ಬರಲು ದೇವತೆಗಳ ವಾದ್ಯಘೋಷವು ಮೊಳಗಿತು.

ಸೊಬಗಿನಿಂದ ಕೂಡಿದ ಮೇರುಪರ್ವತವು ಕಾಡಾನೆಗಳ ಧ್ವನಿಯ ಮೂಲಕ ತನ್ನ ಆನಂದೋದ್ಗಾರಗಳನ್ನು ಸೂಚಿಸುತ್ತ, ಶ್ರೇಷ್ಠವಾದ ರತ್ನರಾಶಿಗಳ ಮೂಲಕ ತನ್ನ ವಂದನೆಯ ಮಾಲೆಯನ್ನು ಅರ್ಪಿಸುತ್ತ, ಅಗ್ರಭಾಗದಲ್ಲಿ ಹರಿಯುವ ನದಿಯ ಪ್ರವಾಹದ ಮೂಲಕ ತನ್ನ ಧ್ವಜವನ್ನು ಹಾರಿಸುತ್ತ, ಅಜಿತನಾಥನ ಆಗಮನದ ಸಂಭ್ರಮವನ್ನು ಮೆರೆಯಿತು. ಜಿನಶಿಶುವನ್ನು ಹೊತ್ತ ಗಿರಿ ಎಂದು ಆ ವಿಶಾಲ ಮೇರುಗಿರಿಯನ್ನು ಅಮರೇಶ್ವರರು ಮೂರು ಬಾರಿ ಪ್ರದಕ್ಷಿಣೆ ಹಾಕಿ ನಮಸ್ಕರಿಸಿರು. ಆಗ ಪಾಂಡುಕವನದ ನಾನಾ ವಿಧ್ಯದ ಹೂಗಳು ತೀರ್ಥಂಕರನ ಜನ್ಮಾಭಿಷೇಕಕ್ಕೆ ಉಚಿತವಾದ ರೀತಿಯಲ್ಲಿ ವಿಕಸಿತವಾಗಿದ್ದವು.

ಅಲ್ಲಿ ಶತಯೋಜನ ಉದ್ದ, ಅರ್ಧಶತಯೋಜನ ಸಮಸ್ತ ವಿಸ್ತಾರವುಳ್ಳ ಎಂಟು ಯೋಜನದ ವರೆಗೂ ಎತ್ತರವಾದ ಪಾಂಡುಕಶಿಲಾತಳ ಸುಶೋಭಿಸುತ್ತಿತ್ತು. ಅದರ ಮೇಲೆ ಚಿನ್ನದಂತೆ ಹೊಳೆಯುತ್ತಿದ್ದ ಪಲ್ಲಕ್ಕಿಗಳಿಂದಲೂ, ಬೆಳಗುತ್ತಿರುವ ಮುತ್ತಿನ ಹಾರಗಳಿಂದಲೂ, ಶೋಭಾಯಮಾನವಾದ ರತ್ನಮಣಿಗಳಿಂದಲೂ ಅಭಿಷೇಕ ಮಂಟಪವನ್ನು ಅಜಿತನಿಗಾಗಿ ದೇವೇಂದ್ರನು ನಿರ್ಮಿಸಿದನು.

ಆ ಮಂಟಪದ ಮಧ್ಯೆ ಎತ್ತರವಾದ ಸಿಂಹಾಸನದ ಮೇಲೆ ಜಿನಶಿಶುವನ್ನು ಪೂರ್ವಾಭಿಮುಖವಾಗಿ ಇರಿಸಿ, ಸಿಂಹಾಸನದ ಎರಡು ಬದಿಗೆ ಕಲ್ಪೇಶ್ವರರೂ, ಸಮೀಪದಲ್ಲಿ ಅಷ್ಟದಿಕ್ಪಾಲಕರೂ ನಿಂತರು. ಅಲ್ಲಿ ಜಲ, ಗಂಧ, ಅಕ್ಷತ, ಫಲ, ಪುಷ್ಪ, ದೀಪ, ಧೂಪ, ನೈವೇದ್ಯ ಮೊದಲಾದ ಅಷ್ಟ ಮಂಗಲ ದ್ರವ್ಯಗಳು ಜಿನಬಾಲಕನ ಅಭಿಷೇಕಕ್ಕಾಗಿ ಸಿದ್ಧವಾಗಿದ್ದವು. ಜಿನಬಾಲಕನು ಪಾಂಡುಕಶಿಲೆಯ ಪಟ್ಟದ ಮೇಲೆ ಶೋಭಿಸುತ್ತಿರಲು, ಪರಮ ಜಿನನೆಂಬ ಧರ್ಮದ ಮೊಳಕೆಗೆ ನೀರು ಹಾಕಿ ಪುಣ್ಯದ ಫಲವನ್ನು ಪಡೆಯುವದಕ್ಕಾಗಿ ವನಪಾಲಕನಂತೆ ದೇವೇಂದ್ರನು ಜನ್ಮಾಭಿಷೇಕಕ್ಕೆ ಸಿದ್ಧತೆ ಮಾಡಿಕೊಂಡನು.

ಅಜಿತನಾಥ ಬಾಲತೀರ್ಥಂಕರನ ಅಭಿಷೇಕಕ್ಕೆ ಕೊಳ, ಸರೋವರ, ನದಿಗಳ ನೀರು ಸಾಲದು. ಅಗಾಧವಾದ ಕ್ಷೀರಸಾಗರದ ಜಲವೇ ಬೇಕು

ಪ್ರದರ್ಶಿಸಿದರು, ಅವರ ಲಾಸ್ಯ ಹಾಗೂ ದೇವೇಂದ್ರನ ತಾಂಡವವು ರಮಣೀಯವಾಗಿ ಕಂಗೊಳಿಸಿತು.

ಹೀಗೆ ನಿಸ್ಸಂಗಿಯಾದ ಅಜಿತನಾಥನಿಗೆ ಸಂಗೀತ, ನರ್ತನಾದಿ ಪ್ರಸಂಗಗಳಿಂದ ಸೇವೆ ಸಲ್ಲಿಸಿ, ಒಂದೆ ಆದಿತೀರ್ಥಂಕರ ವೃಷಭನಾಥನಿಗೆ ಮಾಡಿದ ರೀತಿಯಲ್ಲಿಯೇ ಅಜಿತನಾಥನಿಗೂ ಮಂದರಾಚಲದ ಮೇಲೆ ಜನ್ಮಾಭಿಷೇಕ ಕಲ್ಯಾಣವನ್ನು ಮಾಡಿದರು. ಬಾಹ್ಯಾಭ್ಯಂತರ ಶತ್ರುಗಳಿಂದ ಸೋಲಿಸಲು ಅಸಾಧ್ಯವಾದ ಅವನಿಗೆ 'ಅಜಿತನಾಥ'ನೆಂಬ ಹೆಸರನ್ನಿಟ್ಟರು. ಹಾಗೂ ಹುಟ್ಟಿನಿಂದಲೇ ತೂತಿರುವ ಕಿವಿಗಳಲ್ಲಿ ಜೋಡು ಕರ್ಣಕುಂಡಲಗಳನ್ನು ತೊಡಿಸಿ, ರತ್ನಾಭರಣಗಳಿಂದ ಅಲಂಕರಿಸಿದರು. ಆಗ ಮಂದರಾದ್ರಿಯು ನಕ್ಷತ್ರ ರಾಶಿಯಿಂದ ಸುತ್ತುವರಿದು ಶೋಭಿಸುವಂತೆ, ಪರಮಶ್ರೀಮತ್ ಅಜಿತನಾಥನ ಪರಮೌದಾರಿಕ ಶರೀರವು ರತ್ನಾಭರಣಗಳಿಂದ ಶೋಭಿಸಿತು.

ಆಗ ಅಷ್ಟದಿಕ್ಕುಗಳಲ್ಲಿಯೂ ದೇವದುಂದುಭಿಗಳು ಮೊಳಗುತ್ತಿರಲು, ಸೌಧರ್ಮೇಂದ್ರನು ಜಿನಶಿಶುವನ್ನು ಮೇರುಗಿರಿಯಿಂದ ಅಯೋಧ್ಯೆಗೆ ತಂದು ತಲೆಬಾಗಿ ವಂದಿಸಿ, ಜಿನಮಾತೆಯ ಎದುರು ಇಟ್ಟು ದಿವ್ಯಾಲಂಕಾರ ಹೂಮಾಲೆಗಳಿಂದ ಗುರುಜನರನ್ನು ಗೌರವದಿಂದ ಪೂಜಿಸಿದನು. ಹಾಗು ಆ ಜಿನ ಮಾತಾಪಿತೃಗಳಿಗೆ ಜನ್ಮಾಭಿಷೇಕ ಕಲ್ಯಾಣ, ಅಜಿತನಾಥನೆಂದು ಹೆಸರು ಇಟ್ಟುದನ್ನು ತಿಳಿಸಿದನು. ಜಿತಶತ್ರು ಮಹಾರಾಜನ ಅರಮನೆಯ ಮುಂದಿನ ಲಕ್ಷ್ಮೀಮಂಟಪದ ಮಧ್ಯದಲ್ಲಿ ರತ್ನಖಚಿತವಾದ ಸಿಂಹಾಸನದ ಮೇಲೆ, ಅದೇ ಆಗ ಉದಯವಾದ ಬಾಲಸೂರ್ಯನಂತಿದ್ದ ಜಿನಬಾಲಕನನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿದನು.

ಆಗ ದೇವ-ಮಾನವರಿಬ್ಬರ ವಾದ್ಯಗಳೂ ಮೊಳಗುತ್ತಿರಲು ದೇವ ಮಾನವರ ಆಕರ್ಷಕ ನೃತ್ಯಗಳು ಕಂಗೊಳಿಸುತ್ತಿರಲು. ಇಂದ್ರನಿಂದ ಇನ್ನೊಮ್ಮೆ ಆನಂದನೃತ್ಯ ಜರುಗಿತು. ಅದನ್ನು ನೋಡುವಾತ ಅಜಿತ ಜಿನೇಶ್ವರ. ನಾಟ್ಯ ಮಾಡುವಾತ ದೇವೇಂದ್ರ. ವಾದ್ಯಸಂಗೀತವನ್ನು ನುಡಿಸುವವರು ದೇವತೆಗಳು

ಆ ದೇವ ಸಂಗೀತಕಾರರು ಹಾಡುತ್ತಿದ್ದರೆಂದಾಗ ಪುಷ್ಪಪ್ರಸವೇ ಉಂಟಾಗುತ್ತದೆ. ಅಂಥ ಸಂದರ್ಭದಲ್ಲಿ ಕುಪಥವು ಕಾಣಲು ಸಾಧ್ಯವೇ ?

ದೇವೇಂದ್ರನ ನಾಟ್ಯವನ್ನು ನೋಡಿ ದಿವಿಜೆಯರು ಸುಮ್ಮನೆ ಕೂಡುವುದು ಸಾಧ್ಯವೇ ? ಅವರೂ ನಾಟ್ಯವಾಡಲಾರಂಭಿಸಿದರು. ಹೀಗೆ ಅವರೆಲ್ಲರ ನಾಟ್ಯದ ಕಿಂಕಿಣಿಧ್ವನಿಯನ್ನು ಕೇಳಿ ತಾಳಲಯಕ್ರಮದಲ್ಲಿ ಐರಾವತವೂ ನರ್ತಿಸಲಾರಂಭಿಸಿತು. ಹೀಗೆ ಎಲ್ಲರ ಮನಸ್ಸಿಗೂ ಆನಂದವುಂಟಾಗುವಂತಹ ಅನಂತ ಫಲಗಳಾದ ಗೀತವಾದ್ಯಗಳಿಂದ ಸೌಧರ್ಮೇಂದ್ರನು ಧರ್ಮಾನುರಾಗವನ್ನು ಮೆರೆವನು.

ದೇವೇಂದ್ರನ ನೃತ್ಯವನ್ನೂ, ನಮಸ್ಕರಿಸುವ ದೇವಕೋಟಿಯನ್ನೂ ಜಿತಶತ್ರುಮಹಾರಾಜನು ನೋಡಿ ನೋಡಿ. ಎಂತಹ ಮಹಿಮೆಯುಳ್ಳ ಮಗನನ್ನು ಪಡೆದೆನೆಂದು ಹೆಮ್ಮೆಯಿಂದ ತನ್ನ ಭುಜಗಳನ್ನು ನೋಡಿಕೊಂಡನು. ಅಜಿತನಾಥನ ಬೆರಳುಗಳನ್ನು ಲೀಲೆಯಿಂದ ಮುಟ್ಟಿ, ಕರಚರಣಗಳನ್ನು ಮೆಲ್ಲ ಮೆಲ್ಲನೆ ಮುಟ್ಟಿ ವಿಜಯಸೇನಾ ಮಹಾದೇವಿಯು ಚಂದ್ರನನ್ನು ಹೋಲುವ ರಾಜಕುಮಾರನ ಮುದ್ದು ಮುಖವನ್ನು ನೋಡಿದಳು. ಸಭೆಯಲ್ಲಿ ಒಂದೇ ಕಣ್ಣಾಗಿ ಅವನನ್ನು ನೋಡುತ್ತಿರಲು, ಆತನನ್ನು ಎತ್ತಿಕೊಳ್ಳಬೇಕೆಂಬ ಮನದ ಬಯಕೆಯನ್ನು ಅವನು ಜಿನೇಶ್ವರನೆಂದು ನೆನೆದು ತಡೆಹಿಡಿದಳು.

ಆಗ ದೇವೇಂದ್ರನು ನಾಟ್ಯವನ್ನು ಮುಗಿಸಿ, ಜಿನಬಾಲಕನನ್ನು ಬಿಟ್ಟು ಅಗಲಿಹೋಗಲು ಮನ ಕಸಿವಿಸಿಗೊಳ್ಳಲು, ಮತ್ತೆ ಮತ್ತೆ ಅವನನ್ನು ಹೊಗಳುತ್ತ ನೋಡುತ್ತ ನಿಂತನು. ಆಗ ಅವನ ಮನದಿಂಗಿತವನ್ನು ಅರಿತ ಪ್ರಧಾನಿಗಳು ತೀರ್ಥಂಕರನಿಗೆ ಇನ್ನೂ ಬೇರೆ ಕಲ್ಯಾಣಗಳು ಇವೆ, ಆಗ ಮತ್ತೆ ದರ್ಶನ ಪಡೆಯುವುದು ಎಂದು ಸಮಾಧಾನ ಹೇಳಲು, ಅಜಿತದೇವನನ್ನು ತನ್ನ ಹೃದಯದಲ್ಲಿರಿಸಿಕೊಂಡು, ದೇವಸಮೂಹದೊಂದಿಗೆ ದೇವಲೋಕಕ್ಕೆ ಹಿಂದಿರುಗಿದನು.

೫ ಬಾಲ್ಯ

ಜಿನಬಾಲಕನನ್ನು ತಾಯಿ-ತಂದೆಗಳಿಗೆ ಒಪ್ಪಿಸಿ ಇಂದ್ರನು ದೇವತೆಗಳೊಂದಿಗೆ ಹಿಂದಿರುಗಿದನು. ಆ ಬಾಲಕನು ತನ್ನ ಬಾಲಲೀಲೆಗಳಿಂದ ಎಲ್ಲರ ಮನವನ್ನು ಸೂರೆಗೊಳ್ಳುತ್ತಿದನು. ಅರಳೆಲೆ, ಪೊಂಗನೂಲು, ಹುಲಿಯುಗುರು, ಮಣಿ, ಕಿಂಕಿಣಿ ಗೆಜ್ಜೆ, ಕುಂಡಲ, ಕಾಲಬಳೆ, ಅಂದುಗೆ, ಕಂಕಣಗಳಿಂದ ಶೋಭಿಸುವ ಆ ಜೋಲ್ಲು ಸುರಿಸುವ ಜಿನಶಿಶುವಿಗೆ ಅಲಂಕಾರಗಳು ಚೆನ್ನಾಗಿ ಹೊಂದಿಕೊಂಡಿದ್ದುವು. ಧರ್ಮದ ಮೊಳಕೆಯಂತೆ, ಮುಕ್ತಿಯ ಸಿರಿಗೆ ಪದ್ಮಾಸನದಂತೆ, ಪುಣ್ಯದ ಅಂಕುರದೆಂಬಂತೆ ಅವನ ವದನದಲ್ಲಿ ಹಲ್ಲುಗಳು ಮೊಳೆಯಲು ಆರಂಭಿಸಿದವು. ಆದರೆ ಸಾಮಾನ್ಯ ಬಾಲಕರಿಗೆ ಆಗುವಂತೆ ಯಾವ ದೋಷಗಳೂ ಅವನಿಗೆ ಉಂಟಾಗಲಿಲ್ಲ.

ಸೂರ್ಯೋದಯವಾಗಲು ಕಾಂತಿಯು ಬಂದು ಸೇರುವಂತೆ ಸಕಲ ವಿದ್ಯಾನಿಧಿಯಾದ ಅಜಿತನಾಥನಲ್ಲಿ ಪೂರ್ವಜನ್ಮದ ವಿದ್ಯೆಗಳೆಲ್ಲ ಬಂದು ನೆಲೆಸಿದವು. ಮತಿಜ್ಞಾನ, ಶ್ರುತಿಜ್ಞಾನ, ಅವಧಿಜ್ಞಾನಗಳನ್ನೆಲ್ಲ ಪಡೆದ ಅಜಿತನಿಗೆ ವಿದ್ಯಾಗುರು, ದೀಕ್ಷಾಗುರುಗಳು ಎಲ್ಲಿಂದ ದೊರೆಯಬೇಕು? ಅವನು ತನಗೆ ತಾನೇ ಗುರುವಾದನು. ಅದರಂತೆ ಪಾಪವನ್ನು ದೂರ ಓಡಿಸುವ ಅಜಿತನಾಥನೊಡನೆ ದೇವತೆಗಳೇ ಬಾಲಕರ ರೂಪದಲ್ಲಿ ಬಂದು, ಮಕ್ಕಳಾಟವನ್ನು ಆಡಿ ಅವನ ಮನಸ್ಸಿಗೆ ಸಂತೋಷವನ್ನುಂಟು ಮಾಡಿದರು.

ಅವನ ಕಾಲಲ್ಲಿಯ ಮಣಿನೂಪುರಗಳ ಮಧುರ ನಾದವು ಮೊಮ್ಮುತ್ತಿರಲು, ರತ್ನಖಚಿತ ನೆಲಗಟ್ಟುಳ್ಳ ಭೂಮಿಯ ಮೇಲೆ ಎಲ್ಲರಿಗೂ ಆನಂದವಾಗುವಂತೆ ಅವನು ನಡೆಯುತ್ತಿದ್ದನು. ಸುರೇಂದ್ರ ಬಾಲಕರು ಅವನಿಗೆ ಕೊಡೆಯನ್ನೂ, ಕನ್ನಡಿಯನ್ನೂ, ಚಾಮರವನ್ನೂ, ತಾಂಬೂಲ ಪೆಟ್ಟಿಗೆಯನ್ನೂ ಹಿಡಿದು ರಂಜಿಸಿದರು. ಇವು ಜಿತಶತ್ರುವಿಗೆ, ಇವು ಜಿನಜನನಿಗೆ, ಇವು ಜಿನನಿಗೆ ಎಂದು ಹೇಳುತ್ತ ಕಲ್ಪೇಂದ್ರರು ಅತಿ ಉತ್ಸಾಹದಿಂದ ಕಲ್ಪವೃಕ್ಷದ ಹೂ, ಹಣ್ಣು, ಮೊಗ್ಗುಗಳನ್ನು ತಂದುಕೊಟ್ಟರು.

ದೇವತಗಳು ತಾವೇ ಆನೆ, ಎಮ್ಮೆ, ಆಡು, ಜಟ್ಟಿಗಳ ವೇಷವನ್ನು ಧರಿಸಿ ಅವನೊಂದಿಗೆ ಹೋರಾಡಿದರೂ, ರಾಗದ್ವೇಷಾದಿಗಳಿಲ್ಲದ ಅವನಿಗೆ

ಅವಾವೂ ರುಚಿಸಲಿಲ್ಲ. 'ನಿನಗಾಗಿ ಇಂದ್ರಾದಿಗಳು ಉಡಲು, ತೊಡಲು, ಪೂಸಿಕೊಳ್ಳಲು ಕಳುಹಿಸಿಕೊಟ್ಟಿದ್ದಾರೆ. ಅದನ್ನು ಧರಿಸಬೇಡವೆ? ಎಂದು ತಾಯಿಯೇ ಒತ್ತಾಯಪಡಿಸಿದಾಗ ಮಾತ್ರ ಅನ್ನಪಾನಾದಿಗಳನ್ನು ಸ್ವೀಕರಿಸುತ್ತಿದ್ದ ನಿರಪೇಕ್ಷಿ ಅವನು. ಅವನು ತಾನಾಗಿ ಹಸಿದಿದ್ದೇನೆ, ಇದು ಬೇಕು, ಅದು ಬೇಡ ಅನ್ನುತ್ತಿರಲಿಲ್ಲ. ಅವನು ಯಾವುದಕ್ಕೂ ಅಬ್ಬರಿಸಲಿಲ್ಲ. ಆತುರ ಪಡಲಿಲ್ಲ, ಕಳವಳಗೊಳ್ಳಲಿಲ್ಲ. ಎಲ್ಲದಕ್ಕೂ ನಿರ್ಲಿಪ್ತನಾಗಿದ್ದನು.

ಯೌವನ ವಿವಾಹ

ಅಜಿತನಾಥನು ನಿರ್ಮಲತೆಯಿಂದ, ಬೆವರಿಲ್ಲದೆ, ಸೌಂದರ್ಯಭರಿತನಾಗಿ ಹಿತಮಿತ ಭಾಷಿಯಾಗಿ, ದೇವಕುಮಾರರಿಂದ, ರಾಜಕುಮಾರರಿಂದ ಸುತ್ತುವರಿಯಲ್ಪಟ್ಟು ದಿನದಿನಕ್ಕೆ ಬೆಳೆಯುತ್ತ ಅಷ್ಟಾದಶ ಲಕ್ಷಪೂರ್ವಕ ಬಾಲ್ಯಾವಸ್ಥೆಯನ್ನು ಕಳೆದನು. ಆಗ ಅವನು ಕನ್ಯೆಯರ ಕಣ್ಣುಗಳೆಂಬ ಕಮಲಗಳಿಗೆ ಆನಂದವನ್ನೀಯುವ ಶರತ್ಕಾಲದ ಚಂದ್ರನಾಗಿದ್ದನು. ಹೀಗೆ ಉತ್ಕೃಷ್ಟವೂ ಉದಾರವೂ ಆದ ದೇವಸೌಂದರ್ಯದಿಂದ ಸ್ವರ್ಣಕಾಂತಿಯಂಥ ಪ್ರಕಾಶಮಾನವಾದ ತೇಜಃಪ್ರಭೆಯಿಂದ ಕೂಡಿದ ಕಣ್ಣನೋಟದಿಂದ, ಮೃದುಮಧುರ ಮಂದಹಾಸಭರಿತ, ವಿನೋದಪೂರ್ಣ ಪದಗಳಿಂದ ಅಜಿತನಾಥನು ಕನ್ಯೆಯರ ಹೃದಯವನ್ನು ಆಕರ್ಷಿಸಿದನು,

ಹೀಗೆ ಮನ್ಮಥನ ಅವತಾರವಾಯಿತೋ ಎಂಬಂತೆ ಅಜಿತನಾಥನಲ್ಲಿ ಯೌವನ ಕಾಣಿಸಿಕೊಳ್ಳಲು, ತನ್ನ ಮಗನಿಗೆ ವಿವಾಹ ಸಂಭ್ರಮವನ್ನು ಮಾಡಬೇಕೆಂದು ಜಿತಶತ್ರುಮಹಾರಾಜನು ಮನಸ್ಸಿನಲ್ಲಿ ಯೋಚಿಸಿದನು. ಆದರೂ ದೇವನು ಒಪ್ಪುವನೋ ಇಲ್ಲವೋ ಎಂದು ಅನುಮಾನಿಸಿ, ತನಗೆ ಸರಿಕಂಡ ರೀತಿಯಲ್ಲಿ ಅವನನ್ನು ಒಪ್ಪಿಸಬೇಕೆಂದು ಹತ್ತಿರ ಬಂದು, ಅವನ ಕೈಕಾಲುಗಳನ್ನು ಒತ್ತುತ್ತ ನಯವಾಗಿ ಪ್ರಸ್ತಾಪಿಸಿದನು,

"ಮಗನೇ, ಲೋಕದ ರೀತಿ–ನೀತಿಗಳನ್ನು ಅನುಸರಿಸುವುದು ಶ್ರೇಯಕರ. ಈ ಹಿಂದೆ ಪುರುಪರಮೇಶ್ವರರು ನಡೆದುಕೊಂಡ ರೀತಿಯಲ್ಲಿ ನಡೆಯುವುದರಲ್ಲಿ ತಪ್ಪೇನಿದೆ? ಭರತನಿಗೆ ಸರಿದೊರೆಯೆನಿಸುವ ಮಗನನ್ನು ಪಡೆಯಬೇಕು. ಧರ್ಮಪತ್ನಿಯನ್ನು ಪರಿಗ್ರಹಿಸು. ನಿನ್ನ ಪುತ್ರಸಂತತಿ ಬೆಳಗಲಿ, ನಿನ್ನನ್ನು ಹೆತ್ತ ನಮ್ಮ ಮನಸ್ಸಿಗೂ ಸಂತೋಷವಾಗುವಂತೆ ವಿವಾಹ ಮಂಗಲ ಕಾರ್ಯಕ್ಕೆ ಒಪ್ಪುವೆಯಲ್ಲ? ಅನೇಕ ರಾಜರು ತಮ್ಮ ಕನ್ಯೆಯರನ್ನು ಧಾರೆಯೆರೆದುಕೊಡಲು ಮುಂದೆ ಬಂದಿದ್ದಾರೆ." ಎಂದು ಜಿತಶತ್ರು ಮಹಾರಾಜನು ಕೇಳಲು ಅಜಿತನು ನಗುಮುಖದಿಂದಲೇ ತನ್ನ ಸಮ್ಮತಿಯನ್ನು ಸೂಚಿಸಿದನು.

ಈ ರೀತಿ ತನ್ನ ಮಾತುಗಳಿಗೆ ಮಗನು ಸುಲಭದಲ್ಲಿ ಒಪ್ಪಿದುದಕ್ಕೆ ಜಿತಶತ್ರುವಿಗೆ ತುಂಬ ಸಂತೋಷವಾಯಿತು. ಧ್ವಜ, ತೋರಣಗಳನ್ನು ಕಟ್ಟಿಸಿ, ಮಂಗಳ ವಾದ್ಯಗಳನ್ನು ಮೊಳಗಿಸಿ, ಕ್ಷತ್ರಿಯ ಕುಲದಲ್ಲಿ ಜನಿಸಿದ, ರೂಪ ಲಾವಣ್ಯ ಸೌಭಾಗ್ಯ ಹಾವ ಭಾವ ವಿಲಾಸ ವೈಭವಗಳಿಂದ ಕೂಡಿದ ಸಾವಿರ ಕನ್ಯೆಯರನ್ನು ತಂದು ಅಜಿತನಾಥನಿಗೆ ಶುಭದಿನ, ಶುಭವಾರ, ಶುಭಕರವಾದ ಪ್ರಶಸ್ತವಾದ ಮಂಗಲ ಮುಹೂರ್ತದಲ್ಲಿ ವಿವಾಹ ಮಂಗಲ ಕಾರ್ಯವನ್ನು ಮಾಡಿಸಿದನು. ಆಗ ಸೊಗಸಾದ ಕಲ್ಪಲತೆಗಳ ನಡುವೆ ಇರುವ ಕಲ್ಪವೃಕ್ಷದಂತೆ ಸುಂದರ ಪತ್ನಿಯರ ನಡುವೆ ಅಜಿತನಾಥ ಕಂಗೊಳಿಸಿದನು.

ಆಗ ಜಿತಶತ್ರುಮಹಾರಾಜನು ಅಜಿತನಾಥನನ್ನು ಸಾಮ್ರಾಜ್ಯ ಲಕ್ಷ್ಮೀವಲ್ಲಭನನ್ನಾಗಿ ಮಾಡಬೇಕೆಂದು ಗುರುಹಿರಿಯರು ಗೊತ್ತುಪಡಿಸಿದ ಪ್ರಶಸ್ತ ಮುಹೂರ್ತದಲ್ಲಿ ರಾಜ್ಯಾಭಿಷೇಕವನ್ನು ಮಾಡಿ, ರತ್ನಖಚಿತವಾದ ಉನ್ನತ ಸಿಂಹಾಸನದಲ್ಲಿ ಅವನನ್ನು ಕುಳ್ಳಿರಿಸಿದನು.

೬ ವಸಂತಾಗಮನ:

ಜಿತಶತ್ರುಮಹಾರಾಜನು ಅಜಿತನಾಥನಿಗೆ ರಾಜ್ಯಾಭಿಷೇಕವನ್ನು ಮಾಡಿ, ರತ್ನಖಚಿತ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಅಲ್ಲದೆ ಮೂರು ಬೆಳ್ಗೊಡೆ ಬಿಳಿಯ ಚಾಮರಗಳು ಮತ್ತು ಸುಂದರ ಸ್ತ್ರೀಯರ ಕಾಂತಿ ದಶದಿಕ್ಕು ಗಳನ್ನೂ ಬೆಳಗುತ್ತಿರಲು ಅಜಿತನಾಥನಿಗೆ ಪಟ್ಟಬಂಧೋತ್ಸವ ಮಾಡಿದನು. ಹೀಗೆ ಎರಡನೆಯ ತೀರ್ಥಂಕರನು ಚಕ್ರವರ್ತಿಯಾಗಲು ಅವನ ವಿವಾಹಕ್ಕೆ ಕಾಣಿಕೆ ತರುವಂತೆ ದೇವೇಂದ್ರನು ದೇವಲೋಕದ ಶ್ರೇಷ್ಠವಾದ ವಸ್ತ್ರಾಭರಣ, ಸುಗಂಧಗಳ ಸಹಿತ ಬಂದು ಅಜಿತನಾಥನಿಗೆ ನಮಸ್ಕರಿಸಿ, ಜಿತಶತ್ರುವನ್ನು ನೋಡಿ,

"ವರ್ಣಾಶ್ರಮಕ್ಕೆ ಗುರುವೆನಿಸಿ ಜಗದ್ಗುರುವಾದ ಅಜಿತತೀರ್ಥಗುರು ವಿಗೆ ಗುರು, ಗುರುವಿಗೂ ಗುರುವೆನಿಸಿದ ಜಿತಶತ್ರುಮಹಾರಾಜನೇ, ನೀನೇ ಧನ್ಯ! ಅಜಿತನಾಥನು ನಿನ್ನ ಗರ್ಭದಲ್ಲಿ ಉದಯಿಸಿದುದರಿಂದ ಸಕಲ ಜಗತ್ಪಾ ವನೆಯಾದ ವಿಜಯಸೇನಾಮಹಾದೇವಿಗೆ ಸಮಾನರಾದ ಪತಿವ್ರತೆಯರು ಯಾರಿದ್ದಾರೆ?"

ಎಂದು ತೀರ್ಥಂಕರ ಮಾತಾಪಿತೃಗಳನ್ನು ಹೊಗಳಿ, ಪೂಜಿಸಿ, ಸಂಗೀತ ದಿಂದ ಅಜಿತನಾಥನ ಸೇವೆ ಮಾಡುತ್ತಿರಲು. ಯುದ್ಧದಲ್ಲಿ ಭೀಭತ್ಸರಸ, ಕಾಲಾಳುಗಳಲ್ಲಿ ರೌದ್ರ ಹಾಗೂ ಭಯಾನಕರಸ, ಬಂಧುಗಳಲ್ಲಿ ಕರುಣರಸ ಉಂಟಾಗುವಂತೆ ಕಥಾಗೋಷ್ಠಿಯಲ್ಲಿ ಅದ್ಭುತ ರಸವುಂಟಾಯಿತು.

ಈ ರೀತಿ ತುಂಬಿದ ರಾಜಸಭೆಯಲ್ಲಿ ಗೋಷ್ಠಿ ನಡೆದಿರಲು, ಸಾವಿರ ರಾಜಕನ್ಯೆಯರ ಮಂಗಳ ವಿವಾಹದಿಂದ ಜನತೆಗೆ ಆನಂದವಾಯಿತು. ಅಜಿತನ ರಾಜ್ಯಾಭಿಷೇಕದಿಂದ ರಾಜರುಗಳಿಗೆ ಆನಂದವಾಯಿತು. ಆಗಲೇ ಜನತೆಯ ಸಂತೋಷ ಹೆಚ್ಚಾಗಲೆಂದು ವಸಂತಕಾಲ ಪ್ರಾಪ್ತವಾಯಿತು. ಹೀಗೆ ಉತ್ಸವಗಳ ಮಾಲಿಕೆ ಮುಂದುವರಿಯುತ್ತಿರಲು ದೇವಾಗಮನವೂ ಆಯಿತು.

ಆಗ ಮನ್ಮಥನ ಆಸೆಯೆಂಬ ವೃಕ್ಷವು ಮಾಮರದ ಮೊಳಕೆಯಿಂದ ಮೊಳೆತು, ಉದ್ದವಾಗಿ ಬೆಳೆದು ಚಿಗುರೆಲೆಗಳಿಂದ ಪಲ್ಲವಿಸಿ, ದುಂದುಬಿಗಳ ಸಮೂಹಕ್ಕೆ ಕಂಪನ್ನೀಯುವ ಕುಸುಮಗಳಿಂದ ಕುಸುಮಿಸಿ, ಗಿಳಿಗಳು ಉತ್ಸಾಹದಿಂದ ಸವಿಯುವ ಹಣ್ಣುಗಳಿಂದ ಫಲಿತವಾಯಿತು. ನಿಡಿದಾಗಿ ಬೆಳೆದ ತಮಾಳವೃಕ್ಷಗಳ ಮೇಲೆ ಗುಂಪುಗೂಡಿ ಹಾರಾಡುವ ಗಿಳಿಗಳು, ಕಪ್ಪು ಮುಗಿಲಿನ ಮೇಲೆ ಒಪ್ಪುವಂಥ ವಿಶಾಲವಾದ ಕಾಮನ ಬಿಲ್ಲಿನ ಹಾಗೆ ಮನೋಹರವಾಗಿ ತೋರುತ್ತಿದ್ದವು.

ಆ ಮಧುಮಾಸದ ಆರಂಭದಲ್ಲಿ ಮನ್ಮಥನು 'ಮಾಮರಗಳೇ, ಮಲ್ಲಿಗೆ ಬಳ್ಳಿಗಳೇ, ಕೋಗಿಲೆಗಳಿರಾ ಬನ್ನಿ. ನೀವು ಸೊಗಸಾಗಿದ್ದೀರಾ? ನೀವೆಲ್ಲ ಸೌಖ್ಯವೆ?' ಎಂದು ಕೇಳುತ್ತ ಅವುಗಳೊಡನೆ ಕೂಡಿಕೊಂಡನು. ಮೊಳೆತು ಬೆಳೆಯುಲಿರುವ ಮೊಗ್ಗುಗಳು, ಹಣ್ಣುಗಳೆಲ್ಲ ಚಿಕ್ಕ ಮಾಮರದ ಟೊಂಗೆಗಳಿಗೆ ನೇತಾಡುತ್ತಿದ್ದುದರಿಂದ ಆ ಮರ ಭಾರವಾದಂತೆ ತೋರುತ್ತಿತ್ತು.

ಹೊಸತಾಗಿ ಮೊಳೆತ ಮೊಗ್ಗುಗಳನ್ನು, ಅದೇ ತಾನೆ ಜನಿಸಿದ ಕೋಗಿಲೆಯ ಮರಿಗಳನ್ನು, ಪಕ್ವವಾದ ಫಲಗಳನ್ನು ಅಲುಗಾಡುವ ರೆಂಬೆಯೆಂಬ ಕೈಗಳಿಂದ ತಂದು 'ಇವು ನಮ್ಮ ವಸ್ತು ಒಡವೆ ಕಾಣಿಕೆ' ಎಂದು ಮನ್ಮಥನಿಗೆ ತೋರುವಂತೆ ಆ ಮಾಮರಗಳು ವಸಂತೋತ್ಸವದಲ್ಲಿದ್ದವು.

ಹೀಗೆ ಆಗಮಿಸಿದ ವಸಂತಋತುವಿನಲ್ಲಿ ಮಾಮರದಲ್ಲಿ ಅಂಕುರ ಹುಟ್ಟುವಂತೆ ಮಲ್ಲಿಗೆಯಲ್ಲಿ ಪರಿಮಳ ಹುಟ್ಟುವಂತೆ, ನಾಗಾಚಲದಲ್ಲಿ ಶ್ರೀಗಂಧ ಹುಟ್ಟುವಂತೆ, ಪೂರ್ವಾಚಲದಲ್ಲಿ ಚಂದ್ರನು ಉದಯಿಸುವಂತೆ, ಕೋಗಿಲೆಗೆ ಮಧುರ ಧ್ವನಿ ಮೂಡುವಂತೆ, ಅಶೋಕವೃಕ್ಷಕ್ಕೆ ಚಿಗುರೆಲೆಗಳು ಚಿಗಿಯುವಂತೆ, ಬಂಧುಜನಗಳ ಶೋಕವನ್ನು ಹೋಗಲಾಡಿಸಿ, ಅಸನವನ್ನು ಅಲುಗಿಸಿದ ಅಜಿತನಾಥನಿಗೆ ಸಕಲರಿಗೂ ಆಶ್ರಯದಾತನೂ, ಪುಣ್ಯವಂತನೂ ಆದ ಅಜಿತಸೇನನೆಂಬ ಮಗನು ಜನಿಸಿದನು.

ಆಗ ಸೌಧರ್ಮೇಂದ್ರನು ಅಜಿತನಾಥನ ವಿವಾಹ, ಪಟ್ಟಾಭಿಷೇಕ ಹಾಗೂ ಅವನ ಮಗನ ಜನ್ಮದಿನೋತ್ಸವಗಳನ್ನು ಗೌರವಿಸಿ, ಮನಃಪೂರ್ವಕವಾಗಿ ಬೀಳ್ಕೊಟ್ಟು ತೆರಳಿದನು.

ವೈರಾಗ್ಯೋದಯ : ಪರಿನಿಷ್ಕ್ರಮಣ ಕಲ್ಯಾಣ

ಆಗ ಜಿತಶತ್ರುವು ವೃದ್ಧರಾಜನಾಗಿ, ಅಜಿತನಾಥನು ಅಧಿರಾಜನಾಗಿರಲು ಸಕಲ ವೈರಿಗಳನ್ನು ಗೆದ್ದು ಅಜಿತಸೇನನು ಯುವರಾಜನಾಗಿ ಮೆರೆದನು. ಹೀಗೆ ಮೂವರು ರಾಜರು ಮೂರು ರತ್ನಗಳಂತೆ ಮೂರು ಲೋಕಗಳಲ್ಲಿ ಪವಿತ್ರರಾಗಿರಲು ಅಜಿತನಾಥನು ಮೃದು, ಸರಳ ಸ್ವಭಾವದವನೂ, ವೀತರಾಗನೂ ಆದುದರಿಂದ ಸಂಸಾರ, ಶರೀರ ವೈಭವದಿಂದ ವಿರಕ್ತಿಯನ್ನು ತಾಳಿದನು.

ಜಗತ್ತಿನಲ್ಲಿಯ ಪ್ರತಿ ಜೀವಕಣಗಳಿಗೂ ಉದಯ ಅಸ್ತವೆಂಬುದು ಇದೆ. ಇವಕ್ಕೆ ನಿದರ್ಶನವೆಂಬಂತೆ ಸೂರ್ಯನು ಪೂರ್ವದಿಕ್ಕಿನಲ್ಲಿ ಉದಯಿಸಿ. ಪಶ್ಚಿಮ ದಿಕ್ಕಿನಲ್ಲಿ ಅಸ್ತಂಗತನಾಗುವನು. ಸೂರ್ಯೋದಯಕ್ಕೆ ಅರಳಿದ ಕಮಲವು ಸೂರ್ಯಾಸ್ತಕ್ಕೆ ನಮಸ್ಕರಿಸುವಂತೆ ಮುಚ್ಚಿಕೊಳ್ಳುವುದು. ಚಂದ್ರ ಬಿಂಬವು ಜಗತ್ತನ್ನು ನೋಡುವ ಕನ್ನಡಿಯಂತೆ, ಪೂರ್ವದಿಗ್ವನಿತೆಯ ಮುಖದಂತೆ ವಿರಹಿಗಳ ಬಯಕೆಯಂತೆ, ಭಯ ವಿಹ್ವಲಗೊಳಿಸುವ ಸಿಂಹದಂತೆ, ಸಮುದ್ರದ ಅಲೆಗಳನ್ನು ಕುಣಿಸುವ ನಟನಂತೆ ಮೂಡುವದು. ಆ ಬೆಳದಿಂಗಳು ಸರೋವರ, ಆಕಾಶ, ನಕ್ಷತ್ರ, ತಾವರೆಗಳನ್ನೆಲ್ಲ ನಾಚಿಸಲು, ಜನರು ಆ ಮಹಾ ಬೆಳದಿಂಗಳೆಂಬ ಸಮುದ್ರದ ನೀರನ್ನು ಬೊಗಸೆಯಲ್ಲಿ ತೆಗೆದುಕೊಂಡು ಕುಡಿಯ ಬಯಸಿದರು, ಕೊಡಗಳಿಂದ ತುಂಬಿಕೊಳ್ಳಬೇಕೆಂದರು, ಹಳ್ಳತೋಡಿ ತೋಟದಲ್ಲಿ ಹರಿಯಿಸಬೇಕೆಂದರು, ಅದರ ಆಳವನ್ನು ನೋಡಲು ಧುಮುಮ್ಮಸಿ ಜಿಗಿದು ನೋಡಬೇಕೆಂದು ಬಯಸಿದರು.

ಹೀಗೆ ಶೋಭಿಸುವ ಬೆಳುದಿಂಗಳಿನ ವೈಭವದಲ್ಲಿ ನಿಷ್ಕಲಂಕ ವಿದ್ಯಾಧರನಾದ ಅಜಿತನಾಥನು ವಿದ್ಯಾಧರರ ಮಧ್ಯದಲ್ಲಿ ಸಭೆಯಲ್ಲಿದ್ದು ಆಕಾಶವನ್ನು ನೋಡುತ್ತಿದ್ದನು. ಆಗ ಯಾವ ಕಾರಣವೂ ಇಲ್ಲದೆ ಕಣ್ಣೀರ ಹನಿಗಳು ಉದುರುವಂತೆ, ಆಕಾಶಯಾನದಲ್ಲಿ ಉಲ್ಕಾಪಾತವಾಗಲು, ಅವನ ಮನದ ಮೋಹಸ್ತಂಭವು ಕಳಚಿಬಿದ್ದಿತು. ವಿಷಯಾನುರಾಗವೂ ಕಳೆಯಿತು. ಆಗ ಅದನ್ನು ನೋಡಿ ಅದರಿಂದ ಪ್ರಭಾವಿತನಾಗಿ 'ಮಾನವ ಜನ್ಮವೆಂಬುದು

ನೀರಮೇಲಿನ ಗುಳ್ಳೆಯಂತೆ ಕ್ಷಣಿಕವಾದುದು. ಇದನ್ನು ತಿಳಿದೂ ವಿವಾಹ, ಕಾಮವಾಸನೆ, ಬಂಧುಜನ, ಮಿತ್ರರು, ರಾಜ್ಯಾಭಿಷೇಕ, ಮಕ್ಕಳುಗಳಲ್ಲಿ ಪ್ರೀತಿಯಿಟ್ಟು ನಾಚಿಕೆಗೇಡಾಗಿ ವರ್ತಿಸುವುದು ಮರುಳತನವಲ್ಲವೆ ?' ಎಂದು ಯೋಚಿಸಿದನು.

ಅಜಿತನಾಥನು ಹಿಂದೆ ವಿಮಲವಾಹನ ಭವದಲ್ಲಿದ್ದಾಗ ಉಂಟಾದ ವೈರಾಗ್ಯವೇ ಮತ್ತೆ ಉದಯವಾಗಿ, ಮನಸ್ಸಿನಲ್ಲಿ ರೂಪತಾಳಿತು. ಆಗ ನಿರ್ವೇಗದ ಜೊತೆಗೆ ಅರ್ಹಂತ ಪದಕ್ಕೆ ಯೋಗ್ಯವಾದ ರತ್ನತ್ರಯಗಳು ಅಜಿತನಿಗೆ ಲಭಿಸಿದವು. ನಿರ್ವೇಗವನ್ನು ಅವನು ಮನದಲ್ಲಿ ಹೀಗೆ ಪರಿಭಾವಿಸಿದನು:

'ಈ ರೂಪು, ವೈಭವ, ನವರಸಗಳು, ಈ ದೇಹ, ಭೋಗ, ಈ ಜೀವನಗಳೆಲ್ಲ ಸಮುದ್ರದ ಆಟೋಪಕ್ಕೆ, ಅದರ ಮೇಲಿರುವ ನೀರಗುಳ್ಳೆಗೆ, ನೊರೆಗೆ ಸಮಾನ. ನೀರ ಮೇಲೆ ಬರೆದ ಬರಹಗಳಂತಹವು. ಕಾಮನ ಬಿಲ್ಲಿನಂತೆ, ಮಿಂಚಿನಂತೆ ಕ್ಷಣಿಕ, ಇದನ್ನು ತಿಳಿದೂ ನಾನು ಹೇಗೆ ಸುಮ್ಮನಿರಲಿ?'

'ಯಮನು ಬಂದು ಗೋಣು ಮುರಿದು ಎಳೆದೊಯ್ಯುವಾಗ ಯಾರಾದರೂ ಬಂದು ರಕ್ಷಿಸುವರುಂಟೆ? ಒಂದೇ ಜೀವ ದೇವಗತಿಯಲ್ಲಿ, ಮಾನವಗತಿಯಲ್ಲಿ, ತಿರ್ಯಗ್ಗತಿಯಲ್ಲಿ, ನರಕಗತಿಯಲ್ಲಿ ಸುಳಿಯುವುದು. ಆ ಆತ್ಮನಿಗೆ ಸಹಾಯ ಮಾಡುವವರು ಯಾರೂ ಇಲ್ಲ ತಾನೆ? ಹಿಂದಿನ ಅನೇಕ ಭವಗಳ ತಾಯಿತಂದೆ, ಮಕ್ಕಳು, ಎಲ್ಲಿರುವರೆಂದು ಕೇಳದಿರುವುದು ಈ ಜೀವದ ಜಡ ಸ್ವಭಾವವಲ್ಲವೆ?

'ಜೀವದಯಾ ಪವಿತ್ರಭಾವದಿಂದಲೂ, ಕ್ರಮದಿಂದ ಪಂಚಸಮಿತಿ, ತ್ರಿಗುಪ್ತಿ, ವ್ರತಗಳಿಂದ ಕೂಡಿದವನು ಸುವ್ರತ ಸುಸಂವೃತನೆನಿಸಿಕೊಳ್ಳುವನು. ಪವಿತ್ರವಾದ ಚಾರಿತ್ರ್ಯವೆಂಬ ದಿವ್ಯಭಾವನೆಯಲ್ಲಿ ಮಗ್ನನಾದ ಮುನಿಯು ಶ್ರೇಷ್ಠ ಧರ್ಮಕ್ಕೆ ಆಶ್ರಯಸ್ಥಾನನಾಗುವನು.'

ಎಂದು ಅಜಿತನಾಥನು ಹನ್ನೆರಡು ಅನುಪ್ರೇಕ್ಷೆಗಳನ್ನು ಮನದಲ್ಲಿ ನೆನೆದನು. ಆಗ ಸೂರ್ಯೋದಯವಾಗಲು ಅಜಿತನಾಥ ತೀರ್ಥಂಕರನಿಗೆ

ಉಪದೇಶಿಸುವ ಉದ್ದೇಶದಿಂದ ಬ್ರಹ್ಮಕಲ್ಪಾಂತರ ವಾಸಿಗಳಾದ ಎಂಟು ಜನ ಲೋಕಾಂತಿಕ ದೇವರು ಬಂದು ಆ ದೇವನ ಪಾದಕಮಲಗಳನ್ನು ಗಂಧಾಕ್ಷತೆಗಳಿಂದ ಅರ್ಚಿಸಿ,

"ದೇವಾ, ನೀನು ತೀರ್ಥಂಕರ. ದೀಕ್ಷೆ ತಾಳದೆ ಸಾಮಾನ್ಯರಂತೆ ಅಶಾಶ್ವತವಾದ ಈ ಸಾಮ್ರಾಜ್ಯಸುಖದ ಮೋಹದಲ್ಲಿ ಮುಳುಗಿರುವುದು ಸರಿಯೆ? ನೀನು ಚರಮ ದೇಹಧಾರಿ. ಕಾಮನನ್ನು ನಾಶಮಾಡಿ, ಪಂಚೇಂದ್ರಿಯಗಳನ್ನು ಜಯಿಸಿ, ಪಂಚಮಹಾ ಕಲ್ಯಾಣವನ್ನು ಪಡೆದು ಮುಕ್ತಿಯನ್ನು ಹೊಂದು".

"ದೇವ, ಕಷಾಯ ಚತುಷ್ಟಯಗಳನ್ನು ನಾಶಪಡಿಸಿ, ಅನಂತ ಚತುಷ್ಟಯಗಳನ್ನು ಪಡೆ. ರತ್ನತ್ರಯಗಳನ್ನು ಪ್ರೀತಿಸು. ಮೂಲೋಕಗಳೂ ಶರಣಾಗುವಂತೆ ಮಾಡು. ತ್ರಿಕಾಲಜ್ಞಾನ ನಿನಗೆ ಲಭಿಸಲಿ. ಪರಿಗ್ರಹಗಳನ್ನು ತ್ಯಜಿಸು; ಧರ್ಮತತ್ವವನ್ನು ತಿಳಿದ ನಿನಗೆ ಕಲಿಸಿಕೊಡಬಲ್ಲವರು ಯಾರು?

"ರಾಜ್ಯವನ್ನು ತ್ಯಜಿಸಿ, ತಪೋರಾಜ್ಯವನ್ನು ಸೇರು. ಕೈವಲ್ಯಪ್ರಾಪ್ತಿಗೆ ತಪಸ್ಸೇ ನಿಜವಾದ ಮಾರ್ಗ. ನಿನ್ನೆದುರು ಜಿನಧರ್ಮಕ್ಕೆ ಸಂಬಂಧಿಸಿದ ವಿವರ ತಿಳಿಸುವುದೆಂದರೆ ದೀಪವನ್ನು ಎತ್ತಿ ಸೂರ್ಯನನ್ನು ತೋರಲು ಪ್ರಯತ್ನಿಸಿದಂತೆಯೇ ಸರಿ!

"ತೀರ್ಥಂಕರರಲ್ಲಿ ಪುರದೇವನು ಮೊದಲಿಗನು. ನೀನು ಎರಡನೆಯವನು. ಇದೇ ಮಾರ್ಗದಲ್ಲಿ ನಡೆಯುವವರು ಶಂಭವಾದಿ ಇಪ್ಪತ್ತೆರಡು ಜನ ತೀರ್ಥಂಕರರು. ಘಾತಿ, ಅಘಾತಿ ಕರ್ಮಗಳನ್ನು ಜೈನಶಾಸ್ತ್ರವೆಂಬ ಶಸ್ತ್ರದಿಂದ ನಾಶಪಡಿಸಿಕೊಂಡು ಪುರದೇವನ ಜೊತೆ ಮುಕ್ತ್ಯಂಗನೆಯರನ್ನು ನೀನು ಸೇರು."

ಎಂದು ಆ ಲೋಕಾಂತಿಕ ದೇವರು ತನ್ನನ್ನು ಉದ್ದೇಶಿಸಿ ನುಡಿಯಲು ಅದನ್ನು ಅವನು ಒಪ್ಪಿಕೊಂಡನು. ಅದರಿಂದ ಅವನ ಮನಸ್ಸು ಬೆಳಗಿದ ರತ್ನಗನ್ನಡಿಯಂತೆ, ಶುಭ್ರವಾದ ಸರೋವರವನ್ನು ನಾಚಿಸುವಂತೆ ಪವಿತ್ರ

ವಾಯಿತು. ಹೀಗೆ ಅಜಿತನಾಥನು ಶುಭಚಿತ್ತವನ್ನು ತಾಳಿ ಗುರುಗಳಿಗೆಲ್ಲ ತನ್ನ ನಿರ್ಧಾರವನ್ನು ತಿಳಿಸಿದನು. ಅದರಂತೆ ದೇವತೆಗಳೆಲ್ಲ ಮೆಚ್ಚುವಂತೆ ತನ್ನ ಮಗನಾದ ಅಜಿತಸೇನನಿಗೆ ವೈಭವದಿಂದ ರಾಜ್ಯಾಭಿಷೇಕ ಮಾಡಿ, ದೀಕ್ಷೆ ಪಡೆಯಬೇಕು ತಾನು ಅಯೋಧ್ಯೆಯಿಂದ ಹೊರಡಲು ಸಿದ್ಧನಾದನು.

●●●

೭ ದೀಕ್ಷಾಗ್ರಹಣ :

ಅಜಿತನಾಥನು ಸಂಸಾರದಲ್ಲಿ ನಿರ್ವೇಗವನ್ನು ತಾಳಿ ದೀಕ್ಷಾಭಿಮುಖಿ ನಾಗಲು, ಅದನ್ನು ಅರಿತು ಸೌಧರ್ಮೇಂದ್ರನು ಪರಿನಿಷ್ಕ್ರಮಣ ಕಲ್ಯಾಣ ಪೂಜೆಗೆ ಸಿದ್ಧನಾಗಿ, ದೇವ ಪರಿವಾರದೊಂದಿಗೆ ಕೂಡಿಕೊಂಡು ಹೊರಟು ಬಂದನು. ತರುವಾಯ ಅನರ್ಘ್ಯ ರತ್ನಖಚಿತವಾದ 'ಸುಪ್ರಭೆ' ಪಲ್ಲಕ್ಕಿಗೆ ತಾನೇ ಹೆಗಲು ಕೊಟ್ಟು ಅಜಿತತೀರ್ಥಂಕರನನ್ನು ಹೊತ್ತು ಏಳು ಅಡಿಯ ವರೆಗೆ ನಡೆದನು. ತರುವಾಯ ಧರಣೀಶ್ವರರು ಏಳು ಅಡಿಯವರೆಗೆ ಒಯ್ದರು. ಅದರಂತೆ ಅಮರೇಶ್ವರರು ಸಕಲ ಜಗತ್ಪಾವನನಾದ ಅಜಿತ ನಾಥನನ್ನು ಸಹೇತುಕವನಕ್ಕೆ ತಂದರು.

ಮಗನ ಮೇಲಿನ ಮೋಹದಿಂದ ಜಿತಶತ್ರು ವಿಜಯಸೇನೆಯರೂ, ತಂದೆಯ ಮೇಲಿನ ಮೋಹದಿಂದ ಅಜಿತಸೇನನೂ ಕಣ್ಣೀರನ್ನು ಸುರಿಸುತ್ತ ಅಜಿತನಾಥನ ಹಿಂದೆಯೇ ಬಂದರು. ಹೀಗೆ ಜಿನ ಮಾತಾ ಪಿತೃಗಳು, ಜಿನತನಯ ಮೊದಲಾದವರೆಲ್ಲ ಅವನ ಹಿಂದೆಯೇ ಹೋಗಲು ಅರಮನೆಯೂ ಅಯೋಧ್ಯಾನಗರವೂ ಮದುವೆ ಮುಗಿದುಹೋದ ಮನೆಯಂತೆ ಮಂಕು ಕವಿದಂತೆ ಕಂಡಿತು. ಸೂರ್ಯನಿಲ್ಲದ ಆಕಾಶ, ಮಾಮರವಿಲ್ಲದ ವನ, ಅರಳಿದ ಕಮಲವಿಲ್ಲದ ಪೂಗೊಳಗಳು ಶೋಭಿಸದಂತೆ, ಅಜಿತನಾಥನಿಲ್ಲದ ಅಯೋಧ್ಯೆ ಶೋಭಿಸುವುದು ಹೇಗೆ ಸಾಧ್ಯ ?

ಹೀಗೆ ಸ್ತಬ್ಧವಾದ ಪಟ್ಟಣವನ್ನೂ, ಜಿನನ ಹಿಂದೆಯೇ ಹೋಗುತ್ತಿರುವ ಪುರಜನರನ್ನೂ ಕಂಡು ಅಂತಃಪುರದಲ್ಲಿದ್ದ ಸಾವಿರಾರು ಸ್ತ್ರೀಯರು ವ್ಯಾಕುಲ ಗೊಂಡು ತಮ್ಮ ತಮ್ಮ ಬುದ್ಧಿಗೆ ಹೊಳೆದಂತೆ ಯೋಚಿಸಿದರು.

''ಆ ಲೋಕಾಂತಿಕ ದೇವರು ಬಂದು, ಅಜಿತನಾಥನಿಗೆ ಏನನ್ನು ಹೇಳಿ ಹೋದರೋ ಏನೋ, ಅವರೇ ತಪಸ್ಸಿಗೆ ಹೊರಡುವಂತೆ ಮಾಡಿದರು. ಇನ್ನು ಮುಂದೆ ನಮ್ಮ ಗತಿ ಏನು ?''

''ಈ ವರೆಗೆ ಇಲ್ಲದ ಕೋಪ ಈಗ ಅದೆಲ್ಲಿಂದ ಅವರಲ್ಲಿ ಬಂದುದು ? ಜಿನಪತಿ ನಮಗೆ ಹೇಳದೆ ಹೋದರಲ್ಲ ?''

''ನಾವು ಮಾಡಿದ ಪಾಪ ಯಾವುದು ? ನಾವೂ ಅಜಿತನಾಥನ ಹಿಂದೆಯೇ ಹೋಗಿ ಜೀವ ಕಳೆಯೋಣ. ಅಜಿತನಾಥನು ಮಹಾತ್ಮನು, ನಮ್ಮ ಮನೋವಲ್ಲಭನು. ಅವನು ನಡೆದ ದಾರಿಯಲ್ಲಿಯೇ ನಾವೂ ಮುಂದು ವರಿಯುವಂತೆ ಸೂಚಿಸಿದ್ದಾನೆ.''

''ಸಿರಿಗನ್ನಡಿಯನ್ನು ತೆಗೆದಿಡು, ಬೆಲೆಯುಳ್ಳ ವಸ್ತ್ರಗಳು, ಕಾಲಿನಾಭರಣ ಗಳು ನಮಗೇಕೆ?''

ಎಂದು ಯೋಚಿಸಿ,

''ಇಂದು ಅಜಿತನಾಥರು ತಪೋವನಕ್ಕೆ ಹೋದರು. ಅವರು ಹೋದ ಮೇಲೆ ನಮಗೇನು ಇಲ್ಲಿ ಕೆಲಸ ? ನಾವಿಲ್ಲಿ ಉಳಿಯುವಂತಿಲ್ಲ. ನಾವೂ ಅವರ ಹಿಂದೆ ಹೋಗಲಿದ್ದೇವೆ. ಅದಕ್ಕಾಗಿ ಅಪ್ಪಣೆ ಕೇಳಿದೆವೆಂದು ನಮ್ಮ ತಾಯಿ ತಂದೆಗಳಿಗೆ ಹೇಳಿ ಬನ್ನಿರಿ'' ಎಂದು ಅರಸಿಯರು ಒಡನಾಡಿನ ಮೇಳದವರಿಗೆ ತಿಳಿಸಿದರು. ಅದರಂತೆ ಉಪವನದಲ್ಲಿಯ ಅಶೋಕವೃಕ್ಷ ಕೋಮಲವಾದ ಲತೆಗಳಿಗೆ ಮಾವಿನ ಹೊಂಗೆಯ ವೃಕ್ಷಗಳಿಗೆ ತಾವು ಅಗಲುತ್ತಿರುವುದಾಗಿ ತಿಳಿಸಿ ಒಪ್ಪಿಗೆಯನ್ನು ಬೇಡಿ, ದುಃಖದಿಂದ ಕಣ್ಣೀರು ಸುರಿಸಿದರು. ಎದುರಿಗೆ ಇರುವ ಅಜಿತನಾಥನಿಗೇ ಹೇಳುತ್ತಿರುವಂತೆ— 'ಮೂರು ಲೋಕಕ್ಕೂ ಒಡೆ ಯನಾದ ನಿನ್ನ ಅಗಲಿಕೆಯಿಂದ ನಮ್ಮ ಮನ ಶೂನ್ಯವಾಗಿದೆ' ನೀನಿಲ್ಲದೆ ಅರಮನೆ ಶೂನ್ಯವಾಗಿದೆ. ಅಯೋಧ್ಯಾನಗರವೂ ಶೂನ್ಯವಾಗಿದೆ ಎಂದು ಅ

ಅಜಿತನಾಥನ ರಾಣಿಯರು ಚಡಪಡಿಸುತ್ತ, ತಮ್ಮ ಮೃದು ಕೈಗಳಿಂದ ಎದೆಗಳನ್ನು ಒತ್ತಿ, ಒಂದೇ ಸಮನೇ ಕಣ್ಣೀರು ಸುರಿಸುತ್ತ ತಮ್ಮ ಪ್ರಭು ಎಲ್ಲಿ? ಯಾವ ಕಡೆಗೆ ಹೋದನೆಂದು ತಮಾತಮಗೆ ತೋಚಿದಂತೆ ನುಡಿದು ಅಂತಸ್ತಿನಿಂದ ಇಳಿದು ಹೊರಹೊರಡಲು ಸಿದ್ಧರಾದ ಸಾವಿರ ರಾಣಿಯರನ್ನು ವೃದ್ಧ ಕಂಚುಕಿಯರು ಅಲ್ಲಿಯೇ ತಡೆದರು.

ಇಲ್ಲಿ ಸಹೇತುಕ ವನದ ಅತಿ ಮನೋಹರವಾದ ವನದಲ್ಲಿ ಮಾಘಶುದ್ಧ ಷಷ್ಟಿಯಂದು ರೋಹಿಣೀ ನಕ್ಷತ್ರದಲ್ಲಿ ಹಲವಾರು ಅರಸುಮಕ್ಕಳೊಂದಿಗೆ ಇದ್ದ ಅಜಿತನಾಥನು ಬಾಹ್ಯಾಭ್ಯಂತರ ಪರಿಗ್ರಹಗಳನ್ನು ದೂರೀಕರಿಸಿ ಚಂದ್ರಕಾಂತ ಶಿಲೆಯ ತಳದಲ್ಲಿ ಪೂರ್ವಾಭಿಮುಖಿಯಾಗಿ ಪಂಚಮುಷ್ಟಿಯಿಂದ 'ನಮಃಸಿದ್ಧೇಭ್ಯ' ಎಂದು ಕರ್ಮದ ಬೇರುಗಳನ್ನು ಕಿತ್ತುಹಾಕುವಂತೆ, ದುಂಬಿಗಳ ಸಾಲಿನಂತೆ ಕಾಣುತ್ತಿದ್ದ ತಲೆಗೂದಲನ್ನು ಕಿತ್ತುಹಾಕಿದನು. ಶ್ರೇಷ್ಠ ದೀಕ್ಷೆಯನ್ನು ಧರಿಸಿದ ಅಜಿತನಾಥನಿಗೆ ಕೂಡಲೇ ಮನಃಪರ್ಯಾಯ ಜ್ಞಾನ ಲಭಿಸಿತು.

ಹೀಗೆ ಅಜಿತನಾಥನು ಸರ್ವಸಾವದ್ಯವಿರತಿಯೊಳಗೆ ನಿಯತವಾಗಿ ಸಮಿತಿ, ಗುಪ್ತಿ, ಸಾಮಾಯಿಕ ವ್ರತಗಳಲ್ಲಿ ಮನವು ಮುಳುಗಿರಲು, ದುಂಬಿಗಳ ಸಾಲಿನಂತಿದ್ದ ಅವನ ಕೇಶರಾಶಿಯನ್ನು ದೇವತೆಗಳು ಪಂಚಮಾಂಬುಧಿಯೊಳಗೆ ಹಾಕಿದರು. ಆಗ ವಸ್ತ್ರಗಳನ್ನು ಕಳಚಿ, ಸುಗಂಧದ್ರವ್ಯಗಳನ್ನು ಆಭರಣಗಳನ್ನು ತ್ಯಜಿಸಿದ ಅಜಿತಸ್ವಾಮಿಯು ಸಂಜೆಗೆಂಪು ಮೋಡಗಳಿಂದ ವಿರಹಿತನಾದ ಸೂರ್ಯನಂತಿದ್ದನು. ಹೀಗೆ ಪರಮೇಶ್ವರನು ತಪಸ್ಸಿಗೆ ತೊಡಗಲು ದೇವತೆಗಳು ಶೋಕದಿಂದ ತಪ್ತರಾದ ತೀರ್ಥಂಕರ ಗುರುಗಳನ್ನು ಅಜಿತಸೇನಕುಮಾರನನ್ನು ಸಮಾಧಾನಗೊಳಿಸಿ ಅಯೋಧ್ಯೆಗೆ ಕಳಿಸಿ ಆದಿ ತೀರ್ಥಂಕರನಿಗೆ ಮಾಡಿದಂತೆ ಪರಿನಿಷ್ಕ್ರಮಣ ಕಲ್ಯಾಣವನ್ನು ವೈಭವದಿಂದ ನೆರವೇರಿಸಿದರು. ವಿವಿಧ ಸ್ತೋತ್ರಗಳಿಂದ ಅಷ್ಟವಿಧ ಅರ್ಚನಾ ದ್ರವ್ಯಗಳಿಂದ ಪೂಜಿಸಿ, ವಂದಿಸಿ ತಮ್ಮ ನೆಲೆಗಳಿಗೆ ಹಿಂದಿರುಗಿದರು.

●●●

ತಪಸ್ಸು :

ದೀಕ್ಷೆಯನ್ನು ಸ್ವೀಕರಿಸಿದ ಅಜಿತಸ್ವಾಮಿಯು ಅಂದು ಅಲ್ಲಿಯೇ ನಿಂತನು. ಮರುದಿವಸ ಸೂರ್ಯನ ಮಂಗಳ ಪ್ರಕಾಶದಂತೆ ಹೊಳೆಯುವ ಅಜಿತನಾಥನು ದಾನಧರ್ಮ ಪ್ರಕಾಶನ ಮಾಡಲೆಂದು ಅಯೋಧ್ಯಾಪುರವನ್ನು ಪ್ರವೇಶಿಸಿದನು. ಆಗ ಅವನು ಲಾಭ–ಅಲಾಭ, ಮಾನ–ಅವಮಾನಗಳ ವಿಷಯದಲ್ಲಿ ಸಮಭಾವವುಳ್ಳವನಾಗಿದ್ದನು. ಜೀವಿಸಲು ಎಷ್ಟು ಬೇಕೋ ಅಷ್ಟು ಆಹಾರ ಮಾತ್ರವನ್ನು, ೪೬ ದೋಷವಿರಹಿತವಾಗಿ ಸ್ವೀಕರಿಸಲು ಬಯಸಿದ್ದನು. ಆಗ ಕೀಳು–ಮೇಲ್ಮಟ್ಟದ ಜನರ ಮನೆಗಳಿಂದ ಸಾಗಿ ಬ್ರಹ್ಮ ನೆಂಬ ರಾಜನ ಅರಮನೆಗೆ ಬರಲು, ಅವನು ಮಂಗಳವಾದ್ಯಗಳನ್ನು ಮೊಳಗಿಸಿ ಪರಮ ಉತ್ಸಾಹದಿಂದ ಅಜಿತಸ್ವಾಮಿಯನ್ನು ಸ್ವಾಗತಿಸಿದನು, ಸಿದ್ಧ ಭಕ್ತಿಪೂರ್ವಕ ಕನಕ ಪಾತ್ರೆಗಳಲ್ಲಿಯ ಕಬ್ಬಿನ ರಸ, ಹಾಲುಗಳನ್ನು ಅಜಿತ ಸ್ವಾಮಿಯ ಪಾಣಿಪಾತ್ರದಲ್ಲಿ ನೀಡಿದನು. ಆಗ ಉತ್ತಮ ದಾನದ ಫಲವು ಪ್ರಾಪ್ತವಾದಂತೆ ಪಂಚಾಶ್ಚರ್ಯಗಳು ಆದವು. ಚಿನ್ನದ ಮಳೆ ಸುರಿಯಿತು. ದೇವಸಮೂಹ ಸ್ತುತಿಮಾಡಿತು. ತಂಗಾಳಿ ಬೀಸಿತು. ದೇವದುಂದುಭಿಗಳು ಮೊಳಗಿದವು. ಹೂಮಳೆ ಕರೆಯಿತು. ಆಗ ಅಜಿತಸ್ವಾಮಿಯು ಬ್ರಹ್ಮ ರಾಜನಿಗೆ ಅಕ್ಷಯದಾನವಾಗಲಿ ಎಂದು ಹರಸಿ. ಅಯೋಧ್ಯೆಯಿಂದ ಹೊರಟರು. ಅಲ್ಲಿಂದ ಮುಂದೆ ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖ ಮೊದಲಾದ ಪ್ರದೇಶಗಳಲ್ಲಿ ವಿಹರಿಸಿದರು.

ಆಗ ದೇಹದ ಮಲೀನತೆಯೇ ಅವರಿಗೆ ಪರಿಮಳವಾಗಿತ್ತು. ಆಕಾಶವೇ ತೊಡುವ ಬಟ್ಟೆಯಾಗಿದ್ದಿತು. ಹೀಗೆ ಮುಕ್ತ್ಯಂಗನೆಯನ್ನು ಒಲಿಸಿಕೊಳ್ಳಲು ಅವರು ಸಿದ್ಧರಾಗಿದ್ದರು. ಗಾಳಿಯಂತೆ ನಿಸ್ಸಂಗಿಯಾಗಿ, ಕನಕಪರ್ವತದಂತೆ ಸ್ಥಿರವಾಗಿ, ಸಮುದ್ರದಂತೆ ಗಂಭೀರರಾಗಿ ಅವರು ತಪಸ್ಸಿಗೆ ನಿಂತಿದ್ದರು. ಆಗ ವನದಲ್ಲಿದ್ದ ಆನೆ–ಸಿಂಹ, ಹಾವು–ಮುಂಗಲಿ, ಚಿಗರೆ–ಹುಲಿ ಮೊದಲಾದ ಜಾತವೈರ ಪ್ರಾಣಿಗಳು ತಮ್ಮ ವೈರಭಾವವನ್ನು ಮರೆತು, ಎಲ್ಲ ಒಂದೆಡೆ ಸೇರಿ ಅಜಿತನಾಥನ ಬಳಿ ಶಾಂತವಾಗಿದ್ದವು. ಪರಮೇಶ್ವರನ ತಪಸ್ಸಿನ ಪ್ರಭಾವ ದಿಂದಾಗಿ ಅವುಗಳಲ್ಲಿಯ ರೌದ್ರರಸವು ಮಾಯವಾಗಿದ್ದಿತು. ವನದಲ್ಲಿಯ

ಗಣಗಳು ತಮ್ಮ ಟೊಂಗೆಯೆಂಬ ಕೈಗಳಿಂದ ಮುನೀಶ್ವರನ ಪಾದಕಮಲಗಳಿಗೆ ಹೂಗಳನ್ನು ಸುರಿದವು. ಸರೋವರವು ತೆರೆಗಳೆಂಬ ಭುಜಗಳಿಂದ ತುಂತುರ ಹನಿಗಳಿಂದ ಪಾದವನ್ನು ತೊಳೆಯಿತು.

ಹೀಗೆ ಅಜಿತಸ್ವಾಮಿಯು ಉಗ್ರೋಗ್ರ ತಪಸ್ಸು ಮಾಡುತ್ತ ಏಳು ಸಿದ್ಧಿಗಳನ್ನು, ಒಂಬತ್ತು ಸತ್ಯಗಳನ್ನು; ಎಂಟು ಶುದ್ಧಿಗಳನ್ನು; ಮನೋವಾಕ್ ಕಾಯ ಮೂರು ಗುಪ್ತಿಗಳನ್ನು; ಕ್ಷಮೆ, ಮಾರ್ದವ, ಆರ್ಜವ, ಸಂಯಮ, ತ್ಯಾಗ, ತಪ, ಸತ್ಯ, ಆಕಿಂಚನ್ಯ, ಬ್ರಹ್ಮಚರ್ಯ ಮೊದಲಾದ ದಶಧರ್ಮ ಗಳನ್ನು ಪಾಲಿಸಿದನು. ಇದರೊಂದಿಗೆ ಬಾಹ್ಯಾಭ್ಯಂತರವೆಂಬ ಹನ್ನೆರಡು ರೀತಿಯ ತಪಗಳನ್ನಾಚರಿಸುತ್ತ, ಇಪ್ಪತ್ತೆರಡು ರೀತಿಯ ಪರೀಕ್ಷಹ (ತಪಸ್ಸು ಮಾಡುವಾಗ ಉಂಟಾಗುವ ತೊಂದರೆ) ಗಳನ್ನು ಸಹಿಸುತ್ತ; ಸಪ್ತತತ್ತ್ವ ಗಳನ್ನು ನೆನೆಯುತ್ತ; ಕ್ರೋಧ ಮಾನ ಮಾಯಾ ಲೋಭ ಕಷಾಯಗಳನ್ನು ತೊರೆಯುತ್ತ ಹನ್ನೆರಡು ವರ್ಷಗಳ ವರೆಗೆ ಉಗ್ರೋಗ್ರ ತಪಸ್ಸುಮಾಡಿ ದನು.

ಆಗ ಅಜಿತಸ್ವಾಮಿಯು ಶುಕ್ಲಧ್ಯಾನದಿಂದ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯವೆಂಬ ಘಾತಿಚತುಷ್ಟಯ ಗಳನ್ನು ನಾಶಗೊಳಿಸಿದನು, ಪೂರ್ವಾಚಲದಲ್ಲಿ ಸೂರ್ಯನು ಉದಯಿಸು ವಂತೆ, ಕರ್ಮವೆಂಬ ವನವನ್ನು ಸುಟ್ಟುಹಾಕುವ, ಮೂರು ಲೋಕಕ್ಕೂ ಮಂಗಳಕರವಾದುವನ್ನು ಮಾಡುವ ಕೈವಲ್ಯಬೋಧೆ ಎಂಬ ಜ್ಞಾನವು ಅಜಿತ ಸ್ವಾಮಿಗೆ ಪುಷ್ಯಮಾಸದ ಶುಕ್ಲಪಕ್ಷದ ಏಕಾದಶಿಯ ಮಧ್ಯಾಹ್ನ ರೋಹಿಣಿ ನಕ್ಷತ್ರದಲ್ಲಿ ಲಭಿಸಿತು.

● ● ●

೮ ಕೇವಲಜ್ಞಾನ ಕಲ್ಯಾಣ

ಆಗ ಅಜಿತಸ್ವಾಮಿಗೆ ರತ್ನಸಿಂಹಾಸನ ಲಭಿಸಿತು. ದೇವತೆಗಳು ಪುಷ್ಪವೃಷ್ಟಿ ಮಾಡಿದರು. ಧರ್ಮನಿರೂಪಣೆ ಮಾಡುವ ದಿವ್ಯಧ್ವನಿ ಲಭಿಸಿತು. ಸುಂದರವಾದ ಮೂರು ಬೆಳ್ಗೊಡೆಗಳು ತಲೆಯ ಮೇಲೆ ಪ್ರಕಾಶಿಸಿದವು. ದುಂದುಭಿ ನಿನಾದ ಮೊಳಗಿತು. ಯಕ್ಷರು ಚಾಮರಗಳನ್ನು ಬೀಸಹತ್ತಿದರು, ಸ್ವಾಮಿಯ ಮುಖಕಮಲದ ಸುತ್ತು ಪ್ರಭಾಮಂಡಲ ಬೆಳಗಿತು. ಹೀಗೆ ಅಷ್ಟಮಹಾಪ್ರಾತಿಹಾರ್ಯಗಳು ಶೋಭಿಸಿದವು.

ಈ ಪ್ರಕಾರ ಎಂಟು ಪ್ರಕಾರದ ಮಹಾಪ್ರಾತಿಹಾರ್ಯಗಳು, ೩೪ ಅತಿಶಯಗಳು ಲಭಿಸಲು ಆದಿತೀರ್ಥಂಕರ ವೃಷಭನಾಥನಿಗೆ ವೃಷಭಸೇನನೆಂಬ ಗಣಧರನಾದಂತೆ, ಅಜಿತನಾಥನಿಗೆ ಸಿಂಹಸೇನನೆಂಬ ಗಣಧರನಾದನು.

ಆಗ ಕೇವಲಜ್ಞಾನವನ್ನು ಪಡೆದ ಅಜಿತ ತೀರ್ಥಂಕರ ಬಳಿಗೆ ನಾಗೇಂದ್ರನು ಕಾಮುಕೀ ವಿಮಾನವನ್ನು ಏರಿಬಂದನು. ಸೌಧರ್ಮೇಂದ್ರನು ಐರಾವಣವನ್ನೇರಿ ಬಂದನು. ಉಳಿದ ದೇವೇಂದ್ರರು ತಮ್ಮ ತಮ್ಮ ವಿಮಾನಗಳನ್ನೇರಿ ಬಂದರು. ಅಜಿತಜಿನನ ಕೇವಲಜ್ಞಾನೋದಯ ಕಲ್ಯಾಣ ಪೂಜೆಯನ್ನು ಮಾಡಲೆಂದು ಮೂರು ಸಲ ಪ್ರದಕ್ಷಿಣೆ ಹಾಕಿ, ಪುಷ್ಪಾಂಜಲಿಗಳನ್ನು ಅರ್ಪಿಸಿ ನಮಸ್ಕರಿಸಿದರು. "ಎಲ್ಲ ಜೀವಿಗಳಿಗೂ ತಿಲಕಪ್ರಾಯವಾಗಿ, ಅಂಧಕ್ಕಾರವನ್ನು ಹೋಗಲಾಡಿಸುವ ಕಲ್ಯಾಣಕರ ಜಿನಪ್ರಭುವಿಗೆ ಜಯ ಜಯಕಾರ"ವೆಂದು ಸ್ತುತಿಸಿದರು.

"ಗುಣಭೂಷಣನೇ, ಸರ್ವಜ್ಞಸ್ವರೂಪನೇ, ಪಾಪವಿನಾಶಿಯೇ, ಮನ್ಮಥಹರನೇ. ದೇವೇಂದ್ರ ಪೂಜಿತನೇ. ವಿಶುದ್ಧ ಚಾರಿತ್ರವಂತನೇ, ನಿನಗೆ ಜಯವಾಗಲಿ"

ಎಂದು ನಾನಾ ಛಂದೋಬಂಧಗಳಿಂದ ದೇವತೆಗಳೊಂದಿಗೆ ಇಂದ್ರನೂ ಸ್ತುತಿಸಿ ಅಜಿತನಾಥನಿಗೆ ಆನಂದದಿಂದ ನಮಸ್ಕರಿಸಿದನು. ಆಗ ಇಂದ್ರನು ಪ್ರಪಂಚಕ್ಕೆ ಗುರುವೆನಿಸಿದ ಅಜಿತನಾಥನಿಗಾಗಿ ಸಮವಸರಣ ಮಂಟಪವನ್ನು ನಿರ್ಮಿಸಲು ಕುಬೇರನಿಗೆ ಆಜ್ಞೆ ಮಾಡಿದನು.

೯ ಸಮವಸರಣ

ಕೇವಲಜ್ಞಾನ ಕಲ್ಯಾಣ ಮಹೋತ್ಸವ ಮುಗಿದ ಕೂಡಲೇ ದೇವೇಂದ್ರನು ಅಜಿತ ತೀರ್ಥಂಕರನಿಗಾಗಿ ಸಮವಸರಣ ಮಂಟಪವನ್ನು ನಿರ್ಮಿಸುವಂತೆ ಕುಬೇರನಿಗೆ ಆಜ್ಞಾಪಿಸಿದನು. ಅದರಂತೆ ಕುಬೇರನು ಲೋಕೋತ್ತರವಾದ ದಿವ್ಯ ಸಮವಸರಣ ಧರ್ಮಸಭಾಮಂಟಪವನ್ನು ನಿರ್ಮಿಸಿದನು. ಭೂಮಿಯಿಂದ ಐದು ಸಹಸ್ರ ಬಿಲ್ಲಿನ ಎತ್ತರದಲ್ಲಿ ನೀಲರತ್ನಗಳಿಂದ ನಿರ್ಮಿತವಾದ ಆ ಮಂಟಪವು ರತ್ನಖಚಿತವಾದ ಏಳು ಪ್ರಾಕಾರಗಳನ್ನು ಒಳಗೊಂಡಿದ್ದಿತು. ಅದರ ವಿಸ್ತಾರ ಹನ್ನೆರಡು ಯೋಜನ. ಅದರ ಸೌಂದರ್ಯವನ್ನು, ವೈಭವವನ್ನು ವರ್ಣಿಸಲಳವಲ್ಲ. ಕುಬೇರನಿಂದ ರಚಿತ ನಾಟ್ಯಶಾಲೆಯ ಸ್ತರಗಳು ಮಣಿಮಯ, ಕನಕಮಯವಾಗಿದ್ದವು.

ಆ ಸಮವಸರಣ ಮಂಟಪದ ಧೂಳಿಮಯವಾದ 'ಧೂಳೀಸಾಲ'ವೆಂಬ ಮೊದಲನೆಯ ಕೋಟೆಯು ಅದರ ಸಮೀಪದ ಭೂಮಿಯನ್ನು ಅಲಂಕರಿಸಿದ್ದಿತು. ಆ ಧೂಳೀಸಾಲದ ನಾಲ್ಕೂ ದಿಕ್ಕುಗಳಲ್ಲಿ ಬಂಗಾರಸ್ತಂಭಗಳಿದ್ದವು. ಸುವರ್ಣಮಯ ಮಕರ ತೋರಣಗಳಿಂದ ಅಲಂಕೃತವಾಗಿದ್ದವು. ಅಲ್ಲಿ ನವನಿಧಿ ರಾಶಿಯಾಗಿ ಬಿದ್ದಿದೆ. ಕೋಟೆಯ ಗೋಡೆಗಳೆಲ್ಲ ಬೆಳ್ಳಿ-ಬಂಗಾರದವು, ಮನೆಗಳೆಲ್ಲ ರತ್ನ, ವಜ್ರ, ವೈಡೂರ್ಯಖಚಿತ ಸ್ಫಟಿಕ ಭಿತ್ತಿಗಳುಳ್ಳವು ರತ್ನದ ಸೋಪಾನಗಳಿಂದ ನಿರ್ಮಿತವಾದ ಸರೋವರಗಳು, ರತ್ನಪೀಠಗಳ ಮೇಲೆ ಸ್ಥಾಪಿಸಿರುವ ಜಿನಬಿಂಬಗಳು. ಸ್ತೂಪಗಳು, ಮಾನಸ್ತಂಭಗಳು ಎಲ್ಲ ನವರತ್ನದಿಂದ ನಿರ್ಮಿತವಾದವು!

ಅಲ್ಲಿಯ ಮಾನಸ್ತಂಭಗಳನ್ನು ಕಂಡ ಮಾನವನ ಮಿಥ್ಯಾದೃಷ್ಟಿ ಕಳಚಿಬೀಳುತ್ತಿತ್ತು. ಅವುಗಳ ಸಮೀಪದ ಭೂಮಿಯ ಮೇಲೆ ನಿರ್ಮಲ ಜಲಭರಿತ ನಂದೆ, ಮಹಾನಂದೆ, ಸುಪ್ರತಿಷ್ಠೆ ಮೊದಲಾದ ಹದಿನಾರು ಬಾವಿಗಳಿದ್ದವು. ಆ ಸುವಾಸನಾಯುಕ್ತ ನಿರ್ಮಲ ಜಲದ ಕೊಳಗಳ ಸುತ್ತಲೂ ಕಲ್ಪವೃಕ್ಷ, ಸಮೇರು, ಮಂದಾರ, ಅಶೋಕ, ಲವಂಗ, ನಾರಂಗ ವೃಕ್ಷಗಳಿಂದ ಕೂಡಿದ ಉದ್ಯಾನವನ, ಕೃತಕಗಿರಿಗಳು ಲತಾಗೃಹಗಳು ಇದ್ದವು.

ಎರಡನೆಯ ಗೋಪುರದ್ವಾರದಿಂದ ಒಂದು ಗಾವುದ ಅಂತರದಲ್ಲಿ ಮೊದಲಿನಂತೆಯೇ ಮಣಿತೋರಣ ಸೋಪಾನಗಳಿಂದ, ವಿವಿಧ ಧ್ವಜಪತಾಕೆ ಗಳಿಂದ, ಅಷ್ಟಮಂಗಳ ದ್ರವ್ಯಗಳಿಂದ, ನವನಿಧಿಗಳಿಂದ ಕೂಡಿದ ನಾಗಕೇಸರ, ಹೊನ್ನೆ, ಹೂವುಗಳಿಂದ ಕೂಡಿದ ಲತಾಮಂಟಪ ವನವಿದ್ದಿತು.

ಮೂರನೆಯ ಗೋಪುರದ್ವಾರದ ಆಚೆ ಸುವರ್ಣದಿಂದ ರಚಿತ ಕೋಟೆಯ ಗೋಡೆಗಳು, ಅದರ ನಾಲ್ಕೂ ದಿಕ್ಕಿನಲ್ಲಿ ಅಶೋಕವನ, ಬೀದಿಯ ಎರಡೂ ಬದಿಗೆ ಮಣಿ–ತೋರಣಗಳಿಂದ ಕೂಡಿದ ನಾಟ್ಯಶಾಲೆ, ಅವುಗಳ ಎರಡೂ ಕಡೆಗೆ ಧೂಪಘಟಗಳಿದ್ದವು.

ನಾಲ್ಕನೆಯ ಗೋಪುರ ದ್ವಾರದ ಒಳಗೆ ಯೋಜನಾಂತರದಲ್ಲಿ ರತ್ನ ಮಯ ಸೋಪಾನಗಳಿಂದ ಕೂಡಿದ ನಾಗಧ್ವಜ, ಅಷ್ಟಮಂಗಳ ದ್ರವ್ಯ, ನವ ನಿಧಿಗಳಿಂದ ಸುತ್ತುವರಿದ ಬೆಳ್ಳಿಯ ಗೋಪುರ, ಮಾರ್ಗಮಧ್ಯದಲ್ಲಿ ಒಂಬತ್ತು ಸ್ತೂಪಗಳು, ಸಿದ್ಧರ, ಅರಹಂತರ ಬಿಂಬಗಳು ಶೋಭಿಸುವವು. ಅದರ ಒಳ ಗಡೆ ಇರುವುದೇ ಎರಡನೆಯ ಕೋಟೆ. ಅದರ ಒಳಗಡೆ ಒಂದು ಲಕ್ಷ ಯೋಜನ ಪರಿಮಿತ ಲಕ್ಷ್ಮೀ ಮಂಟಪ, ಅದರ ಹನ್ನೆರಡು ಕೋಷ್ಠಗಳಲ್ಲಿ ಗಣಧರರು, ಕಲ್ಪವಾಸೀ ದೇವರು,ಜ್ಯೋತಿಷ್ಕ ದೇವತೆಗಳು, ಆರ್ಯಿಕೆಯರು, ಶ್ರಾವಕ ಶ್ರಾವಕಿಯರು ಅಲ್ಲಿ ಧನ್ಯತೆಯನ್ನು ಪಡೆದು ವಾಸಿಸುತ್ತಿದ್ದರು.

ಏಳನೆಯ ಪ್ರಾಕಾರದ ಒಳಗಡೆಯಲ್ಲಿ ಆರು ದಂಡಗಳಷ್ಟು ಎತ್ತರವೂ, ಒಂಬತ್ತು ದಂಡಗಳಷ್ಟು ವಿಸ್ತಾರವೂ ಆದ ಗಂಧಕುಟಿಯಿದೆ. ಅದರ ಮಧ್ಯ ದಲ್ಲಿ ನಾನಾ ರತ್ನಮಯವಾದ ಮೊದಲನೆಯ ಪೀಠವು ಶೋಭಿಸುವದು. ನಾಲ್ಕೂ ದಿಕ್ಕುಗಳ ಮಾರ್ಗದಲ್ಲಿ ಧರ್ಮಚಕ್ರವನ್ನು ತಲೆಯ ಮೇಲೆ ಹೊತ್ತ ಯಕ್ಷರು ನಿಂತಿರುತ್ತಾರೆ, ಗಂಧಕುಟಿಯ ಮಧ್ಯದಲ್ಲಿದ್ದ ಮೂರನೆಯ ಸಿಂಹಪೀಠವು ನಾನಾ ರತ್ನಮಯವಾದ ಒಂದು ಮಹೋನ್ನತ ಸಿಂಹಾಸನ. ಆ ಸಿಂಹಾಸನದ ಮೇಲೆ ನಾಲ್ಕು ಬೆರಳು ಅಂತರದಲ್ಲಿ ಸಿಂಹಾಸನವನ್ನು ಮುಟ್ಟದೆ, ದ್ವಿತೀಯ ತೀರ್ಥಂಕರ ಅಜಿತಸ್ವಾಮಿಯು ಸಿದ್ಧಪರಮೇಷ್ಠಿಯಂತೆ ಕುಳಿತು ಶೋಭಿಸುವನು. ಆತನ ಸುತ್ತು ಹರಡಿದ ಪ್ರಭಾವಲಯವು ಸಕಲ

ಜ್ಯೋತಿರ್ಲೋಕಗಳನ್ನೂ ವ್ಯಾಪಿಸಿದೆ. ಯಕ್ಷಕುಮಾರರು ಆತನಿಗೆ ಚಾಮರ ಬೀಸುತ್ತಿದ್ದಾರೆ; ದೇವಸಮೂಹ ಅವನ ಸುತ್ತು ನೆರೆದಿದೆ. ದೇವ, ಮಾನವ, ತಿರ್ಯಕ್‌ಗಳಿಗೆ ಪೂಜ್ಯನಾದ, ೩೪ ಅತಿಶಯಗಳನ್ನು ಒಳಗೊಂಡು, ಸಾವಿರ ಕಣ್ಣುಗಳಿಂದ ಕೂಡಿದ ಅಜಿತಸ್ವಾಮಿಯು ಸಮವಸರಣ ಮಂಟಪವನ್ನು ಅಲಂಕರಿಸಿರುವರು.

ಹೀಗೆ ಪ್ರಕಾಶಮಾನವಾದ, ಕೇವಲಜ್ಞಾನದಿಂದ ಸರ್ವಜ್ಞತ್ವವನ್ನು ಗ್ರಹಿಸಿ, ಮೋಕ್ಷಲಕ್ಷ್ಮಿಗೆ ಒಡೆಯನಾಗಿ, ಎಲ್ಲ ದೇವತೆಗಳ ಕಿರೀಟಮಣಿ ಪ್ರಭೆ ಪಾದಗಳನ್ನು ಪೂಜಿಸುತ್ತಿರಲು ಘಾತಿಕರ್ಮಗಳನ್ನು ನಾಶಮಾಡಿ ಅಜಿತನಾಥನು ಮೇರುಪರ್ವತದಂತೆ ಸಮವಸರಣ ಮಂಟಪದಲ್ಲಿ ವಿರಾಜಮಾನನಾದನು,

●●●

೧೦ ಸಹಸ್ರಲೋಚನ ಸ್ತುತಿ

ಮಂಗಳಕರವಾದ ಸಮವಸರಣ ಮಂಟಪದಿಂದ ಶೋಭಿತನಾದ, ದೇವತೆಗಳು ಪೂಜಿಸಿದ ಸಿಂಹಾಸನದ ಮೇಲೆ ಕುಳಿತ, ಸಕಲ ಸುರಾಸುರರಿಂದ ಪೂಜಿತನಾದ, ಪಾಪವಿನಾಶಕ ಅಜಿತ ತೀರ್ಥಂಕರನನ್ನು ದೇವೇಂದ್ರನು ನಾನಾ ರೀತಿಯಲ್ಲಿ ಸ್ತುತಿಸಬೇಕೆಂದು ಕೈಮುಗಿದು ನಿಂತನು. ಹಾಗೂ ಅತಿಶಯ ಪುಣ್ಯದ ಪುಂಜವೇ ಮೂರ್ತಿವೆತ್ತಂಥ ಅಜಿತನಾಥನನ್ನು ಸಂಗೀತದಿಂದ ಗುಣ ಗಾನ ಮಾಡಿದನು.

'ಸುರಾಸುರರೊಡೆಯರ ಪ್ರಕಾಶಮಾನವಾದ ಕಿರೀಟಗಳು ನಿನ್ನ ಪಾದಕ್ಕೆ ಬಾಗಿವೆ. ಸಕಲ ಜನಕ್ಕೂ ನೀನೇ ಕಲ್ಪವೃಕ್ಷ !

'ದೇವಸುಂದರಿಯರು ಬಂದು ಜಿನಮಾತೆಯ ಗರ್ಭಸಂಶೋಧನೆ ಮಾಡಿ, ಸೇವೆಮಾಡಿದ ಪುಣ್ಯವನ್ನು ವರ್ಣಿಸಲು ಯಾರಿಗೆ ಸಾಧ್ಯ ?

'ದೇವತೆಗಳು ಸ್ನಾನಮಾಡಿಸುವವರು, ದೇವಪರ್ವತವೇ ಮಜ್ಜನಪೀಠ, ಸಮುದ್ರದ ನೀರು ಬರಿದಾಯಿತು. ನಿನ್ನ ಭಾರದಿಂದ ಮೇರುಪರ್ವತ ಕಿರಿದಾಯಿತು. ನಿನ್ನ ಉಸಿರಾಟಕ್ಕೆ ದೇವತೆಗಳು ಒಣಗಿದ ಎಲೆಗಳಂತೆ ಹಾರಿಹೋದರು.

'ಯೌವನ, ರೂಪು, ವೈಭವವಿರಲು ಎಲ್ಲವನ್ನು ತೊರೆದು ನಿನ್ನಂತೆ ಮಾಡುವುದು ಯಾರಿಗೆ ಸಾಧ್ಯ? ಕುಬೇರನಿಂದ ರಚಿತವಾದ ನಿನ್ನ ಸಮವ ಸರಣ ಮಂಟಪವು ಸಕಲ ಶ್ರೀವಿಲಾಸದಂತೆ ಮೆರೆಯುವದು.

'ಮೂರು ಕಣ್ಣು, ಮೂರು ರತ್ನ, —ಇವುಗಳಂತೆ ನಿನ್ನ ಮೂರು ಬೆಳ್ಗೊಡೆಗಳು ಬೇರೆ ಯಾರಿಗೆ ಶೋಭಿಸುವವು ?

'ಲೋಕಕ್ಕೆ ನೀನು ಧರ್ಮಾಮೃತವನ್ನು ಸುರಿಯಲು, ನಿನ್ನ ಮೇಲೆ ದೇವತೆಗಳು ಪೂಮಳೆ ಸುರಿಯುವುದೇನು ಆಶ್ಚರ್ಯ ?

'ಮೇಘಧ್ವನಿಯು ವನವನ್ನು ತಣಿಸುವಂತೆ ನಿನ್ನ ದಿವ್ಯಧ್ವನಿಯು ಪ್ರಪಂಚದ ಸರ್ವ ಜೀವಿಗಳನ್ನು ತಣಿಸುವುದು.

'ಪಾಪ ಸಮೂಹವನ್ನು ಹೊಡೆದೋಡಿಸುವ ನಿನ್ನ ದುಂದುಭಿ ಗಂಭೀರ ಧ್ವನಿಯಂತೆ ಸುರದುಂದುಭಿಗಳು ಆಕಾಶದಲ್ಲಿ ಮೊಳಗುತ್ತಿರಲು ಜಯ ದುಂದುಭಿಯಂತೆ ಜೀವಿಗಳಿಗೆ ಆನಂದವಾಯಿತು.

'ಪಾಪವೆಂಬ ಗಜಸಮೂಹಕ್ಕೆ ಸಿಂಹದಂತಿರುವ ನಿನಗೆ ರತ್ನಖಚಿತ ಸುವರ್ಣ ಸಿಂಹಾಸನವು ಶೋಭಿಸುವುದು.

'ದೇವಕೃತ ಕಾರ್ಯಗಳು ನಿನಗೆ ಸ್ವಾಭಾವಿಕ. ಹಾಗೆಯೇ ೩೪ ಅತಿಶಯಗಳು ನಿನಗಲ್ಲದೆ ಬೇರೆಯಾರಿಗೆ ದೊರೆಯಬೇಕು ?

'ನಿನ್ನ ಸ್ವರ್ಗಾವತರಣದಿಂದ ಗರ್ಭ,ಜನ್ಮ, ಪರಿನಿಷ್ಕ್ರಮಣ, ಕೇವಲೋದಯ ಈ ನಾಲ್ಕು ಕಲ್ಯಾಣಗಳಿಗಿಂತ ಈ ನಿನ್ನ ನಿರ್ವಾಣಕಲ್ಯಾಣ ಶ್ರೇಷ್ಠ ವಾದುದು.

'ಅಹಮಿಂದ್ರ, ಇಂದ್ರ, ಲೋಕಾಂತಿಕ ದೇವ, ನಾಗಪತಿಗಳು, ರಾಜರು ನಿನಗೆ ನಮಸ್ಕರಿಸುವಾಗ ಜಗದ ಜನರು ನಮಸ್ಕರಿಸದೆ ಇರುವರೇ ?

'ಜಿನೇಶ್ವರ, ನಿನಗೆ ಹೋಲಿಕೆ ಎಲ್ಲಿಯದು. ನಿನಗೆ ನೀನೇ ಸಮಾನ. ಮಂದರಕ್ಕೆ ಮಂದರ, ಸಮುದ್ರಕ್ಕೆ ಸಮುದ್ರವೇ ಸಮಾನ ತಾನೆ!' ಎಂದು ಸಾವಿರ ಕಣ್ಣುಳ್ಳ ದೇವೇಂದ್ರನು ಕೇವಲಜ್ಞಾನಿಯನ್ನು ಕಾಶ್ಯಪಗೋತ್ರ, ಪ್ರಜಾಪತಿ, ಸ್ವಯಂಭೂ, ಸರ್ವಜ್ಞ ಮೊದಲಾದ ನೂರಾರು ಹೆಸರುಗಳಿಂದ ಸ್ತುತಿಸಿದನು.

ವಿಹಾರ

ಭರತ ಚಕ್ರವರ್ತಿಯು ಆದಿತೀರ್ಥಂಕರ ವೃಷಭದೇವರನ್ನು ಭಕ್ತಿಪುರಸ್ಸರವಾಗಿ ಪೂಜಿಸಿ ಹಿರಿದಾದ ಪುಣ್ಯವನ್ನು ಪಡೆದಂತೆ, ಸತ್ಯಭಾವನು ಅಜಿತ ತೀರ್ಥಂಕರರನ್ನು ಭಾವಶುದ್ಧಿಯಿಂದ ಪೂಜಿಸಿ ಪುಣ್ಯಪಡೆದನು.

ಸತ್ಯಭಾವನೆಂಬ ಕ್ಷತ್ರಿಯನು, ರೋಹಿಣಿ ಎಂಬ ಯಕ್ಷಿಯು, ಮಹಾಯಕ್ಷನೆಂಬ ಯಕ್ಷನು, ಷಪಸೇನ ಮೊದಲಾದ ತೊಂಬತ್ತೆರಡು ಜನ ಗಣಧರರು, ಮೂರುಸಾವಿರದ ಏಳುನೂರಐವತ್ತೆರಡು ಪೂರ್ವಧರರು, ಇಪ್ಪತ್ತೆಂಟು ಸಾವಿರ ಒಂದುನೂರಹನ್ನೆರಡು ಶಿಕ್ಷಕರು, ಐದು ಸಾವಿರ ಆರುನೂರ ಅವಧಿಜ್ಞಾನಿಗಳು, ಇಪ್ಪತ್ತುಸಾವಿರ ಕೇವಲಿಗಳು, ಇಪ್ಪತ್ತು ಸಾವಿರದ ನಾಲ್ಕುನೂರು ವಿಕ್ರಿಯಾ ಸಂಪನ್ನರು, ಹನ್ನೆರಡು ಸಾವಿರ ಐದುನೂರು ಮನಃಪರ್ಯಾಯ ಜ್ಞಾನಿಗಳು, ಹನ್ನೆರಡು ಸಾವಿರ ನಾಲ್ಕು ನೂರು ವಾದಿಗಳು, ಮೂರು ಲಕ್ಷ ಇಪ್ಪತ್ತು ಸಾವಿರ ಆರ್ಯಿಕೆಯರು, ಮೂರು ಲಕ್ಷ ಶ್ರಾವಕರು, ಐದು ಲಕ್ಷ ಶ್ರಾವಕಿಯರು, ಅಸಂಖ್ಯಾತ ದೇವ ದೇವಿಯರು, ಅಸಂಖ್ಯಾತ ತಿರ್ಯಗ್ಜಾತಿಗಳನ್ನೊಳಗೊಂಡ ಸಂಘದೊಂದಿಗೆ ಅಜಿತನಾಥನು ಧರ್ಮಕ್ಷೇತ್ರಗಳಲ್ಲಿ ಭವ್ಯರಿಗೆ ಧರ್ಮಾಮೃತವನ್ನು ಬೋಧಿಸುತ್ತ ಪಶ್ಚಿಮ ಸಮುದ್ರ ತೀರದಲ್ಲಿ ಬಂದು ಘಾತಿಕರ್ಮಗಳನ್ನು ಕೆಡಿಸಿ, ಮೂವತ್ತುನಾಲ್ಕು ಅತಿಶಯಗಳನ್ನು ಪಡೆದನು. ಧರ್ಮೋಪದೇಶ ಮಾಡುತ್ತ ಜಗತ್ತನ್ನೆಲ್ಲ ತನ್ನ ಉಪದೇಶಾಮೃತದಿಂದ ಪಾವನಗೊಳಿಸಿ ಸಮ್ಮೇದ ಪರ್ವತಕ್ಕೆ ಬಂದು ಒಂದು ತಿಂಗಳಕಾಲ ವಿಹಾರವನ್ನು ನಿಲ್ಲಿಸಿದನು.

ಅಜಿತಜಿನನು ಸಮ್ಮೇದಗಿರಿಯಲ್ಲಿ ನೆಲಸಿದುದರಿಂದ ಆ ಗಿರಿಯು ಓರಿದಾದ ವೃಷವನ್ನು ನೋಂತ ಕೀರ್ತಿಯನ್ನು ಪಡೆದಂತೆ ಸಂತೋಷಭರಿತವಾಯಿತು. ಅಲ್ಲಿ ಅವನು ಧ್ಯಾನವಿಧಿಯಿಂದ ಕರ್ಮಗಳನ್ನೆಲ್ಲ ಕೆಡಿಸಿ, ಶುಕ್ಲಧ್ಯಾನದಿಂದ ಘಾತಿಚತುಷ್ಟಯಗಳನ್ನು ನಾಶಮಾಡಿ ಪಂಚಮಿಯ ಪೂರ್ವಾಹ್ಣದಲ್ಲಿ ಶಿವಪದವನ್ನು ಪಡೆದನು.

೧೧ ಪರಿನಿರ್ವಾಣ ಕಲ್ಯಾಣ

ಕೈವಲ್ಯ ಬೋಧೆಯನ್ನು ಪಡೆದ ಅಜಿತನಾಥಸ್ವಾಮಿಯು ಮುಕ್ತಿಯನ್ನು ಪಡೆದನು. ತಂದೆ ಜಿತಶತ್ರು, ತಾಯಿ ವಿಜಯಸೇನಾ ಮಹಾದೇವಿ. ರಾಜಧಾನಿ ಅಯೋಧ್ಯಾ ನಗರವು ಅವನದಾಗಿದ್ದಿತು. ಅವನ ಲಾಂಛನ ಆನೆ. ಯಕ್ಷ ಮಹಾಯಕ್ಷ, ಯಕ್ಷಿ ರೋಹಿಣಿ. ಹೀಗಿದ್ದ ಅಜಿತನಾಥನು ಅಷ್ಟಕರ್ಮಗಳನ್ನು ಕೆಡಿಸಿ, ಅನಂತದರ್ಶನ. ಅನಂತಜ್ಞಾನ, ಅನಂತಸುಖ. ಅನಂತವೀರ್ಯವನ್ನು ಪಡೆದು ಮೋಕ್ಷಲಕ್ಷ್ಮಿವಲ್ಲಭನಾದನು.

ಇದನ್ನು ತಿಳಿದ ದೇವೇಂದ್ರನು ತನ್ನ ದೇವಲೋಕದ ದೇವ ಪರಿವಾರದೊಡನೆ ಅಗ್ನಿ,ದೀಪ, ಧೂಪಗಳಿಂದ ಜಿನನಿರ್ವಾಣ ಕ್ಷೇತ್ರದ ಪೂಜೆ ಮಾಡಲು ಹೊರಟುಬಂದನು. ಭಕ್ತಿಪೂರ್ವಕ ಪೂಜಾವಿಧಿಯನ್ನು ನೆರವೇರಿಸಿದನು. ಆ ಮಂಗಳ ಪ್ರಸಂಗದಲ್ಲಿ ಸೌಧರ್ಮೇಂದ್ರನು ಆನಂದನರ್ತನವನ್ನು ಮಾಡಿದನು. ದೇವಪರಿವಾರವು ಜಿನನಿಗೆ ನಮಸ್ಕರಿಸಿ ತಿರುಗಿ ತಮ್ಮ ತಮ್ಮ ನೆಲೆಗಳಿಗೆ ಮರಳಿತು.

ಇತ್ತ ಅಜಿತಸ್ವಾಮಿಯ ತಾಯಿ–ತಂದೆಯರಾದ ವಿಜಯಸೇನಾ ಮಹಾದೇವಿ ಹಾಗೂ ಜಿತಶತ್ರುಮಹಾರಾಜ, ಹಾಗೂ ಮಗನಾದ ಅಜಿತ-ಸೇನಕುಮಾರರು ಮೋಹವಶರಾಗಿ ದುಃಖಿತಪ್ತರಾಗಿದ್ದರು. ಅವರಿಗೆ ಸಿಂಹಸೇನ ಗಣಧರ ಮೊದಲಾದವರು ಸಂಸಾರಸ್ವರೂಪವನ್ನು ತಿಳಿಸಿದರು,

ಧರ್ಮೋಪದೇಶವನ್ನು ಮಾಡಿದರು. ಆ ಪರಮೇಶ್ವರನು ಹೊಂದಿದ ಸಿದ್ಧ ಶಿಲೆಯೇ ಎಲ್ಲರಿಗೂ ವಾಸಯೋಗ್ಯವಾದ ಸ್ಥಳವೆಂದು ಉಪದೇಶಿಸಿ ಅವರನ್ನು ಸಾಂತ್ವನಗೊಳಿಸಿದರು.

ಆಗ ಜಿನಶತ್ರುಮಹಾರಾಜ, ವಿಜಯಸೇನಾಮಹಾದೇವಿ ಹಾಗೂ ಅಜಿತಸೇನ ಕುಮಾರರು ಸಮಾಧಾನದಿಂದ ಅಯೋಧ್ಯೆಗೆ ಹಿಂದಿರುಗಿದರು. ಅಲ್ಲಿ ಬೃಹದಾಕಾರದ ಜಿನಮಂದಿರಗಳನ್ನು ಕಟ್ಟಿಸಿ, ಧ್ವಜಗಳನ್ನು ಹಾರಿಸಿ. ಮಹಾದಾನವನ್ನು ಮಾಡಿ ಬಂಗಾರದ ಜಿನಬಿಂಬಗಳನ್ನು ಮಾಡಿಸಿದರು. ರತ್ನತ್ರಯಗಳನ್ನು ಕೊಂಡಾಡಿದರು. ದಾನಚಿಂತಾಮಣಿಯಂತೆ ಧರ್ಮಪ್ರಸಾರ ಮಾಡುತ್ತ. ಚಾರಿತ್ರ್ಯ ಸಂಪನ್ನರಾಗಿ ಕೃತಕೃತ್ಯರಾದರು.

● ● ●

೧೨ ದ್ವಿತೀಯ ಚಕ್ರವರ್ತಿ ಸಗರ

ತೀರ್ಥಂಕರರ ಚರಿತ್ರೆಯಲ್ಲಿ ಆನುಷಂಗಿಕವಾಗಿ ಆ ಕಾಲದ ಚಕ್ರವರ್ತಿಯೊಬ್ಬರ ಚರಿತ್ರೆಯನ್ನು ನಿರೂಪಿಸುವುದು ಜೈನ ಪುರಾಣಗಳ ಒಂದು ಲಕ್ಷಣ. ಆದುದರಿಂದ ಎರಡನೆಯ ತೀರ್ಥಂಕರನಾದ ಅಜಿತನಾಥನ ಕಥೆಯ ಕೊನೆಯಲ್ಲಿ, ಅಜಿತನಾಥನ ಭಕ್ತನಾದ ಸಗರ ಚಕ್ರವರ್ತಿಯ ಕಥೆಯು ಉಚಿತವಾದುದಾಗಿದೆ.

ಈ ಸಗರನೆಂಬ ಎರಡನೆಯ ಚಕ್ರವರ್ತಿಯು, ತನ್ನ ಮುಂಚಿನ ಮೂರನೆಯ ಭವದಲ್ಲಿ ಜಂಬೂದ್ವೀಪದ, ಪೂರ್ವ ವಿದೇಹದ ಸೀತಾನದಿಯ ದಕ್ಷಿಣ ವತ್ಸಕಾವತಿ ವಿಷಯದ ಪೃಥ್ವಿನಗರವನ್ನು ಜಯಸೇನನೆಂಬ ಅರಸನಾಗಿ ಆಳುತ್ತಿದ್ದನು. ವಿಜಯಸೇನೆ ಅವನ ಪಟ್ಟದರಸಿ. ಆ ರಾಜದಂಪತಿಗಳಿಗೆ ರತಿಷೇಣ, ಧೃತಿಷೇಣ ಎಂಬ ಇಬ್ಬರು ಮಕ್ಕಳಾದರು. ಇವರಲ್ಲಿಯ ಹಿರಿಯನಾದ ರತಿಷೇಣನು ಅಕಾಲ ಮರಣವನ್ನಪ್ಪಿದನು. ಆಗ ಜಯಸೇನನು ಪುತ್ರಶೋಕದಿಂದ ಕಂಗೆಟ್ಟು 'ಗೊಳೋ' ಎಂದು ಅಳುತ್ತಿದ್ದನು. ಹೀಗೆ

ಒಂದೇ ಸವನೇ ವ್ಯರ್ಥವಾಗಿ ಅಳುತ್ತಿದ್ದ ಜಯಸೇನಮಹಾರಾಜನ ಶೋಕವನ್ನು ಕಂಡು, ಅವನ ಮೈದುನನಾದ ಮಹಾರುತನು ಅವನನ್ನು ಸಮಾಧಾನ ಪಡಿಸುತ್ತ,

'ಭಾವ, ಮಗನ ಅಗಲುವಿಕೆಯಿಂದ ನೀನು ಅತ್ತರೆ, ಅವನು ಮತ್ತೆ ಬರುವನೇ? ಸದಸದ್ವಿವೇಕ ಬುದ್ಧಿಯನ್ನು ಕಳೆದುಕೊಳ್ಳಬೇಡ. ನೀನು ವಿವೇಕ ಕಳೆದುಕೊಂಡಿರುವಿ. ಸ್ವಲ್ಪ ಯೋಚಿಸು. ಯಮನ ಪಾಶಕ್ಕೆ ತುತ್ತಾದ ಅದೆಷ್ಟು ಜನ ಸಂಬಂಧಿಗಳನ್ನು ನೆನೆದು ನೀನು ಅಳುತ್ತ ಕೂಡ್ರುವಿ? ನಿನ್ನ ಅದೆಷ್ಟು ಭವದ, ಅದೆಷ್ಟು ಬಂಧುಗಳು ಯಮನಿಗೆ ತುತ್ತಾದರೋ! ಈ ದುಃಖವನ್ನು ಮರೆತು ಜಿನನನ್ನು ನಂಬು. ಧರ್ಮವೇ ನಮಗೆ ದಾರಿದಿಕ್ಕು! ನಾವಿಬ್ಬರೂ ಈ ಸಂಸಾರದ ದಟ್ಟಡವಿಯನ್ನು ತ್ಯಜಿಸಿ ಪಾರಾಗೋಣ' ಎಂದು ಉಪದೇಶಿಸಿದನು.

ತನ್ನ ಭಾವನಾದ ಜಯಸೇನನಿಗೆ ಮಹಾರುತನು ಸಂಸಾರ ಸ್ವರೂಪವನ್ನು ವಿವರಿಸಲು. ಅವನ ಮಾತುಗಳನ್ನು ಕೇಳಿ ಅವನು ದುಃಖಿಸುವದನ್ನು ಬಿಟ್ಟು ವಿವೇಕ ತಾಳಿದನು, ತನ್ನ ಮಗನಾದ ಧೃತಿಷೇಣನಿಗೆ ರಾಜ್ಯಾಭಿಷೇಕ ಮಾಡಿ ರಾಜ್ಯಭಾರವನ್ನು ಒಪ್ಪಿಸಿ, ಹಲವಾರು ರಾಜಕುಮಾರರು ಹಾಗೂ ಮಹಾರುತನೊಂದಿಗೆ ಯಶೋಧರಋಷಿಗಳಿಂದ ಜಿನದೀಕ್ಷೆಯನ್ನು ಪಡೆದನು. ತಪದಲ್ಲಿ ಮಗ್ನನಾದನು. ತನ್ನ ಅಂತ್ಯಕಾಲ ಸಮೀಪಿಸಲು ಸನ್ಯಸನ ಮರಣ ದಿಂದ ದೇಹವನ್ನು ಮುಡುಪಿದನು.

ಸಮಾಧಿ ಮರಣದಿಂದ ಸತ್ತ ಜಯಸೇನ ಮಹಾರಾಜನು ಆರಣವೆಂಬ ಹದಿನೈದನೆಯ ಕಲ್ಪದಲ್ಲಿ ಮಹಾಬಲನೆಂಬ ದೇವನಾಗಿ ಹುಟ್ಟಿದನು. ದೇವ ಲೋಕದ ಸುಂದರಿಯರು ತಮ್ಮ ಸುಂದರ ಮುಖಗಳನ್ನು ನೋಡುವ ರತ್ನ ಗನ್ನಡಿಯಂತಹ ಮುಖವುಳ್ಳವನಾಗಿ ಸಕಲ ಭೋಗಭಾಗ್ಯಗಳನ್ನು ಅನುಭವಿ ಸುತ್ತಿದ್ದನು. ಜಯಸೇನ ಮಹಾರಾಜನ ಮೈದುನನಾದ ಮಹಾರುತನೂ ಆ ಕಲ್ಪದಲ್ಲಿಯೇ ಮಣಿಕೇತುವೆಂಬ ದೇವನಾಗಿ ದೇವಲೋಕ ಸರೋವರದ ಶ್ರೇಷ್ಠರತ್ನವಾದನು.ಹೀಗೆ ಇಬ್ಬರೂ ಸ್ವರ್ಗಸುಖವನ್ನು ಅನುಭವಿಸುತ್ತಿದ್ದರು.

ಆಗ ನಮ್ಮಲ್ಲಿಯ ಯಾರು ಮೊದಲು ಮನುಷ್ಯ ಲೋಕಕ್ಕೆ ಹೋಗು ವರೋ ಅವನಿಗೆ ದೇವಲೋಕದಲ್ಲಿ ಉಳಿದವನು ಕಂಡು ಉಪದೇಶ ಮಾಡಿ ವಿಷಯ ಸುಖದಲ್ಲಿ ಮಗ್ನನಾದವನನ್ನು ದೀಕ್ಷಾಭಿಮುಖಿಯನ್ನಾಗಿ ಮಾಡುವು ದೆಂದು ನಿರ್ಧರಿಸಿಕೊಂಡರು.

ಮುಂದೆ ಮೊದಲ ಭವದಲ್ಲಿ ಜಯಸೇನನಾಗಿದ್ದ ಮಹಾಬಲನು ಸ್ವರ್ಗ ದಿಂದ ಚ್ಯುತನಾಗಿ, ಜಂಬೂದ್ವೀಪದ ಭರತಕ್ಷೇತ್ರದ ಅಯೋಧ್ಯಾಪುರದ ಇಕ್ಷ್ವಾಕು ವಂಶದ ಅರಸನಾದ ಗುಣಮಣಿ ಸಮುದ್ರವಿಜಯನ ಶೃಂಗಾರ ಸಮುದ್ರವೇ ಆದ ಸುಬಾಲಾದೇವಿ ಪಟ್ಟದ ರಾಣಿಯ ಗರ್ಭದಲ್ಲಿ ಸಗರನೆಂದು ಹುಟ್ಟಿದನು.

ಸಗರ ದಿಗ್ವಿಜಯ

ಸಗರನು ಹದಿನೆಂಟು ಲಕ್ಷ ಪೂರ್ವಗಳಷ್ಟು ಬಾಲ್ಯಕಾಲವನ್ನು ಕಳೆದನು. ಆ ಮೇಲೆ ಪಟ್ಟವನ್ನೇರಿ ಹದಿನೆಂಟು ಲಕ್ಷ ಪೂರ್ವಗಳಷ್ಟು ದೀರ್ಘಕಾಲ ರಾಜ್ಯವನ್ನು ಆಳಿದನು. ಆತನ ಆಯುಧಾಗಾರದಲ್ಲಿ ಚಕ್ರವರ್ತಿಸೂಚಕವಾದ ಚಕ್ರರತ್ನವು ಹುಟ್ಟಿತು. ತನ್ನ ಮುಂಚಿನ ಭರತಚಕ್ರವರ್ತಿಯಂತೆ ಸಗರನೂ ದಿಗ್ವಿಜಯವನ್ನು ಮಾಡಿದನು. ಷಟ್ಖಂಡಗಳ ಚಕ್ರವರ್ತಿಯಾದನು.

ಆಗ ಹೊಳೆಯುವ ಕಾಮನಬಿಲ್ಲನ್ನೇ ತೋರಣವಾಗಿ, ಹಂಸಗಳ ಧ್ವನಿ ಯನ್ನೇ ಮಂಗಳ ವಾದ್ಯವನ್ನಾಗಿ ಮಾಡಿ, ಹಬ್ಬಿದ ಬಿಳಿಯ ಮೋಡಗಳು ಶರತ್ಕಾಲದ ಆರಂಭದಲ್ಲಿ ಶೋಭಿಸುತ್ತಿದ್ದವು. ಆಗ ಸಗರನು ದಿಗ್ವಿಜಯಕ್ಕೆ ಹೊರಡಲು ಬಯಸಿ ವಿಜಯಾಭಿಷೇಕ ಮಾಡಿಕೊಂಡು ಪೂರ್ವದಿಕ್ಕಿನಲ್ಲಿ ಹೊರಟನು.

ವಿಜಯಸಿಂಧುರವೆಂಬ ಅವನ ಪಟ್ಟದಾನೆಯು ತಲೆಯ ಪೂರ್ಣ ಕುಂಭ ದಿಂದಲೂ ಹಾರಾಡುವ ಧ್ವಜಗಳಿಂದಲೂ ಶೋಭಿಸುತ್ತಿತ್ತು. ಹೀಗೆ ಅಲಂಕಾರಗೊಂಡ ಆನೆಯ ಮೇಲೇರಿ ಚದುರಂಗ ಬಲದೊಂದಿಗೆ ದಿಗ್ವಿಜಯಕ್ಕೆ

ಪೊರಟನು. ಆಗ ತೊರೆ, ಬೆಟ್ಟ, ನೆಲ, ಜಲ, ಗಿಡಮರಗಳನ್ನು ಹೊತ್ತ ಆದಿಶೇಷನು ಇವನ ಚದುರಂಗಬಲದ ಭಾರದಿಂದ ತಿಣುಕುತ್ತಿರುವಂತೆ ಕಂಡಿತು. ಅವನ ಸೇನೆಯ ಪಾದಧೂಳಿ ಹಾಗೂ ಆನೆಗಳ ಪದಾಘಾತದಿಂದ ವನದುರ್ಗಗಳೇ ನುಗ್ಗುನುಗ್ಗಾದವು.

ಹೀಗೆ ಹೊರಟು ಗಂಗಾನದಿಯ ದಂಡೆಗುಂಟ ನಡೆದು, ಮರುದ್ದೇವನೆಂಬ ಹನ್ನೆರಡನೆಯ ಮನುವಿನ ಕಾಲದಿಂದಲೂ ಸುಪ್ರಸಿದ್ಧವಾಗಿದ್ದ ಉಪಸಮುದ್ರವನ್ನು ಪ್ರವೇಶಿಸದೆ, ಗಂಗಾವವೇದಿಕೆಯ ದ್ವಾರದಿಂದ ನಲವತ್ತೆಂಟು ಗಾವುದ ನಡೆದು ವಿಸ್ತಾರವಾದ ಭೂಪ್ರದೇಶವಲ್ಲಿ ಬೀಡು ಬಿಟ್ಟನು. ಅಲ್ಲಿ ಗುರು–ಹಿರಿಯರ ಉಪದೇಶದಂತೆ ಮೂರು ರಾತ್ರಿ ಉಪವಾಸ ಮಾಡಿದನು. ಸೇನೆಯನ್ನು ಅಲ್ಲಿಯೇ ನಿಲ್ಲಿಸಿ ಜಯವೆಂಬ ವಿಜಯ ರಥವನ್ನೇರಿ ಗಂಗಾದ್ವಾರದಲ್ಲಿಯ ಲವಣ ಸಮುದ್ರವನ್ನು ಹೊಕ್ಕು, ಪನ್ನೆರಡು ಯೋಜನ ದೂರ ಹೋದಾಗ ರಥವು ನಿಂತುಬಿಟ್ಟಿತು. ಆಗ ಕೋಪದಿಂದ ಸಗರನ ತುಟಿಗಳು ಕಂಪಿಸುತ್ತಿರಲು— 'ಹೆಸರಾಂತ ಸುಭದ್ರ ವಿಜಯನ ಮಗನೂ, ಎರಡನೆಯ ಚಕ್ರವರ್ತಿಯೂ ಆದ ಸಗರನ ಮುಂದೆ ಬಂದು ನಮಸ್ಕರಿಸತಕ್ಕದ್ದು' ಎಂದು ಬರೆದ ದಿವ್ಯಾಸ್ತ್ರವನ್ನು ಬಿಟ್ಟನು.

ಆಗ ಮಾಗಧನೆಂಬ ವ್ಯಂತರ ರಾಜನು ಪ್ರತಿಭಟಿಸಿ ನಿಲ್ಲುವನು. ಅವನನ್ನು ಸೋಲಿಸಿ ಅವನಿಂದ ಕವಚ, ಕಂಠಾಭರಣ, ಚಿಂತಾಮಣಿಗಳನ್ನು ಪಡೆದು ದಕ್ಷಿಣ ದಿಗ್ವಿಜಯಕ್ಕೆ ಸಿದ್ಧನಾದನು. ಅಲ್ಲಿ ವರುತನೆಂಬವನು ಪ್ರತಿಭಟಿಸಲು ಅವನನ್ನು ಸೋಲಿಸಿದನು.

ಮುಂದೆ ವಿಜಯಾರ್ಧ ಪರ್ವತಕ್ಕೆ ಬಂದನು. ಅಲ್ಲಿ ಮೃದುವಾದ ಗೀತದಿಂದ ಕೂಡಿದ, ರತ್ನ ಖಚಿತ ಸಿದ್ಧಾಲಯಗಳನ್ನು, ಖೇಚರ ಚಕ್ರವರ್ತಿಯ ವೈಭವವನ್ನೂ ಪ್ರದರ್ಶಿಸುತ್ತಿರುವ ವಿಜಯಾರ್ಧ ಪರ್ವತವನ್ನು ಸಗರ ಚಕ್ರವರ್ತಿ ಕಂಡನು. ಅಲ್ಲಿಯ ವೈಭವ ಅವನ ಮನವನ್ನು ಆಕರ್ಷಿಸಿದ್ದಿತು. ಆಗ ತಮಿಸ್ರಗುಹೆಯ ಸಮೀಪದಲ್ಲಿ ಆನೆಯನ್ನು ನಿಲ್ಲಿಸಿ ಕೃತಮಾಲನೆಂಬ ದೇವನನ್ನು ಗೆದ್ದನು, ಪಶ್ಚಿಮ ಖಂಡವನ್ನು ಸೇನಾಪತಿಯು ಆರು ತಿಂಗಳಲ್ಲಿ

ಜಯಿಸಿ ಬರಲು, ದಕ್ಷಿಣ ಭರತಖಂಡದ ನರವಿದ್ಯಾಧರರನ್ನು ಗೆದ್ದು ಚಕ್ರಪೂಜೆ ಮಾಡಿಸಿದನು.

ಅಲ್ಲಿಂದ ವಿಜಯಾರ್ಧ ಪರ್ವತದ ಉತ್ತರ ಭಾಗದಲ್ಲಿ ಬೀಡುಬಿಟ್ಟು ಅದನ್ನು ಸೋಲಿಸಲು ಚಿಲಾತಾವರ್ತನರು ಬಂದು ರಾಜಕನ್ಯೆಯರನ್ನೂ, ದಿವ್ಯ ರತ್ನಗಳನ್ನೂ ಮುಂದಿಟ್ಟು, ಅಡಿಗೆರಗಿ ಸಂಧಾನವನ್ನು ಮಾಡಿಕೊಂಡರು. ತರುವಾಯ ಹಿಮವತ್ಪರ್ವತದ ಸಿಂಧು ಪ್ರಪಾತಕ್ಕೆ ಬರಲು ಅಲ್ಲಿಯ ನಾಗ ಯಕ್ಷಾದಿಗಳು ಬಂದು ತೀರ್ಥಜಲದಿಂದ ಅಭಿಷೇಕ ಮಾಡಿ ಶ್ರೇಷ್ಠ ಔಷಧ ಗಳನ್ನು ಅರ್ಪಿಸಿ ಹೋದರು.

ಅಲ್ಲಿಂದ ಸಗರ ಚಕ್ರವರ್ತಿಯು ಹೊರಟು ದಕ್ಷಿಣ ಮಾರ್ಗವಾಗಿ ಬಂದು, ಉತ್ತರ ಭಾರತದ ಮಧ್ಯಮಖಂಡದ ಮಧ್ಯದಲ್ಲಿದ್ದ ವೃಷಭಾಚಲ ವನ್ನು ಕಂಡು ಹಿಗ್ಗಿ, ತನ್ನ ವಿಜಯಪ್ರಶಸ್ತಿಯನ್ನು ಬರೆಯಬಯಸಿದನು. ಆದರೆ ಆ ಪೂರ್ವದ ಪುರಾತನ ಚಕ್ರವರ್ತಿಗಳ ಕೀರ್ತಿ ಫಲಕಗಳನ್ನು ಕಂಡು ಗರ್ವ ವಿರಹಿತನಾದನು. ಸ್ವಲ್ಪ ಭಾಗವನ್ನು ಅಳಿಸಿ ಹಾಕಿದ ಭರತ ಚಕ್ರವರ್ತಿಯ ವಿಜಯ ಪ್ರಶಸ್ತಿಯ ಸಮೀಪದಲ್ಲಿಯೇ ತನ್ನ ವಿಜಯ ಪ್ರಶಸ್ತಿ ಯನ್ನು ಕಾಕಿಣೀ ರತ್ನದಿಂದ ಕಪಿ ರತ್ನದಿಂದ ಬರೆಯಿಸಿದನು. ಆ ಮೇಲೆ ಗಂಗಾದ್ವಾರಕ್ಕೆ ಬಂದು, ಗಂಗಾದೇವಿಯ ಅಭಿಷೇಕ ಮಾಡಿಸಿದನು, ಮುಂದೆ ಪೂರ್ವ ದಿಗ್ಭಾಗದ ಮ್ಲೇಂಛ ಖಂಡವನ್ನು ಸೋಲಿಸಿದನು.

ಹೀಗೆ ಅರವತ್ತಾರು ಸಾವಿರ ವರ್ಷ ದಿಗ್ವಿಜಯ ಮಾಡಿ ಸಗರನು ಸಮ್ಮೇದಗಿರಿಗೆ ಬಂದನು. ಅಲ್ಲಿ ಅಜಿತತೀರ್ಥಂಕರರು ಪರಿನಿರ್ವಾಣಹೊಂದಿದ ಪವಿತ್ರ ಕ್ಷೇತ್ರವನ್ನು ಕಂಡು, ಮೂರು ಸಲ ಪ್ರದಕ್ಷಿಣೆ ಮಾಡಿ, ವಿವಿಧ ಅರ್ಚನೆಗಳಿಂದ ಅರ್ಚಿಸಿ, ಕೈಮುಗಿದು ಅದ್ವಿತೀಯ ಭಕ್ತಿಯಿಂದ ಸ್ತುತಿಸಿದನು. ಪ್ರಸಿದ್ಧವಾದ ಸಮ್ಮೇದಗಿರಿಯಲ್ಲಿ ಅನೇಕ ಜಿನಾಲಯಗಳನ್ನು ರತ್ನಗಳಿಂದ ಮಾಡಿಸಿ, ಅಲ್ಲಿಂದ ತನ್ನ ರಾಜಧಾನಿಯಾದ ಅಯೋಧ್ಯೆಗೆ ಹಿಂತಿರುಗಿದನು. ಪುರಜನರು ಪಾದಾಭಿಷೇಕ ಮಾಡಲು, ಮಹಾ ಕ್ಷತ್ರಿಯರು ಸಾರ್ವಭೌಮ ಪಟ್ಟಾಭಿಷೇಕ ಮಾಡಿಸಲು, ಉನ್ನತ ಸಿಂಹಾಸನವನ್ನೇರಿ, ಆದರದಿಂದ ಚಕ್ರ ಪೂಜಾಪರಿಕರ ವಿಧಿಯನ್ನು ಮಾಡಿದನು,

●●●

ಸಗರ ಚಕ್ರವರ್ತಿಯ ವೈರಾಗ್ಯ

ಷಟ್ಖಂಡ ಮಂಡಲಗಳನ್ನು ಗೆದ್ದುಬಂದ ಸಗರ ಚಕ್ರವರ್ತಿಯು ಜಿನಪೂಜೆ, ಚಕ್ರಪೂಜೆಗಳನ್ನು ಮಾಡಿ ೯೬ ಸಾವಿರ ಜನ ಹೆಂಡಂದಿರು. ೬೦ ಸಾವಿರ ಮಕ್ಕಳೊಂದಿಗೆ, ಚಕ್ರವರ್ತಿಯು ಸಕಲ ಭೋಗದಿಂದ ಕೂಡಿ ಸುಖ-ಸಂಕಥಾ ವಿನೋದದಿಂದ ರಾಜ್ಯವಾಳುತ್ತಿದ್ದನು. ಹೀಗೆ ಚಕ್ರವರ್ತಿಯು ಸಾಮ್ರಾಜ್ಯಗಳಿಂದ ಕೂಡಿಕೊಂಡು ದಿವ್ಯಪುರ, ದಿವ್ಯರತ್ನ, ದಿವ್ಯನಿಧಿ, ದಿವ್ಯಾಂಬರ, ದಿವ್ಯಶಯ್ಯೆ. ದಿವ್ಯಾಸನ, ದಿವ್ಯವಾಹನ, ದಿವ್ಯಸೇನೆ ಮೊದಲಾದ ದಶಾಂಗಭೋಗವಲ್ಲಿ ಸುಖವಾಗಿದ್ದನು.

ಹೀಗಿರುವಾಗ ಒಂದು ದಿವಸ ಅಯೋಧ್ಯೆಯ ಸಿದ್ಧವನದಲ್ಲಿ ಚತುರ್ಮುಖ ಪ್ರತಿಮಾಯೋಗಧಾರಿಗಳಾದ ಶ್ರೀಭಟ್ಟಾರಕರು ಕೇವಲಜ್ಞಾನಿಗಳಾಗಿದ್ದಾರೆಂಬ ವಿಷಯವನ್ನು ಸಗರ ಚಕ್ರವರ್ತಿಯು ವನಪಾಲಕನಿಂದ ತಿಳಿದನು. ಕೂಡಲೇ ಆನಂದಭೇರಿಯನ್ನು ಮೊಳಗಿಸಿ ಮಹಾಸಾಮಂತರು, ಮಂಡಳಿಕರು ಚಕ್ರವರ್ತಿಗಳು, ಸತಿಸುತರು, ಶ್ರೇಷ್ಠಿಗಳು, ದಂಡನಾಯಕರೊಂದಿಗೆ ವೈಭವದಿಂದ ಹೊರಟನು. ಸಿದ್ಧವನದ ಸಮೀಪದಲ್ಲಿ ವಾಹನದಿಂದ ಇಳಿದು ಆಗಲೇ ಅಲ್ಲಿ ಬಂದು ಸೇರಿದ್ದ ಚತುರ್ನಿಕಾಯಾಮರರೊಂದಿಗೆ ಭಟ್ಟಾರಕರನ್ನು ಭಕ್ತಿಯಿಂದ ಪೂಜೆ ಮಾಡಿದನು, ಅನೇಕ ಸ್ತುತಿಗೀತಗಳಿಂದ ಸ್ತುತಿಸಿ, ಧರ್ಮಶ್ರವಣಕ್ಕೆಂದು ಆತುರದಿಂದ ಕುಳಿತನು.

ಆಗ ಆ ಮಹೋತ್ಸವಕ್ಕೆ ಸಗರನ ಪೂರ್ವಜನ್ಮದ ಸ್ನೇಹಿತನಾದ ಅರಣಕಲ್ಪದ ಮಣಿಕೇತುವೂ ಬಂದಿದ್ದನು. ಅವನು ತನ್ನ 'ಸ್ನೇಹಿತನಾದ ಜಯಸೇನ ಚರನಾದ ಮಹಾಬಲನು ಎಲ್ಲಿ ಹುಟ್ಟಿದನು' ಎಂದು ಭಟ್ಟಾರಕರನ್ನು ಕೇಳಲು, ಅವರು ಇಲ್ಲಿದ್ದ ಸಗರ ಚಕ್ರವರ್ತಿಯೇ ಅವನೆಂದು ಹೇಳಿದರು. ಆಗ ಆ ಮಣಿಕೇತುವು ಸಗರ ಚಕ್ರವರ್ತಿಗೆ,

"ಚಕ್ರವರ್ತಿಯೇ, ನನ್ನ ಪೂರ್ವಜನ್ಮದ ಸ್ನೇಹಿತನೇ, ಈ ಮಣಿಕೇತುವನ್ನು ಗುರುತಿಸಲಾರೆಯಾ? ದೇವಲೋಕದಲ್ಲಿ ನಾವಿಬ್ಬರೂ ಪ್ರೀತಿಯಿಂದ ಈ ಸಂಸಾರ ವಾರಿಧಿಯನ್ನು ದಾಟಬೇಕೆಂದು ಮಾಡಿಕೊಂಡ ಸಂಕಲ್ಪವನ್ನು

ನೆನಪಿಸಿಕೊಳ್ಳು. ನೋಡು, ರಾಜ್ಯಮೋಹದಿಂದ ಭವಜಲರಾಶಿಯಲ್ಲಿ ಮುಳು ಗುವುದು ವಿವೇಕವಲ್ಲ'' ಎಂದು ಹೇಳಿದನು.

ಆದರೆ ಸಗರನು ಅದನ್ನು ಅಂತರಂಗದಲ್ಲಿ ನೆನೆದರೂ ಮಕ್ಕಳಮೇಲಿನ ಮೋಹದಿಂದ ರಾಜ್ಯಪ್ರೇಮ, ಪುತ್ರಪ್ರೇಮವನ್ನು ತೊರೆಯಲು ಅಸಮರ್ಥ ನಾದನು. ಆಗ ಮಣಿಕೇತು ತನ್ನ ಪ್ರಯತ್ನ ಫಲಿಸದಿರಲು ಹಿಂದಿರು ಗಿದನು.

ಮಣಿಕೇತು ಸ್ವರ್ಗಕ್ಕೆ ಹಿಂತಿರುಗಿದನು. ಅನೇಕ ಸಂವತ್ಸರಗಳು ಉರುಳಿ ದವು. ಒಂದು ದಿವಸ ಮಣಿಕೇತು ಚಾರಣ ಮುನಿಯ ರೂಪವನ್ನು ತಾಳಿ ಅಯೋಧ್ಯೆಯ ಹೊರಗಿನ ಜಿನಾಲಯದಲ್ಲಿ ನೆಲಸಿದನು. ಇದನ್ನು ತಿಳಿದ ಸಗರ ಚಕ್ರವರ್ತಿಯು ಭಕ್ತಿಯಿಂದ ಅಲ್ಲಿಗೆ ಬಂದು ವಂದಿಸಿ ಆ ಚಾರಣಮುನಿ ಗಳಿಗೆ 'ನೀಂ ತಪಂ ಬಟ್ಟ ಕಾರಣಮೇನ್' ಎಂದು ಕೇಳಿದನು. ಆಗ ಅವರು 'ಜಾತಿ ಜರಾ ಮರಣಗಳೆಂಬ ಅನಿಷ್ಟಗಳಿಂದ, ತನ್ನ ಪ್ರೀತಿಯವರ ಅಗಲುವಿಕೆ ಯಿಂದಾಗುವ ದುಃಖದಿಂದ ಬಿಡುಗಡೆ ಹೊಂದಿ ಅನಂತಚತುಷ್ಟಯಗಳನ್ನು ಪಡೆಯಲೆಂದು ತಪಸ್ಸನ್ನು ಮಾಡುತ್ತಿದ್ದೇನೆ' ಎಂದು ಹೇಳಿ ತನ್ನ ದಿವ್ಯ ಸ್ವರೂಪವನ್ನು ತೋರಿಸಿ, ಇನ್ನೊಂದು ಸಲ ತಾವಿಬ್ಬರೂ ಕೈಕೊಂಡ ಸಂಕಲ್ಪ ವನ್ನು ಆತನಿಗೆ ನೆನಪಿಸಿಕೊಡಲು ಮತ್ತೆ ಹೀಗೆ ನುಡಿದ :

'ಸಗರ ಚಕ್ರವರ್ತಿಯೆ, ಅನಂತ ಚತುಷ್ಟಯಗಳೊಂದಿಗೆ ಮುಕ್ತಿಗೆ ಕಾರಣವಾದ ಪರಮ ದೀಕ್ಷೆಯನ್ನು ಬಿಟ್ಟು ರಾಜ್ಯಮೋಹದಿಂದ ಭವಸಾಗರ ದಲ್ಲಿ ಮುಳುಗುವುದು ನಿನಗೆ ಪ್ರಿಯವೇ? ಜನ್ಮಜನ್ಮಾಂತರಗಳಲ್ಲಿ ಅನುಭವಿಸಿದ ಸುಖ ಸಾಲದೇ?

'ಮಾತನಾಡುವ ತವಕದಿಂದ ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದೇ ನೆಂದೂ, ಇನ್ನೊಬ್ಬರ ದುಃಖ ತಿಳಿಯದೆಂದೂ ನುಡಿಯದಿರು. ನನ್ನ ಈ ಮಾತು ನಿನ್ನ ಒಳ್ಳೆಯದಕ್ಕೆಂದೇ ನಂಬು'.

ಎಂದು ಮಣಿಕೇತು ಹೇಳಿದರೂ ರಾಜ್ಯಮೋಹ ಹಾಗೂ ಪುತ್ರಮೋಹ ದಲ್ಲಿ ಮುಳುಗಿದ್ದ ಸಗರನಿಗೆ ಆತನ ಸಲಹೆ ಹಿಡಿಸಲಿಲ್ಲ. ಆಗ ಅವನಿಗೆ ಸಂಸಾರದಲ್ಲಿ ವಿರಕ್ತಿಯುಂಟಾಗುವಂತೆ ಹೇಗೆ ಮಾಡುವುದೆಂದು ಮಣಿಕೇತು ಯೋಚಿಸಿದನು. 'ಸಗರನು ಜಯಸೇನನಾಗಿದ್ದ ಭವದಲ್ಲಿ ತನ್ನ ಮಗನಾದ ರತಿಷೇಣನ ಅಗಲಿಕೆಯಿಂದ ವೈರಾಗ್ಯಪರನಾಗಿದ್ದ, ಈಗಲೂ ಸಹ ಮಕ್ಕಳ ಅಗಲಿಕೆಯನ್ನುಂಟು ಮಾಡಿದರೆ ಅವನ ಮೋಹ ಮರೆಯಾಗಬಹುದು' ಎಂದು ಯೋಚಿಸಿದ ಮಣಿಕೇತುವು, ತನ್ನ ಮನದಲ್ಲಿ ಒಂದು ಉಪಾಯವನ್ನು ನಿರ್ಧರಿಸಿ ಸಂತಸಗೊಂಡನು,

ಕಾಲಚಕ್ರ ಉರುಳಿತು, ಸಗರ ಚಕ್ರವರ್ತಿಯ ೬೦ ಸಾವಿರ ಮಕ್ಕಳು ಯೌವನದಲ್ಲಿ ಕಾಲಿಟ್ಟರು. ಯಾವ ಕೆಲಸವೂ ಇಲ್ಲದೆ ಸುಮ್ಮನೆ ಕುಳಿತಿರು ವುದು ಅವರಿಗೆ ಹೇಗೆ ರುಚಿಸೀತು? ಆದ್ದರಿಂದ ಅವರು ತಮ್ಮ ತಂದೆಯಲ್ಲಿ ಬಂದು, 'ನಮಗೇನಾದರೂ ಉದ್ಯೋಗ ಮಾಡಲು ಆಜ್ಞಾಪಿಸಬೇಕು' ಎಂದು ಕೇಳಿಕೊಂಡರು. ಅವರ ಅರಿಕೆಯನ್ನು ಕೇಳಿ ಸಗರನಿಗೆ ಆಶ್ಚರ್ಯವಾಯಿತು. 'ನಿಮಗೆಂತಹ ಕೆಲಸ ಹೇಳಲಿ? ಅರಮನೆಯಲ್ಲಿ ಚಕ್ರರತ್ನವಿದೆ. ಅದು ನಮ್ಮೆಲ್ಲ ರನ್ನು ರಕ್ಷಿಸುತ್ತದೆ, ಆದುದರಿಂದ ನನ್ನೊಂದಿಗೆ ಸಾಮ್ರಾಜ್ಯಸುಖವನ್ನು ಅನುಭವಿಸುತ್ತ ಇರಬೇಕು. ಇದೇ ನಿಮ್ಮ ಕೆಲಸ' ಎಂದು ಹೇಳಿದನು.

ಆದರೆ ಅದಕ್ಕೆ ಅವರು ಒಪ್ಪಲಿಲ್ಲ, "ಹಾಗಾದರೆ ಬ್ರಹ್ಮನು ಮಾನವ ನಿಗೆ ಈ ತೋಳುಗಳನ್ನು ಕೊಟ್ಟಿರುವುದಾದರೂ ಏತಕ್ಕೆ? ಶರಣಾಗತರಾದವ ರನ್ನು ರಕ್ಷಿಸಲು, ಬೇಡಿದವರಿಗೆ ನೀಡಲೆಂದು ತಾನೇ ಅಲ್ಲವೆ? ಇವೆರಡು ಕಾರ್ಯವನ್ನು ಮಾಡದಿದ್ದರೆ ಇವುಗಳಿಗೇನು ಬೆಲೆ ? ಆದ್ದರಿಂದ ನಿರುದ್ಯೋಗಿ ಗಳಾಗಿ ನರಕವಾಸದಲ್ಲಿ ನಾವು ವೃಥಾ ಆರೋಪಕ್ಕೆ ಗುರಿಯಾಗಲಾರೆವು" ಎಂದು ನುಡಿದರು. ಕುಲಮದ, ಜಾತಿಮದ, ವಯೋಮದ, ತೋಳ್ಬಲಮದ, ರಾಜ್ಯಮದ— ಈ ಐದು ಮದಗಳೂ ಕೂಡಿ ಉಂಟಾದ ಚಾಪಲ್ಯಕ್ಕೊಳಗಾದ ೬೦ ಸಾವಿರ ಮಕ್ಕಳು ಸುಮ್ಮನೆ ಇರಲಾರದೆ ಏನಾದರೂ ಉದ್ಯೋಗ ಕೊಡಲು ಹಟ ಹಿಡಿದರು. ಆಗ ಅವರ ಹಟಕ್ಕೆ ಸೋತ ಸಗರ ಚಕ್ರವರ್ತಿಯು

"ಮಕ್ಕಳೇ, ನೀವು ಕೆಲಸವಿಲ್ಲದೆ ಸುಮ್ಮನಿರಲು ಸಿದ್ಧರಿರದಿದ್ದರೆ ಕೈಲಾಸ ಪರ್ವತದಲ್ಲಿ ಪ್ರಥಮ ತೀರ್ಥಂಕರರ ಮಗ ಪ್ರಥಮ ಚಕ್ರವರ್ತಿ ಭರತನು ಸ್ಥಾಪಿಸಿರುವ ರತ್ನಮಯ ಜಿನಪ್ರತಿಮೆಗಳು ಭೂಗೋಚರವಾಗದಂತೆ ರಕ್ಷಣೆಯನ್ನು ನಿರ್ಮಿಸಿರಿ" ಎಂದನು. ಕೂಡಲೆ ಅವರೆಲ್ಲ 'ಮಹಾ ಪ್ರಸಾದ'ವೆಂದು ಅರಸನನ್ನು ಬೀಳ್ಕೊಂಡು ಕೈಲಾಸ ಪರ್ವತಕ್ಕೆ ಬಂದರು.

ಸಗರ ಪುತ್ರರು ಕೈಲಾಸ ಪರ್ವತದ ಸುತ್ತ ದೊಡ್ಡ ಕಂದಕವನ್ನು ತೋಡಹತ್ತಿದರು. ಅವರು ಕೆಲಸದಲ್ಲಿ ಮಗ್ನರಾದುದನ್ನು ಕಂಡ ಮಣಿಕೇತುವು ಹೀಗೆ ಯೋಚಿಸಿದನು— 'ನನ್ನ ಸ್ನೇಹಿತನಿಗೆ ಅಹಿತವಾದರೂ ರಹಸ್ಯವಾಗಿ ನಾನು ಮಾಡುವುದು ಹಿತವಾದುದನ್ನೇ ಮಾಡಿದಂತಾಗುವುದು' ಎಂದು ನಿರ್ಧರಿಸಿದನು. ಹಾಗೂ ವಿಷದೃಷ್ಟಿ, ವಿಷೋರಗ ಸ್ವರೂಪವನ್ನು ತಾಳಿ ಸಗರಚಕ್ರವರ್ತಿಯ ಅರವತ್ತು ಸಾವಿರ ಮಕ್ಕಳನ್ನು ಕೃತಕ ಭಸ್ಮವನ್ನಾಗಿ ಮಾಡಿದನು. ಆದರೆ ಅವರಲ್ಲಿಯ ಕೊನೆಯವನಾದ ಭಗೀರಥನನ್ನು ಮಾತ್ರ ಸುದ್ದಿಯನ್ನು ತಲುಪಿಸಲೆಂದು ಉಳಿಸಿದನು. ತರುವಾಯ ತಾನು ವೃದ್ಧ ಬ್ರಾಹ್ಮಣ ವೇಷವನ್ನು ಧರಿಸಿ ಅಯೋಧ್ಯೆಗೆ ಬಂದನು. ಅರಮನೆಯ ಬಾಗಿಲಲ್ಲಿ ನಿಂತು "ಅಯ್ಯೋ ದೇವರೇ, ಇದ್ದೊಬ್ಬ ಮಗನನ್ನು ಯಮನು ಅನ್ಯಾಯವಾಗಿ ಒಯ್ದನಲ್ಲ, ಇನ್ನೇನು ಗತಿ ? ಈ ಭೂಮಂಡಲಕ್ಕೆಲ್ಲ ಅಧಿಪತಿಯಾದ ಮಹಾರಾಜನೇ, ನನ್ನ ಮಗನನ್ನು ನನಗೆ ತಂದುಕೊಡು. ಅವನನ್ನು ತಂದುಕೊಡದಿದ್ದರೆ ನಾನೂ ಇಲ್ಲಿಯೇ ಪ್ರಾಣ ತ್ಯಜಿಸುವೆ" ಎಂದು ಗಟ್ಟಿಯಾಗಿ ಹುಯ್ಯಲಿಟ್ಟನು.

ಕಪಟ ಬ್ರಾಹ್ಮಣನ ಕರುಣಾಕ್ರಂದನ ಆಸ್ಥಾನದಲ್ಲಿದ್ದ ಸಗರಚಕ್ರವರ್ತಿಗೆ ಕೇಳಿಸಿತು. ಆತನಿಗೆ ಆಶ್ಚರ್ಯವಾಯಿತು. ತನ್ನ ರಾಜ್ಯದಲ್ಲಿ ಎಂದೂ ಕೇಳಿ ಅರಿಯದ ದುಃಖ ಆಕ್ರಂದನವೆಲ್ಲಿಯದು ? ಎಂದು ಆ ಬ್ರಾಹ್ಮಣನನ್ನು ಕರೆದನು, ಬ್ರಾಹ್ಮಣನು ಅರಸನನ್ನು ಕಂಡಾಕ್ಷಣ "ಮಹಾರಾಜ, ನಾನು ಬ್ರಾಹ್ಮಣ. ಭರತ ಚಕ್ರವರ್ತಿಯು ಬ್ರಾಹ್ಮಣ ವರ್ಣವನ್ನು ರೂಪಿಸಿದನು. ಎರಡನೆಯ ಚಕ್ರವರ್ತಿಯಾದ ಸಗರ ಮಹಾರಾಜನೇ, ನನ್ನನ್ನು ದುಃಖ

ಸಾಗರದಿಂದ ಪಾರುಮಾಡಿ ರಕ್ಷಿಸುವುದು ನಿನ್ನ ಕರ್ತವ್ಯ. ನನ್ನನ್ನು ಉದ್ಧರಿಸಬೇಕು. ಎಷ್ಟೋ ಹರಕೆ ಹೊತ್ತು, ಪುಣ್ಯಸ್ವರೂಪನಾದ ಸತ್ಪುತ್ರನನ್ನು ಪಡೆದಿದ್ದೆ. ಅವನ ವಿವಾಹೋತ್ಸವವನ್ನು ಮಾಡಬೇಕೆಂದು ಸಕಲ ಸಿದ್ಧತೆಗಳನ್ನು ಮಾಡುತ್ತಿರುವಾಗ ಯಮನು ಸಿಡಿಲರೂಪದಲ್ಲಿ ಬಂದೆರಗಿದನು. ನಿನ್ನ ಪಾದಕ್ಕೆ ಶರಣು ಬಂದಿದ್ದೇನೆ. ಅವನನ್ನು ತಂದುಕೊಡು, ಇಲ್ಲವಾದರೆ ನನಗೆ ಮರಣವೇ ಶರಣು'' ಎಂದು ಗಟ್ಟಿಯಾಗಿ ರೋದಿಸಹತ್ತಿದನು.

ದುಃಖದಿಂದ ಹಂಬಲಿಸುತ್ತಿರುವ ಆ ಬ್ರಾಹ್ಮಣನ ಮಾತನ್ನು ಕೇಳಿ ಮಹಾರಾಜನಿಗೆ ಅಚ್ಚರಿಯಾಯಿತು. 'ಅಸಾಧ್ಯವಾದ ವೈರಿಗಳನ್ನು ಗೆದ್ದು ಸಂಪಾದಿಸಿದ ತನ್ನ ಧವಲಕೀರ್ತಿ ಈ ಬ್ರಾಹ್ಮಣನ ಮಾತಿನಿಂದ ಮಸಕಾಯಿತಲ್ಲ? ಮಗನ ಮರಣದಿಂದ ದುಃಖಿತಪ್ತನಾದ ಬ್ರಾಹ್ಮಣನು ಹೀಗೆ ನುಡಿಯುವನು. ಆದರೆ ಸತ್ತವರನ್ನು ಎತ್ತಬಲ್ಲವರಾರು ? ಆದರೆ ಬೇಡುವವನ ಬೇಡಿಕೆಯನ್ನು ಪೂರ್ಣಗೊಳಿಸದಿದ್ದರೆ ತನ್ನ ಕೀರ್ತಿಗೆ ಕಲಂಕವಲ್ಲವೆ ?'' ಎಂದು ಮಹಾರಾಜನು ಯೋಚನೆಯಲ್ಲಿ ಮಗ್ನನಾದನು,

ಮಹಾರಾಜನ ಚಿಂತೆಯನ್ನು ಗ್ರಹಿಸಿದ ಬುದ್ಧಿಸಾಗರನೆಂಬ ಪುರೋಹಿತನು ಆ ಬ್ರಾಹ್ಮಣನಿಗೆ "ಅಯ್ಯಾ, ಒಬ್ಬರೂ ಸಾಯದ ಮನೆಯಿಂದ ಹುಲ್ಲನ್ನೂ ಕಿಚ್ಚನ್ನೂ ತೆಗೆದುಕೊಂಡು ಬಂದರೆ ನಿನ್ನ ಮಗನನ್ನು ಬದುಕಿಸಲು ಸಾಧ್ಯ" ಎಂದು ಹೇಳಿದನು. ಆ ಮಾತನ್ನು ತಿಳಿದೂ ತಿಳಿಯದವನಂತೆ ಆ ಕಪಟ ಬ್ರಾಹ್ಮಣನು ಸ್ವಲ್ಪ ಅಂತರ ಹೋಗಿ ಮರಳಿ ಬಂದು, ''ಅಂತಹ ಮನೆ ಸಿಕ್ಕಲಿಲ್ಲ''ವೆಂದನು. ಆಗ ಪುರೋಹಿತನು, ''ಅಯ್ಯೋ ಮರುಳೇ, ಹುಟ್ಟಿದವರು ಸಾಯಲೇಬೇಕು. ನಿನ್ನ ಅಜ್ಜ-ಮುತ್ತಜ್ಜರು ಕಾಲನ ಭಯಂಕರವಾದ ಬಾಯನ್ನು ಸೇರಲಿಲ್ಲವೆ ? ದುಃಖವನ್ನು ಮರೆತು ವಿವೇಕವನ್ನು ತಾಳು. 'ನೀನು ಮುಂದೆ ನಡೆ ನಾನು ಹಿಂದೆ ಬರುತ್ತೇನೆ' ಎಂದು ಮಾತ್ರ ಹೇಳಬಹುದು;ಹೊರತು ಯಮನಸರದಿಯಲ್ಲಿ ತಪ್ಪಿಸಿಕೊಂಡು ಉಳಿಯುವವರಾರು? ಯಮನು ಸುರ, ಮಾನವ, ನರಕ, ತಿರ್ಯಕ್ ಸಮೂಹದಲ್ಲಿ ಯಾರ ರುಚಿ ನೋಡಿಲ್ಲ ? ಶ್ರೀಮಂತ, ಬಡವ, ಸ್ತ್ರೀ ಎಂದು ಅವನು ಯೋಚಿಸುವದಿಲ್ಲ.

ನಿಷ್ಕರುಣೆಯಾದ ಯಮನು ಎಲ್ಲರನ್ನೂ ಮದ್ದಾನೆಯಂತೆ ತುಳಿಯುತ್ತ ಹೋಗುತ್ತಾನೆ. ಪಸುಮಗು, ಮುದಿಯ, ಪರಮಜ್ಞಾನಿ, ಮುಚ್ಚ, ಕುಲಜ, ಕುಲಹೀನ, ಹೇಡಿ, ಕಲಿ, ಅಭಿಮಾನಿ, ನಿರ್ಲಜ್ಜ ಎಂಬ ಭಾವನೆ ಅವನಿಗಿಲ್ಲ. ಈ ಜಗತ್ತಿನ ಜೀವಿಗಳೆಲ್ಲ ಅವನ ಊಟಕ್ಕೆ ಕಟ್ಟಿದ ಕುರಿಗಳು. ಅಂಥ ಯಮ ರಾಜನನ್ನೂ, ಕಾಮನನ್ನೂ, ಮೋಹವನ್ನೂ, ಮೃತ್ಯುವನ್ನೂ ಗೆದ್ದವನು ಅಜಿತಜಿನನಲ್ಲದೆ ಬೇರೆ ಯಾರೂ ಅಲ್ಲ" ಎಂದು ಉಪದೇಶಿಸಿದನು.

ಆ ಬುದ್ಧಿಸಾಗರ ಪುರೋಹಿತನ ಉಪದೇಶವನ್ನು ಮೌನವಾಗಿ ಕೇಳುತ್ತ ಕುಳಿತಿದ್ದ ಕಪಟ ಬ್ರಾಹ್ಮಣನು ಅವರನ್ನು ಅವರ ಮಾತಿನಿಂದಲೇ ಕಟ್ಟಿಹಾಕುವೆನೆಂದು. "ಸ್ವಾಮೀ, ಈಗ ನೀವು ಉಪದೇಶಿಸಿದ ಧರ್ಮಬೋಧೆ ನನಗೆ ಮಾತ್ರವೋ ಅಥವಾ ನಿಮಗೂ ಅನ್ವಯಿಸುವುದೋ?" ಎಂದು ಕೇಳಿ ದನು. ಅದಕ್ಕೆ ಸಗರ ಚಕ್ರವರ್ತಿ ಗಹಗಹಿಸಿ ನಗುತ್ತ "ಇದು ನಿನಗಿಂತ ಮುಂಚೆ ನಮಗೂ ಅನ್ವಯಿಸುವುದು" ಎಂದು ಉತ್ತರಿಸಿದನು.

ಮಹಾರಾಜನ ಉತ್ತರವನ್ನು ಕೇಳಿದ ತಕ್ಷಣ ಆ ಕಪಟ ಬ್ರಾಹ್ಮಣನು ಅವನಿಗೆ– "ನಿನ್ನ ಅರವತ್ತು ಸಾವಿರ ಮಕ್ಕಳು ವಿಷಸರ್ಪದ ದೃಷ್ಟಿಯಿಂದ ಸುಟ್ಟು ಭಸ್ಮವಾಗಿಹೋದರು" ಎಂದನು. ಅದಕ್ಕೆ ರಾಜನು "ಅದೇನು ಮಹಾ! ಹುಟ್ಟಿದವರು ಸತ್ತರು ಅದರಲ್ಲಿ ಆಶ್ಚರ್ಯವೇನು?" ಎಂದು ನುಡಿದು ಮತ್ತೆ ಮೊದಲಿನಂತೆ ಧರ್ಮಕಥನದಲ್ಲಿ ತೊಡಗಿದನು.

ಅಷ್ಟರಲ್ಲಿ ಒಂದೇ ಸವನೆ ಕಣ್ಣೀರು ಸುರಿಸುತ್ತ, ಗದ್ಗದ ಕಂಠ. ಶೋಕಾಗ್ನಿಯಿಂದ ದಹಿಸುತ್ತಿದ್ದ ಭಗೀರಥನು ಅಳುತ್ತ ಬಂದು ತಂದೆಯ ಎದುರಿಗೆ ದೊಪ್ಪನೆ ನೆಲಕ್ಕೆ ಬಿದ್ದು, "ಅಪ್ಪಾ, ಉದ್ಯೋಗ ಉದ್ಯೋಗವೆಂದು ಹಟಹಿಡಿದು ಹಿಮಾಚಲಕ್ಕೆ ಹೋದ ಅಣ್ಣಂದಿರೆಲ್ಲ ಸತ್ತುಹೋದರು. ಆ ಪುಣ್ಯವಿಲ್ಲದ ನಾನೊಬ್ಬ ಮಾತ್ರ ತಿರುಗಿ ಬಂದೆ" ಎಂದನು. ಆ ಮಾತಿನ ಸಿಡಿಲಿನಿಂದ ಸಭಾಸದರೆಲ್ಲ ಸ್ತಂಭೀಭೂತರಾಗಿ ಕುಳಿತರು.

ರಾಜಕುಮಾರರ ಮರಣವಾರ್ತೆ ತಿಳಿದೊಡನೆ, ಅಂತಃಪುರದಲ್ಲಿ ಹಾಹಾಕ್ರಂದನ ಆರಂಭವಾಯಿತು. ಪುತ್ರಶೋಕದಿಂದ ತಪ್ತರಾದ ಅರವತ್ತು

ಸಾವಿರ ರಾಣಿಯರು ಕಣ್ಣೀರು ಸುರಿಸುತ್ತ ಓಡಿಬಂದು ಮಹಾರಾಜನ ಪಾದಮೂಲದಲ್ಲಿ ಬಿದ್ದರು. ಅವರೆಲ್ಲ ಒಟ್ಟಾಗಿ. "ಮಹಾರಾಜರೇ, ನಿಮಗೆ ಹದಿನಾಲ್ಕು ರತ್ನಗಳು ಲಭಿಸಿವೆ. ದೇವತೆಗಳೆಲ್ಲ ನಿಮ್ಮ ಸೇವಕರು. ಹೀಗಿರುವ ನೀವು ಯಮನೊಡನೆ ಹೋರಾಡಿ, ಸತ್ತುಹೋದ ಮಕ್ಕಳನ್ನು ಕರೆದುಕೊಂಡು ಬನ್ನಿರಿ, ಷಟ್ಖಂಡವನ್ನು ಸಡಗಿಸಿದ ಕಲಿಯಾದ ನೀವು ನಿಮ್ಮ ಮಕ್ಕಳನ್ನೇಕೆ ರಕ್ಷಿಸಲು ಸಿದ್ಧರಿಲ್ಲ? ಆ ಪಾಪಿ ಯಮನು ನಿಮ್ಮ ಅರವತ್ತು ಸಾವಿರ ಮಕ್ಕಳನ್ನು ಎಳೆದೊಯ್ಯುವಾಗ ನಿಮ್ಮ ಚಕ್ರರತ್ನ ಎಲ್ಲಿ ಹೋಗಿತ್ತು? ನಿಮ್ಮಂಥ ಪರಾಕ್ರಮಿಗಳಿರುವಾಗ ನಿಮ್ಮ ಮಕ್ಕಳನ್ನು ಕೊಲ್ಲುವವರುಂಟೆ? ನಮ್ಮ ಹೊಟ್ಟೆ ಉರಿದುಹೋಗುತ್ತಿದೆ. ಪುತ್ರ ಶೋಕಾಗ್ನಿಗಿಂತ ಮಿಗಿಲಾದ ಶೋಕಾಗ್ನಿ ಉಂಟೆ? ನಮಗೆ ಇನ್ನು ತಡೆಯುವುದು ಸಾಧ್ಯವಿಲ್ಲ. ನಮ್ಮ ಮಕ್ಕಳನ್ನು ತಂದುಕೊಡಿರಿ. ಇಲ್ಲವೆ ಕಿಚ್ಚನ್ನೋ ಖಡ್ಗವನ್ನೋ ಕೊಡಿರಿ, ಮಕ್ಕಳಿಲ್ಲದೆ ನಾವು ಜೀವಿಸಿ ಇರಲಾರೆವು" ಎಂದು ಕಲ್ಲು ಕರಗುವಂತೆ ಕಣ್ಣೀರಿಡುತ್ತ ಅವರು ಗೋಳಾಡಿದರು.

ಒಂದು ಕಡೆ ತನ್ನ ಅರವತ್ತು ಸಾವಿರ ಹೆಂಡಂದಿರು, ಮತ್ತೊಂದು ಕಡೆ ಸೊಸೆಯರು ದುಃಖಿವೇ ಮೂರ್ತಿವೆತ್ತಂತೆ ನಿಂತಿರುವುದನ್ನು ಕಂಡು ಮಹಾರಾಜನು ಕ್ಷಣಕಾಲ ಅಧೀರನಾದನು. ತರುವಾಯ ತನ್ನಷ್ಟಕ್ಕೆ ತಾನೇ ಧೈರ್ಯತಾಳಿದನು. ಆ ಸ್ತ್ರೀಯರನ್ನು ಕಂಡು ಅವನಿಗೆ ಮರುಕವೆನ್ನಿಸಿತು. ಯಮನೊಯ್ದ ಮಗನನ್ನು ತಂದುಕೊಡು ಎಂದು ಕೇಳುವ ಬ್ರಾಹ್ಮಣ ಒಂದು ಕಡೆಗಿದ್ದರೆ, ಇತ್ತ ಸತ್ತಮಕ್ಕಳನ್ನು ಎತ್ತಿತರಬೇಕೆಂದು ಕೇಳುವ ರಾಣಿಯರು! ಸತ್ತವರನ್ನು ಎತ್ತುವವರಾರು? ಈ ಕುಲಾಂಗನೆಯರು ಆ ಬಡ ಬ್ರಾಹ್ಮಣನ ನಂಟರಂತೆ ತೋರುವರಲ್ಲ? ಎಂದು ಸಗರ ಚಕ್ರವರ್ತಿ ಯೋಚಿಸಿದನು. ಆದರೂ ಅವರ ದೀನ ದುಃಖಿಗಳನ್ನು ನೋಡಲಾಗದೆ ಅಚಲನಾಗಿ ಕುಳಿತನು. ಆಗ ಅವನ ಧೀರಗಂಭೀರ ಭಾವವನ್ನು ಕಂಡ ಪುರಜನವೆಲ್ಲ ಅವನನ್ನು ಕಲ್ಲೆದೆಯವನೆಂದು ಹಳಿದರು. ಆ ಜನಾಪವಾದವನ್ನು ಕೇಳಿ ಬುದ್ಧಿಸಾಗರನಿಗೆ ಸಹಿಸಲಾಗಲಿಲ್ಲ. ಸಗರ ಚಕ್ರವರ್ತಿಯ ದುಃಖವನ್ನು ತೋರಲೆಂದು ಹಿಡಿ ತುಂಬ ಬಿಳಿಯ ಸಾಸಿವೆಯನ್ನು ರಾಜನ ಮೇಲೆ ಸುರಿದನು. ಅವು ಕಾವ

ಬಾಣಲೆಯಲ್ಲಿ ಸುರಿದ ಕಾಳಿನಂತೆ ಅರಳಾಗಿ 'ಛಿಳಿ ಛಿಟಲ್' ಎಂದು ಸುತ್ತೆಲ್ಲ ಸಿಡಿದವು. ಅಲ್ಲಿಯ ಒಬ್ಬೊಬ್ಬ ರಾಣಿಗೆ ಒಬ್ಬೊಬ್ಬ ರಾಜಕುಮಾರನನ್ನು ಕಳೆದುಕೊಂಡ ದುಃಖವಾದರೆ ಸಗರ ಮಹಾರಾಜನಿಗೆ ಅರವತ್ತು ಸಾವಿರ ಮಕ್ಕಳನ್ನು ಕಳೆದುಕೊಂಡ ದುಃಖ! ಇದು ಜುಗ್ಗಿ ಸಾಗರನ ಜಾಣ್ಮೆಯಿಂದ ಎಲ್ಲರಿಗೂ ಮನವರಿಕೆಯಾಯಿತು.

ದುಃಖಿತನಾದ ಸಗರ ಚಕ್ರವರ್ತಿಯು ಅದನ್ನು ಹೊರಗೆ ತೋರಲಿಲ್ಲ. 'ಮೌನಂ ಸರ್ವಾರ್ಥ ಸಾಧನಂ' ಎಂದುಕೊಂಡು 'ನನಗಿಂದು ರಾಜ್ಯವೈಭವ ಕೊನೆಯಾಯಿತು, ಮೋಹ ದೂರವಾಯಿತು. ಈಗಲೇ ತಪಸ್ಸಿಗೆ ಹೋಗು ತ್ತೇನೆ' ಎಂದು ಸಂಸಾರದಿಂದ ವೈರಾಗ್ಯ ತಾಳಿದನು.

●●●

ಸಗರಚಕ್ರಿ ದೀಕ್ಷಾಗ್ರಹಣ : ತ್ರಿಲೋಕ ವಿವರಣೆ

ಅರವತ್ತು ಸಾವಿರ ಮಕ್ಕಳ ಸಾವಿನಿಂದ ದುಃಖಿತನಾದ ಸಗರ ಚಕ್ರವರ್ತಿಯು ಅದನ್ನು ಹೊರಗೆ ತೋರಲಿಲ್ಲ. ಅವರೆ ಅವರಿಂದಾಗಿ ರಾಜ್ಯ ಭೋಗಗಳ, ಸತಿಸುತರ, ಬಂಧುಮಿತ್ರರ ಮೋಹ ಕ್ಷಣಮಾತ್ರದಲ್ಲಿ ಮರೆ ಯಾಯಿತು. ಅದರೊಂದಿಗೆ ಇಹಲೋಕದ ಸಮಸ್ತ ಬಂಧನಗಳಿಂದ ಬಿಡುಗಡೆ ಹೊಂದಿ ಅಜಿತನಾಥನಿಗೆ ರಾಜ್ಯಭಾರವನ್ನು ಒಪ್ಪಿಸಿ, ದೃಢಧರ್ಮರೆಂಬ ಕೇವಲಿಗಳ ಹತ್ತಿರ ಹೋಗಿ ಸರ್ವಸಂಗಪರಿತ್ಯಾಗ ಮಾಡಿಕೊಂಡು ಸನ್ಯಾಸ ದೀಕ್ಷೆಯನ್ನು ಪಡೆದನು.

ಸಗರ ಚಕ್ರವರ್ತಿಯು ಸಂಸಾರದಲ್ಲಿ ವೈರಾಗ್ಯ ತಾಳಿ ದೀಕ್ಷೆಯನ್ನು ಪಡೆದುದನ್ನು ಕಂಡು, ಕಪಟ ಬ್ರಾಹ್ಮಣ ವೇಷದಲ್ಲಿದ್ದ ಮಣಿಕೇತುವು ಸಂತೋಷಪಟ್ಟು, ಸ್ವಸ್ವರೂಪ ತಾಳಿ, ಕೈಲಾಸಕ್ಕೆ ಬಂದು ಅಲ್ಲಿ ಮಂತ್ರಶಕ್ತಿ ಯಿಂದ ಸತ್ತುಬಿದ್ದ ಸಗರ ಪುತ್ರರನ್ನೆಲ್ಲ ಎಚ್ಚರಿಸಿ, ಸಗರ ಚಕ್ರವರ್ತಿ ಸನ್ಯಾಸ

ದೀಕ್ಷೆ ಸ್ವೀಕರಿಸಿದ ವಿಷಯವೆಲ್ಲವನ್ನು ವಿವರವಾಗಿ ತಿಳಿಸಿದನು. ಅದನ್ನು ಕೇಳಿ ತಿಳಿದ ಅವರೆಲ್ಲರಲ್ಲೂ ವೈರಾಗ್ಯ ಉದಯಿಸಿತು. ಅವರೆಲ್ಲರೂ ದೃಢ ಧರ್ಮ ಕೇವಲಿಗಳ ಸನ್ನಿಧಿಯಲ್ಲಿ ತಪಸ್ಸಿಗೆ ನಿಂತರು. ಈ ವೃತ್ತಾಂತವನ್ನೆಲ್ಲ ಕೇಳಿದ ಭಗೀರಥನು, ತಾನೂ ಆ ಕೇವಲಿಗಳಲ್ಲಿಗೆ ಬಂದು ಭಕ್ತಿಯಿಂದ ನಮಸ್ಕರಿಸಿ, ಧರ್ಮಶ್ರವಣಾನಂತರ ಕರ್ಮಪ್ರಕೃತಿಯನ್ನು, ಲೋಕ ವಿಭಾಗ ವನ್ನು, ಜೀವಸ್ವರೂಪವನ್ನು ತಿಳಿಯುವಂತೆ ಉಪದೇಶಿಸಿರೆಂದು ಭಕ್ತಿಯಿಂದ ಬಿನ್ನವಿಸಿಕೊಳ್ಳುವನು. ಆಗ ಅವರು— ವಯಸ್ಸಿನಿಂದ ಪ್ರೌಢನೂ, ಆರೋಗ್ಯ ವಂತನೂ, ಬಹುಶ್ರುತನೂ. ಪ್ರತಿಭಾವಂತನೂ, ಸತ್‌ಕ್ರಿಯೆಯಲ್ಲಿ ತೊಡಗಿದ ಪವಿತ್ರ ಚಾರಿತ್ರ್ಯವುಳ್ಳವನೂ ಆಚಾರ್ಯನೆನಿಸುವನೆಂದೂ; ದಯಾಪರನೂ, ಏಕಾಗ್ರಚಿತ್ತವುಳ್ಳವನೂ, ರಾಜಹಂಸದಂತಿರುವವನೂ, ಹೇಳಿದುದನ್ನು ಸರಿಯಾಗಿ ಮನನಮಾಡಿಕೊಳ್ಳುವವನೂ, ಮಾಧ್ಯಸ್ಥ ಭಾವವುಳ್ಳವನೂ ನಿಜವಾದ ಶ್ರೋತೃವೆನಿಸುವನೆಂದು ವಿವರಿಸಿ. ಏಕಾಗ್ರಚಿತ್ತವುಳ್ಳ ನೀನು ಉಪದೇಶವನ್ನು ಕೇಳೆಂದು ವಿವರಿಸುವರು :

'ಕರ್ಮವು ಜ್ಞಾನಾವರಣೀಯ, ದರ್ಶನಾವರಣೀಯ, ವೇದನೀಯ, ಮೋಹನೀಯ, ಆಯು, ನಾಮ. ಗೋತ್ರ ಅಂತರಾಯ ಎಂಬ ಎಂಟು ಪ್ರಕಾರದವು. ಈ ಕರ್ಮಗಳಿಂದ ಆವರಿಸಲ್ಪಟ್ಟ ಜೀವಾದಿ ದ್ರವ್ಯಗಳು ಲೋಕದಲ್ಲಿವೆ. ಈ ಲೋಕವು ತಳದಲ್ಲಿ ಚಿತ್ರಾಸನದಂತೆಯೂ, ಮಧ್ಯದಲ್ಲಿ ಜಲ್ಲರಿಯಂತೆಯೂ, ತುದಿಯಲ್ಲಿ ಮದ್ದಳೆಯಂತೆಯೂ ಇದೆ. ಈ ಲೋಕಾ ಕಾರವು ಘನೋದಧಿ, ಘನಾನಿಳ, ತನುವಾತವೆಂಬ ವಾಯುತ್ರಯಗಳಿಂದ ಆವರಿಸಲ್ಪಟ್ಟಿದೆ. ಅದು ಹದಿನಾಲ್ಕು ರಜ್ಜುವಿನಷ್ಟು ಎತ್ತರವೂ ಸಪ್ತೈಕ ಪಂಚೈಕ ರಜ್ಜುವಿನಷ್ಟು ವಿಸ್ತಾರವೂ ಆಗಿದ್ದು ಜಂಬೂದ್ವೀಪದ ಮಧ್ಯದಲ್ಲಿ ಹೇಮಾಚಲವು ಭೂಮಂಡಲಕ್ಕೆ ಅಲಂಕಾರಪ್ರಾಯವಾಗಿ, ಮುಗಿಲವರೆಗೆ ವಿಸ್ತಾರವಾಗಿ ಹಬ್ಬಿ ಅತುಲೈಶ್ವರ್ಯದಿಂದ ಮೆರೆಯುವದು. ಆರಂಭದಲ್ಲಿ ವರ್ಣರಂಜಿತವಾದ ಭೂಮಿಯ ನಟ್ಟನಡುವೆ ಎಲ್ಲ ದಿಕ್ಕುಗಳಲ್ಲೂ ಹಬ್ಬಿ ತುದಿಯಲ್ಲಿ ಗೋಪುರದಂತೆ ಅಡರಿಕೊಂಡಂಥ ಈ ಪರ್ವತದ ಸೊಬ ಗನ್ನು ಎಷ್ಟೆಂದು ವರ್ಣಿಸುವುದು.

ಹೀಗೆ ತೊಂಬತ್ತೊಂಬತ್ತು ಸಹಸ್ರ ಯೋಜನೋತ್ಸೇಧ ಸಹಸ್ರ ಪ್ರಯೋಜನ ಪಾತಾಳದಲ್ಲಿ ಒಳಸೇರಿದ ಪರ್ವತ ಪ್ರದೇಶದ ಕೆಳಭಾಗದಲ್ಲಿ ನಾಗಾದಿಯಾದ ಭವನವಾಸಿಕರ ವಾಸವಿರುವುದು, ಅವರ ಶರೀರವು ಹತ್ತು ಬಿಲ್ಲಿನ ಪ್ರಮಾಣ ವಿಸ್ತಾರವಿದ್ದು, ಆಯುಷ್ಯವು ಮೂರು, ಎರಡುವರೆ, ಎರಡು, ಒಂದುವರೆ ಪಲ್ಯೋಪಮ. ಅವರ ಭವನಗಳು ಏಳು ಕೋಟಿ ಎಂಟು ಲಕ್ಷ ಪ್ರಮಾಣವಿರುವವು. ಅವರ ಕೆಳಗೆ ಎಂಬತ್ತುನಾಲ್ಕು ಸಾವಿರ ಯೋಜನಗಳ ಅಂತರದಲ್ಲಿ ಅಸುರಕುಮಾರರಿರುವರು. ಅವರ ಶರೀರವು ಇಪ್ಪತ್ತೈದು ಬಾಣ ಪ್ರಮಾಣವಿದ್ದು, ಅನೇಕ ಸಾಗರೋಪಮ ಆಯುಷ್ಯವಿರುವದು. ಅವರ ಭವನಗಳು ಅರವತ್ತುನಾಲ್ಕು ಲಕ್ಷ ಪ್ರಮಾಣವಿರುವವು. ಅಲ್ಲಿಂದ ಕೆಳಗೆ ಸಹಸ್ರ ಯೋಜನಾಂತರದಲ್ಲಿ ನೀರಿನ ಭಾಗದಲ್ಲಿ ಘರ್ಮೆಯೆಂಬ ಹೆಸರ ರತ್ನಪ್ರಭೆಯೆಂಬ ಮೊದಲ ನರಕವಿರುವುದು. ಆ ನರಕ ಬಿಲಗಳು ಮೂವತ್ತು ಲಕ್ಷ ಪ್ರಮಾಣವಿರುವವು. ಅಲ್ಲಿ ಕೃಷ್ಣಲೇಶ್ಯಾಪರಿಣಾಮ ಮೊದಲಾದವರು ಹತ್ತು ಸಾವಿರ ಜಘನ್ಯ ಆಯುಷ್ಯವುಳ್ಳವರಾಗಿರುವರು. ಅಲ್ಲಿಂದ ಆಚೆ ಅಸಂಖ್ಯಾತ ಯೋಜನದ ಅಂತರದಲ್ಲಿ ವಂಸೆಯೆಂಬ ಹೆಸರಿನ ಶರ್ಕರಾಪ್ರಭೆ ಎಂಬ ಎರಡನೆಯ ನರಕವಿದ್ದು, ಅವರ ಬಿಲಗಳು ಇಪ್ಪತ್ತೈದು ಲಕ್ಷವಿರುವವು. ಅಲ್ಲಿಯ ನಾರಕರ ಆಯುಷ್ಯವು ತ್ರಿಸಾಗರೋಪಮವಾಗಿರುವದು. ಅಲ್ಲಿಂದ ಮುಂದೆ ಒಂದು ರಜ್ಜು ಪ್ರಮಾಣಾಂತರದಲ್ಲಿ ಮೇಘೆ ಹೆಸರಿನ ವಾಲುಕಪ್ರಭೆಯೆಂಬ ಮೂರನೆಯ ನರಕವಿದೆ. ಅವರ ಬಿಲಗಳು ಹದಿನೈದು ಲಕ್ಷವಿರುವವು. ಅಲ್ಲಿಂದ ಒಂದು ರಜ್ಜು ಪ್ರಮಾಣಾಂತರದಲ್ಲಿ ಪಂಕಪ್ರಭೆಯೆಂಬ ನಾಲ್ಕನೆಯ ನರಕ. ಅದರ ಬಿಲಗಳು ದಶಲಕ್ಷ. ಅಲ್ಲಿಯ ನಾರಕಿಗಳ ಆಯುಷ್ಯ ಹತ್ತು ಸಮುದ್ರೋಪಮವಾಗಿರುವುದು. ಅಲ್ಲಿಂದ ಮುಂದೆ ಧೂಮಪ್ರಭೆ, ತಮಪ್ರಭೆ, ಮಹಾತಮಪ್ರಭೆ ಎಂಬ ಐದನೆಯ, ಆರನೆಯ, ಏಳನೆಯ ನರಕಗಳಿವೆ. ಹೀಗೆ ರತ್ನಪ್ರಭೆಯಿಂದ ನಾಲ್ಕುವರೆ ನರಕಭೂಮಿಯವರೆಗೆ ಉತ್ಕೃಷ್ಟ ಉಷ್ಣವೂ, ಅಲ್ಲಿಂದ ಮುಂದೆ ಎರಡೂವರೆ ನರಕ ಭೂಮಿಯವರೆಗೆ ಅತಿ ಶೀತವೂ ಇರುವದು.

ಈ ನರಕಗಳಲ್ಲಿ ಮಿಥ್ಯಾದರ್ಶನವುಳ್ಳವರೂ, ಕ್ರೋಧ, ಮಾನ ಮಾಯೆ ಲೋಭಿಗಳೂ, ಮಧುಮದ್ಯ ಮಾಂಸಲೋಲುಪರೂ, ಪರದಾರ ಲೋಲುಪರೂ,

ಹೀನ ರೀತಿಯಲ್ಲಿ ನೆಲಸುವರು. ಅವರನ್ನು ಹಿಡಿದು, ತುಂಡರಿಸಿ, ಕರಗಸದಿಂದ ಸೀಳುವರು, ಪರದಾರಲೋಲುಪರನ್ನು ಕಾಯ್ದ ಕೆಂಪಾದ ಲೋಹದ ಬೊಂಬೆಯನ್ನು ಅಪ್ಪಿಕೊಳ್ಳುವಂತೆ ಮಾಡಲಾಗುವದು. ಹೀಗೆ ನರಕಿಗಳ ಕಷ್ಟವನ್ನು ದುಃಖವನ್ನು ವರ್ಣಿಸುವರು.

ಅಧೋಲೋಕವನ್ನು ವಿಸ್ತಾರವಾಗಿ ವಿವರಿಸಿದ ತರುವಾಯ ವೃಷಭಸ್ವ ಗುರುಗಳು ಮಧ್ಯಮ ಲೋಕವನ್ನು ವರ್ಣಿಸಿದರು :

ಈ ಜನರುಳ್ಳ ಜಂಬೂದ್ವೀಪದ ಮಧ್ಯದಲ್ಲಿರುವ ಮಂದರಗಿರಿಯ ದಕ್ಷಿಣೋತ್ತರದಲ್ಲಿ ಪೂರ್ವಾಪರ ವಿದೇಹಗಳಿವೆ. ಅವುಗಳ ಮೂವತ್ತೆರಡು ನಾಡುಗಳ ಮಧ್ಯೆ ಹರಿವ ಸೀತೆ, ಸೀತೋದಯ ಮೊದಲಾದ ಹದಿನಾಲ್ಕು ನದಿಗಳಿವೆ. ಜಂಬೂದ್ವೀಪವನ್ನು ಸುತ್ತುವರಿದ ಲವಣ ಸಮುದ್ರವಿದೆ. ಆ ದ್ವೀಪದ ದಿಕ್ಭಾಗದಲ್ಲಿ ಮಂದರ ಪರ್ವತವಿದೆ,

ಈ ಮಂದರ ಪರ್ವತದಲ್ಲಿ ಭರತ ಐರಾವತ. ಪೂರ್ವಾಪರ ವಿದೇಹಗಳು ಭೋಗ ಭೂಮಿಗಳು. ಅಲ್ಲಿಯ ಜನರಿಗೆ ಆತಂಕಗಳೆಂಬುವೇ ಇಲ್ಲ. ಅರಸರು ಸದಾ ಧರ್ಮನಿರತರು. ಅವರಲ್ಲಿಯ ನಾವಿರುವ ಭರತ ಕ್ಷೇತ್ರದಲ್ಲಿ ಪ್ರತಿಶ್ರುತಿ, ಸನ್ಮತಿ, ಕ್ಷೇಮಂಧರ, ಕ್ಷೇಮಂಕರ, ಸೀಮಂಧರ ಸೀಮಂಕರ, ವಿಮಲ ವಾಹನ, ಚಕ್ಷುಷ್ಮ, ಯಶಸ್ವಿ, ಅಭಿಚಂದ್ರ, ಚಂದ್ರಾಭ, ಮರುದ್ದೇವ, ಪ್ರಸನ್ನಜೀತನ. ನಾಭಿರಾಜರೆಂಬ ಹದಿನಾಲ್ಕು ಜನ ಕುಲಂಕರರು (ಮನುಗಳು) ವೃಷಭ, ಅಜಿತ, ಸಂಭವ, ಅಭಿನಂದನ, ಸುಮತಿ, ಪದ್ಮಪ್ರಭ, ಸುಪಾರ್ಶ್ವ, ಚಂದ್ರಪ್ರಭ, ಪುಷ್ಪದಂತ, ಶೀತಲ, ಶ್ರೇಯಾಂಸ, ವಾಸುಪೂಜ್ಯ, ವಿಮಲ, ಅನಂತ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರನಾಥ, ಮಲ್ಲಿನಾಥ, ಮುನಿಸುವ್ರತ, ನಮಿನಾಥ, ನೇಮಿನಾಥ, ಪಾರ್ಶ್ವನಾಥ ಮತ್ತು ವರ್ಧಮಾನರೆಂಬ ಇಪ್ಪತ್ತನಾಲ್ಕು ತೀರ್ಥಂಕರ ಪರಮದೇವರು; ಅಲ್ಲದೆ ಭರತ ಸಗರ ಮೊದಲಾದ ಹನ್ನೆರಡು ಜನ ಚಕ್ರವರ್ತಿಗಳೂ; ವಿಜಯ, ಅಚಲ ಮೊದಲಾದ ಒಂಬತ್ತು ಜನ ಬಲದೇವರೂ; ತ್ರಿಪೃಷ್ಟ, ದ್ವಿಪೃಷ್ಟ ಮೊದಲಾದ ಒಂಬತ್ತು ಜನ ವಾಸುದೇವರೂ; ಅಶ್ವಗ್ರೀವ, ತಾರಕ ಮೊದಲಾದ ಒಂಬತ್ತು ಜನ

ಪ್ರತಿವಾಸುದೇವರು, ಇಪ್ಪತ್ತನಾಲ್ಕು ಜನ ಮುಕ್ತರೂ, ಅಷ್ಟೇ ಮುಕ್ತ ವರು. ಇವರೆಲ್ಲರು ಧರ್ಮವನ್ನು ನಿರ್ಮಲವಾಗಿಡುವುದರಿಂದ ಭರ ಕ್ಷೇತ್ರವನ್ನು ಪವಿತ್ರವೆಂದು ಕೊಂಡಾಡುವರು.

ಮಧ್ಯಮ ಲೋಕವನ್ನು ಸುತ್ತುವರಿದುಕೊಂಡು ಚಂದ್ರ, ಆದಿತ್ಯ ಗ್ರ ಗಳಿವೆ. ಈ ಜ್ಯೋತಿರ್ಲೋಕದಲ್ಲಿ ಹುಟ್ಟಿದವರು ಅಯೋನಿಜ ಸಂಭವ ಅನೇಕ ಗುಣವುಳ್ಳವರು. ಅದನ್ನು ಮೀರಿ ಸೌಧರ್ಮ, ಈಶಾ ಸನತ್ಕುಮಾರ ಮೊದಲಾದ ೧೬ ಕಲ್ಪಗಳನ್ನೂ, ಅದರಲ್ಲಿಯ ಕಲ್ಪವಾಸ ಆಯುಷ್ಯ ಶರೀರ ಪ್ರಮಾಣವನ್ನು ಸುಖವನ್ನು ವರ್ಣಿಸುವರು.

ಈ ಹದಿನಾರು ಕಲ್ಪಗಳ ಮೇಲೆ ನವಗ್ರೈವೇಯಕಗಳಿರುವವು. ಅದ ಮೇಲೆ ವಿಜಯ, ವೈಜಯಂತ ಪಂಚಾನುತ್ತರಗಳಿವೆ. ಅದರಾಚೆ ಸಿದ್ಧಕ್ಷೇ ವಿದೆ. ಅಷ್ಟಕರ್ಮಗಳನ್ನು ಜಯಿಸಿದವರು ಮೋಕ್ಷಲಕ್ಷ್ಮಿಯು ಆ ಮು ಕಮಲದಲ್ಲಿ ನೆಲಸುವರು. ಅವರಿಗೆ ಅನಂತದರ್ಶನ ಅನಂತಜ್ಞಾನ, ಅನಂ ಸುಖ, ಅನಂತವೀರ್ಯ, ಸೂಕ್ಷ್ಮತ್ವ, ಅಗುರುಲಘುತ್ವ, ಅವ್ಯಾಬಾಧಗಳೆಂ ಎಂಟು ಪ್ರಕಾರದ ಗುಣಗಳು ಲಭಿಸುವವು— ಎಂದು ವಿವರವಾಗಿ ಅವನ ಉದ್ದೇಶಿಸಿ ನುಡಿದರು :

"ಸಗರನು ಚರಮಶರೀರಿಯು. ನೀನೂ ಅತನ ಇತರ ಮಕ್ಕಳ ಚರಮ ಶರೀರಿಗಳಾಗಿರುವಿರಿ. ಆದುದರಿಂದ ಆ ಪರಮಪದ(ಮೋಕ್ಷ) ನಿಮಗೂ ಲಭ್ಯವಿದೆ.

"ಪರಮ ಜಿನಧರ್ಮದ ನಿಜವಾದ ಸ್ವರೂಪವನ್ನು ನಂಬದವರು ಹುಟ್ಟು ಸಾವಿನ ಚಕ್ರದಲ್ಲಿ ಸುತ್ತುತ್ತಿರುವರು. ಅದನ್ನು ಸರಿಯಾಗಿ ತಿಳಿದವರಿ ಹೀಗೆ ತಿರುಗುವ ಅಗತ್ಯವೇನಿದೆ ?

" ಶುಭಾಶುಭ ಪರಿಣಾಮಗಳೇ ಪುಣ್ಯಪಾಪಗಳಿಗೆ ಕಾರಣಗಳ ಆದುದರಿಂದ ಶುದ್ಧಪರಿಣಾಮದಿಂದ ಆಚರಿಸುವುದೇ ಲೋಕಹಿತವ ಬಯಸುವ ಜಿನತತ್ತ್ವ.

"ಅದು ತನಗೆ ಮಾತ್ರ ಇದೆ, ಬೇರೆಯವರಿಗೆ ಸಾಧ್ಯವಿಲ್ಲ ಎಂದೆಣಿಸಬೇಡ. ತಾನು ಮಾಡಿದುದನ್ನು ತಾನೇ ಅನುಭವಿಸಬೇಕು.

"ಆದುದರಿಂದ ' ಜಿನಧರ್ಮದಲ್ಲಿ ಸಮ್ಯಗ್ ದರ್ಶನವನ್ನುಂಟುಮಾಡಿ ಅದುವೇ ಬೀಜ. ಅದರಿಂದ ನೀನು ನೇರವಾಗಿ ಮೋಕ್ಷ ಸುಖವನ್ನು ತಾಳು, ಸಗರಪುತ್ರನೇ!" ಎಂದು ಅಧೋಲೋಕ, ಮಧ್ಯಲೋಕ, ಊರ್ಧ್ವಲೋಕಗಳನ್ನು ವಿವರಿಸಲು, ಭಗೀರಥನು ಮುನೀಂದ್ರರ ಪಾದಪದ್ಮಗಳಿಗೆ ಎರಗಿದನು. ಮುಂದೆ ಅವರು ಸಮ್ಯಕ್ತ್ವ ಹಾಗೂ ಶ್ರಾವಕವ್ರತಗಳನ್ನು ವಿವರಿಸಿದರು :

"ಸಮ್ಯಕ್ತ್ವದಲ್ಲಿ ಆಜ್ಞೆ ಮತ್ತು ಅಧಿಗಮ ಎಂಬ ಎರಡು ರೀತಿಗಳು, ಅರಹಂತದೇವನ ಸಮವಸರಣವು ಬಾರದೂ ಇಲ್ಲವೆಂದೂ, ನಿರ್ಗ್ರಂಥರಿಗಿಂತ ಹಿರಿದಾದ ತಪಸ್ವಿಗಳಿಲ್ಲವೆಂದೂ. ಸಮ್ಯಕ್ತ್ವವೇ ಶ್ರೇಷ್ಠವೆಂದೂ ಆಜ್ಞಾಸಮ್ಯಕ್ತ್ವದ ವಿವರಣೆ. ಪಂಚಾಸ್ತಿಕಾಯ, ಷಡ್ದ್ರವ್ಯ, ಸಪ್ತತತ್ತ್ವ, ನವಪದಾರ್ಥಗಳನ್ನು ಸರಿಯಾಗಿ ಅರಿತುಕೊಳ್ಳುವುದು; ನಿಶ್ಶಂಕೆ, ನಿಷ್ಕಾಂಕ್ಷೆ ಮೊದಲಾದ ಪ್ರಭಾವನೆಯ ಎಂಟು ಗುಣಗಳನ್ನು ಅನುಸರಿಸಿ, ಇವುಗಳಿಗೆ ವಿರೋಧವಾದ ಎಂಟು ದೋಷಗಳನ್ನು ತ್ಯಜಿಸುವುದು; ಕುಲಮದ, ಜಾತಿಮದ, ಅಜ್ಞಾನಮದ, ಐಶ್ವರ್ಯಮದ ಮೊದಲಾದ ಅಷ್ಟಮದಗಳನ್ನು ಗೆದ್ದು; ಲೋಕಮೂಢ, ದೇವಮೂಢ, ಪಾಷಂಡಿಮೂಢ, ಮೂಢತ್ರಯಗಳನ್ನು ತ್ಯಜಿಸಬೇಕು. ಅಲ್ಲದೆ ಹಿಂಸೆ, ಅಸತ್ಯ, ಕಳ್ಳತನ, ಅಬ್ರಹ್ಮಚರ್ಯ, ಪರಿಗ್ರಹ, ಜೂಜು, ಮದ್ಯ ಸೇವನೆ, ಮಾಂಸ ಭಕ್ಷಣಗಳನ್ನು ತೊರೆಯುವ ಎಂಟು ವ್ರತಗಳನ್ನು ಶ್ರಾವಕರು ಪಾಲಿಸಬೇಕು, ಪಂಚಾಣುವ್ರತ, ದಿಗ್ವ್ರತ, ಶಿಕ್ಷಾವ್ರತ, ಹಾಗೂ ಷಟ್ ಕರ್ಮಗಳನ್ನು ಅನುಸರಿಸಬೇಕು. ಈ ದೃಢಧರ್ಮ ಮುನಿಗಳ ಧರ್ಮ ಪ್ರಭಾವನೆಯ ಶುಭಪರಿಣಾಮವಾಗಿ ಭಗೀರಥನು ಸಕಲ ಶ್ರಾವಕ ವ್ರತಗಳನ್ನು ಸ್ವೀಕರಿಸುವ ಸಂಕಲ್ಪದೊಡನೆ ಅವರಿಗೆ ವಂದಿಸಿ ಹೋದನು.

ಸಗರಚಕ್ರಿ ಕೈವಲ್ಯ ಪ್ರಾಪ್ತಿ: ಭಗೀರಥ ವೈರಾಗ್ಯ

ಮಣಿಕೇತುವು ತಾನು ಮಾಡಿದ ಮೋಸವನ್ನು ಪ್ರಕಟಪಡಿಸಿ, ತನ್ನ ಮನಸ್ಸಿಗಾದ ನೋವನ್ನು ಪರಿಹರಿಸಿಕೊಂಡು ತನ್ನ ನಿವಾಸಕ್ಕೆ ಮರಳಿದನು.

ಇತ್ತ ಸಗರಮುನಿಯೊಡನೆ ಅವನ ಅರವತ್ತು ಸಾವಿರ ಮಕ್ಕಳು ಚರಮ ಧಾರಿಗಳಾಗಿದ್ದು ಮಣಿಕೇತುವಿನ ಉಪಾಯವನ್ನು ಕಂಡು ಆನಂದಿಸಿದರು. 'ಇಷ್ಟವಾದುದನ್ನು ಧರ್ಮದೊಂದಿಗೆ ಹೊಂದಿಸಬೇಕು' ಎಂಬ ಮಾತನ್ನೂ, ಮಣಿಕೇತುವಿನ ಪರೋಪಕಾರ ಬುದ್ಧಿಯನ್ನೂ ಸ್ಮರಿಸಿ, ಅನಂತವಾದ ಸಂಸಾರಚಕ್ರದಲ್ಲಿ ತಿರುಗಿ ತಿರುಗುವ ನಮಗೆ ಮೋಕ್ಷದ ಮಾರ್ಗವನ್ನು ತೋರಿಸಿದನು, ಇದ್ದರೆ ಇಂತಹ ಗೆಳೆಯನಿರಬೇಕೆಂದು ಅವನನ್ನು ಮುಕ್ತಕಂಠದಿಂದ ಹೊಗಳಿದರು.

ಸಗರಮುನಿಯೂ ಅವನ ಕುಮಾರಮುನಿಗಳೂ ಸಮ್ಮೇದಗಿರಿಯಲ್ಲಿ ಮಹೋಗ್ರ ತಪಸ್ಸನ್ನು ಕೈಕೊಂಡರು. ಸಂಸಾರಬಂಧಕ್ಕೆ ಕಾರಣವಾಗುವ ಎಲ್ಲ ಕರ್ಮಗಳನ್ನು ಕಳೆದು ಹಾಕಿ, ಧ್ಯಾನದಲ್ಲಿ ಮುಂದುವರಿದು ಪರಮ ಪದವನ್ನು ಪಡೆದರು. ಸಗರಚಕ್ರಿಯೊಂದಿಗೆ, ತನ್ನ ಒಡಹುಟ್ಟಿದ ಕುಮಾರರ ಮೊದಲಾದ ಮುನಿಗಳು ಮುಕ್ತಿಯನ್ನು ಪಡೆದರೆಂಬುದನ್ನು ಭಗೀರಥನು ಮುನಿಗಳಿಂದ ಕೇಳಿ ತಿಳಿದು ತಾನೂ ವೈರಾಗ್ಯಭಾವನೆಯನ್ನು ತಾಳಿದನು. ವರದತ್ತನೆಂಬ ಮಗನಿಗೆ ರಾಜ್ಯಭಾರವನ್ನು ವಹಿಸಿ, ಕೈಲಾಸಪರ್ವತಕ್ಕೆ ಬಂದು ಶಿವಗುಪ್ತ ಮುನೀಂದ್ರರಿಂದ ದೀಕ್ಷೆಯನ್ನು ಸ್ವೀಕರಿಸಿ ಸನ್ಯಾಸಿಯಾದನು. ತಂದೆಯಾದ ಸಗರಚಕ್ರಿ ಹಾಗೂ ಅಣ್ಣಂದಿರಂತೆ ಭಗೀರಥನೂ ಉಗ್ರೋಗ್ರ ತಪಸ್ಸನ್ನಾಚರಿಸಿದನು.

ಗಂಗಾನದಿಯಲ್ಲಿ ನಿಂತು ತಪಸ್ಸನ್ನು ಮಾಡುತ್ತಿದ್ದ ಭಗೀರಥನು ಸುಂಟರಗಾಳಿಯ ರಭಸವನ್ನೂ, ಮಳೆಗಾಲದ ಮೋಡಗಳ ಧಾರಾವೃಷ್ಟಿಗೂ, ಚಳಿಗಾಲದ

ಹಿಮವಂತದ ಚಳಿಗೂ, ಬೇಸಿಗೆಯ ಬಿಸಿಲಿಗೆ ಕಾದ್ದ ಬಿಸಿಗೂ ಅಳುಕದೇ ನಿಯಮನಿಷ್ಠನಾಗಿ ಅಚಲನಾಗಿದ್ದನು. ಹೀಗೆ ಆ ಪರಮಯೋಗಿಯು ಪಂಚಸಮಿತಿಗಳನ್ನೂ, ಮನೋಗುಪ್ತಿ, ಕಾಯಗುಪ್ತಿಗಳೆಂಬ ಗುಪ್ತಿತ್ರಯಗಳನ್ನೂ, ಸಾಮಾಯಿಕ ಮೊದಲಾದ ಐದು ಚಾರಿತ್ರಗಳನ್ನು, ವಾಚನೆ ಮೊದಲಾದ ಐದು ಪ್ರಕಾರದ ಅಧ್ಯಯನದಲ್ಲಿ ಮಗ್ನನಾಗಿ, ಸರ್ವಸಂಗ ಪರಿತ್ಯಾಗಿಯಾಗಿ ಗಂಗಾತೀರಕ್ಕೆ ಬಂದನು. ಅಲ್ಲಿ ಪ್ರತಿಮಾಯೋಗದಲ್ಲಿದ್ದು ತಪಸ್ಸನ್ನು ಕೈಕೊಂಡ ಅವನಿಗೆ ಕೇವಲಜ್ಞಾನ ಪ್ರಾಪ್ತವಾಯಿತು. ಆಗ ಚತುರ್ವಿಧ ದೇವನಿಕಾಯವು ಬಂದು ಕೇವಲಿಯ ಪಾದಕ್ಕೆ ಶುಭ್ರವಾದ ಹಾಲಿನಿಂದ ಅಭಿಷೇಕ ಮಾಡಿದರು. ಆ ಪವಿತ್ರ ಜಲವು ಕೂಡಿದುದರಿಂದ ಗಂಗಾಜಲವು ಮಂಗಳಮಯವಾಯಿತು. ಅಂದಿನಿಂದ ಈ ಗಂಗೆಯನ್ನು ಭಗಿರಥನು ತಂದನೆಂದು ಪ್ರತೀತಿಯಾಯಿತು, ಭಾಗೀರಥಿ ಎಂಬ ಹೆಸರೂ ಪ್ರಸಿದ್ಧವಾಯಿತು. ಕೇವಲಜ್ಞಾನಿಯಾದ ಭಗೀರಥನು ಕೆಲವು ದಿನಗಳಲ್ಲಿ ತನ್ನ ಕರ್ಮಗಳನ್ನೆಲ್ಲ ಕಳೆದುಕೊಂಡು ಮೋಕ್ಷಲಕ್ಷ್ಮಿಯನ್ನು ಕೂಡಿದನು,

ಇತ್ತ ವರದತ್ತ ಮಹಾರಾಜನು ತನ್ನ ಅಜ್ಜನಾದ ಸಗರಚಕ್ರವರ್ತಿ ಹಾಗೂ ತಂದೆಯಾದ ಭಗೀರಥನು ಮೋಕ್ಷಲಕ್ಷ್ಮಿಯನ್ನು ಸಂಪಾದಿಸಿದ ಗುರುತಾಗಿ ಮಣಿ, ಕನಕಮಯ ಮಾನಸ್ತಂಭಗಳನ್ನೂ, ಜಿನಮಂದಿರಗಳನ್ನೂ ನಿರ್ಮಿಸಿದನು. ಜಿನಮಂದಿರಗಳಿಗೆ ಬಂಗಾರ, ಬೆಳ್ಳಿ, ಮಣಿಗಳಿಂದಾದ ಗಂಟೆಗಳನ್ನೂ, ದೀಪಮಾಲೆಗಳನ್ನೂ ದಾನವಿತ್ತನು. ಮಹಾಭಿಷೇಕಕ್ಕೆ ಅನುಕೂಲತೆ ಒದಗಿಸಿದನು. ಸಕಲ ಭವ್ಯಕೋಟಿಗೆ ಅಭ್ಯುದಯವಾಗುವಂತೆ ಮಾಡಿ ಸುಖದಿಂದ ರಾಜ್ಯವನ್ನು ಆಳುತ್ತಿದ್ದನು.

ಪರಿಶಿಷ್ಟ : ೧

ಕವಿ-ಕಾವ್ಯ – ದಾನಚಿಂತಾಮಣಿ ಸ್ತುತಿ

ನಮ್ರನಾದ ಅಮರೇಂದ್ರನ ಮಾಣಿಕ್ಯಮಯವಾದ ಕಿರೀಟದ ಪ್ರಕಾಶವು ಬಾಲಸೂರ್ಯನ ಪ್ರಭೆಯಂತೆ ಕಂಗೊಳಿಸುತ್ತ ತನಗೆ ಕುಂಕುಮ ಕೇಸರಿಯ ಲೇಪನವಂತಿರಲು, ನಮ್ರನಾದ ನಾಗೇಂದ್ರನ ಹಸ್ತದ ಕೆಂದಾವರೆಯೇ ಸುವರ್ಣಮಯವಾದ ಕರ್ಣಾಭರಣವಾಗಿರಲು, ವಿಶೇಷವಾಗಿ ಪ್ರಕಾಶಿಸುವ ಅಜಿತ ತೀರ್ಥಂಕರನ ಪಾದಪದ್ಮದ ಕಾಂತಿಯೆಂಬ ಲಕ್ಷ್ಮಿಯು ನಮ್ಮ ಹೃದಯವನ್ನು ಮೋಕ್ಷಲಕ್ಷ್ಮಿಯ ನಿವಾಸಸ್ಥಾನವನ್ನಾಗಿ ಮಾಡಲಿ.

ಎಲ್ಲ ಕ್ರಿಯೆಗಳಿಗೂ ಸಿದ್ಧಭಕ್ತಿಯೇ ಪ್ರಥಮ ಸಿದ್ಧ ಮಾತೃಕೆಯು. ಆ ಪದವಿಗೆ ತಾನೇ ಮೊತ್ತ ಮೊದಲಾದುದು. ಅದಲ್ಲದೆ ಸಿದ್ಧಶೇಷೆಯೆಂಬುದು ಶುಭವಾಕ್ಯವಾಯಿತೆಂಬ ಅನಂತಸುಖ ಪ್ರಯುಕ್ತರಾದ ಸಿದ್ಧರ ಅಭ್ಯುದಯ ಸುಖಗಳು ನಮಗೆ ಕಾವ್ಯಸಿದ್ಧಿಯನ್ನು ದಯಪಾಲಿಸಿ ಕಾಪಾಡಲಿ.

ಸುಪ್ರಸಿದ್ಧವಾದ ಉತ್ತಮ ಜೈನಧರ್ಮವನ್ನು ಅನುಸರಿಸಿ ಚಾರಿತ್ರ ಸಂಪನ್ನರಾಗಿ ಸುಪ್ರಸಿದ್ಧ ಶಿಷ್ಯರನ್ನು ಕಾಪಾಡುವವನಿಗೆ ಆಚಾರ್ಯನೆಂಬ ಹೆಸರು— ಜಗತ್ತನ್ನೆಲ್ಲ ವ್ಯಾಪಿಸಲು ತಾವೇ ಸತ್ಯವನು, ಗುಣಗಳಿಗೆ, ಭವ್ಯ ಸಮೂಹಕ್ಕೆ ಅವನ್ನು ತಮ್ಮ ಉದಾರತೆ ಔದಾರ್ಯದಿಂದ ಕೊಡುವರು.

ಇವು ಸುಜ್ಞಾನವನ್ನು ಪಡೆಯುವ ದಾರಿಗಳು, ಇವು ಅಜ್ಞಾನ ಅಂಧಕಾರದ ಕೂಪಗಳೆಂದು ವಿಶುದ್ಧ ಬುದ್ಧಿಯಿಂದ ತಿಳಿಸಿ, ಅಭ್ಯುದ್ಯಾತಿಪ್ರಾಜಾನುಪೇಕ್ಷೆಯು ವಿನೇಯ ಜನರಲ್ಲಿ ಉಂಟಾಗಲು ತತ್ತ್ವಗೃಹಗಳಲ್ಲಿ ರತ್ನಪ್ರದೀಪಗಳಿರುವ ರೀತಿಯಲ್ಲಿ ಇರುವ ಉಪಾಧ್ಯಾಯರು ನಮಗೆ ಸರ್ವಸುಖೋಪಾಯವನ್ನು ದಯಪಾಲಿಸಲಿ.

ಸಂಸಾರವೆಂಬ ದಟ್ಟಡವಿಯನ್ನು ದಾಟಲು, ವಿಷಯ ಸುಖವನ್ನು ತೊರೆಯಲು. ಕಾಮನನ್ನು ಗೆಲ್ಲುವುದು, ಕಷಾಯವೆಂಬ ವೈರಿಗಳನ್ನು ಮೆಟ್ಟುವುದು. ಇವೇ ಗುರಿಯಾಗಿ, ಸರ್ವ ಭವ್ಯ ಜನರಿಗೆ ಶಾಂತಿಯನ್ನು ಬಯಸುವ ಸಾಧುವರ್ಗವು ಸ್ವರ್ಗಾಪವರ್ಗವನ್ನು ದಯಪಾಲಿಸಲಿ.

ಜಿನಧರ್ಮಕ್ಕೆ ಪೂಜ್ಯರಾದ ಇಪ್ಪತ್ತನಾಲ್ಕು ಜನ ತೀರ್ಥಂಕರರೂ, ೨೪ ಜನ ಶಾಸನದೇವಿಯರೂ, ೨೪ ಜನ ಯಕ್ಷರೂ ನಮಗೆ ಅಕ್ಷಯ ಸುಖವನ್ನೀಯಲಿ. ದೇವೇಂದ್ರನಿಂದ ಪೂಜಿತ, ರಾಜನಿಂದ ಸೇವಿಸಲ್ಪಟ್ಟ, ಶ್ರೇಷ್ಠ ಗಂಗಮಂಡಲಾಧಿಪತಿಯಿಂದ ಅರ್ಚಿತವಾದ, ಜಗತ್ತಿನಲ್ಲಿಯೇ ಕೀರ್ತಿ ಪಡೆದ ಅಜಿತಸೇನ ಮುನಿಗಳ ಪಾದಕಮಲಗಳು ನಮಗೆ ಇಷ್ಟಸಿದ್ಧಿಯನ್ನು ಅನುಗ್ರಹಿಸಲಿ. ಅಸದೃಶವಾದ ಸಮ್ಯಗ್ದರ್ಶನವಿರಲು ಮನ-ವಚನ-ಕಾಯ ಶುದ್ಧಿಯಿಂದ ಪ್ರಸಿದ್ಧರಾದ ಅರಹಂತ, ಸಿದ್ಧ, ಸಾಧು, ಧರ್ಮ— ಈ ಚತುರ ಮಂಗಳಗಳನ್ನು ಆರಾಧಿಸುವೆನು. ಜ್ಞಾನ ಆಚಾರಗಳಿರದೇ ಮುಕ್ತಿಯನ್ನು ಪಡೆಯಲು ಸಹಾಯಕವಾದ ಸಾಧನಗಳು ಎಂದು ಇತರ ಧರ್ಮದವರು ತಿಳಿಸುತ್ತಾರೆ. ಆದರೆ ಜೈನ ಧರ್ಮದಲ್ಲಿ ಹಾಗಿಲ್ಲ. ಇನ್ನೂ ಹೆಚ್ಚಿನ ಜ್ಞಾನ, ಶ್ರದ್ಧೆ, ಆಚಾರಗಳಿಂದ ಕೂಡಿದ ಜ್ಞಾನವು ದೊರೆತು ಮೋಕ್ಷ ಲಭಿಸುವಂತಾಗಲಿ.

ಪ್ರಸಿದ್ಧನೂ, ಅಜೇಯನೂ ಆದ ಅಜಿತಜಿನನ ಧರ್ಮಚಕ್ರಕ್ಕೂ ಕರ್ಮಾರಿಗಳಿಗೂ ಜಿನಶ್ರೀ ಸೇವ್ಯನಾದಂದು ಭವ್ಯರಿಗೆ ಹಿತಕರನಾದನು. ಅವನ ಪ್ರಧಾನ ಗಣಧರನಾದ ಸಿಂಹಸೇನನು ಧರ್ಮವನ್ನು ನಿರ್ಮಲವಾಗಿರಿಸಲಿ.

ಶ್ರುತಜ್ಞಾನದಲ್ಲಿ ಭೇದವಿಲ್ಲ. ಅದನ್ನು ಪ್ರವೇಶಿಸಿದಾಗ ಕೇವಲ ಬೋಧ ಲಭಿಸುವುದು. ಅದರಿಂದ ಮೋಕ್ಷ ಪಡೆಯಲು ಸಾಧ್ಯ. ಆದುದರಿಂದ ಈ ಭವ ಹಾಗೂ ಮುಂದಿನ ಭವಕ್ಕೂ ಹಿತಕರವಾದುದು ಶ್ರುತ ಜ್ಞಾನವೇ,

ಕ್ರಿಯಾರಚನೆಗಳು ಹದಿನಾರು ಆಗಿರದೆ ಮೂವತ್ತಾರು ಆಗಿವೆ. ಅದರಂತೆ ಶೃಂಗಾರವೊಂದೇ ರಸವಾಗಿರದೆ ರಸಗಳು ಬಂದುವು. ಇವುಗಳ ನ್ನೊಳಗೊಂಡ ಉಚಿತ ರಸಾಲಂಕಾರಗಳಿಂದ ಅಲಂಕೃತಳಾದ ವಾಕ್ಸುಂದರಿ ಯನ್ನು ನಾಲಗೆಯ ಮೇಲೆ ನಲಿಸಲಿ. ಅಗಣ್ಯ ಪುಣ್ಯನಿಧಿ, ಜೈನಪಾದಕಮಲಗಳ ಭ್ರಮರ, ಜೈನ ಧರ್ಮಾನ್ವಿತವಾಗಿವರ್ತಿತಮನೀಯ ಜನರ ಉತ್ಸವ ಭೂಮಿಗೆ ತಾನೇ ಬೇಲಿಯೆನಿಸುವ ರೋಹಿಣಿ ಯಕ್ಷಿಯು, ದಾನಚಿಂತಾ ಮಣಿಯು, ಕವಿಚಕ್ರವರ್ತಿ ಬಯಸುವ ಮನೋರಥವನ್ನು ಪೂರ್ಣಗೊಳಿಸಲಿ. ಸಂಪೂರ್ಣ ಅರಳಿದ ಕಮಲದ ಮೇಲೆ ನಿಂತಿರುವ ಅಜಿತತೀರ್ಥಂಕರರ ಪಾದಕಮಲ ಭೃಂಗಿಯಾಗಿ, ಅವರ ಸಿಂಹಾಸನದ ತಳದಲ್ಲಿದ್ದು, ಸುರಕ್ಷಾ ದಕ್ಷನೂ, ಅಕ್ಷಯ ಫಲಾಪೇಕ್ಷೆಯುಳ್ಳವನೂ ಆದ ಮಹಾಯಕ್ಷನು ಉಪಾಸ ಕರ ಸಮೂಹವನ್ನು, ಧನ್ಯರನ್ನೂ ಆದರದಿಂದ ಕಾಪಾಡಲಿ.

ಪರಿಸರದ ಕುತೀರ್ಥವನ್ನು ಮುರಿದಟ್ಟಿ, ಧರ್ಮ ಪ್ರಕಟ ಕಮಲಬೋಧೆ ಯನ್ನು ತಾಳಿ, ಬೆಂಬಿಡದೊಡಗೂಡಿದ ತೇಜಶ್ಚಕ್ರವಾದ ಧರ್ಮಚಕ್ರವು ಸೂರ್ಯನಂತೆ ಸಕಲ ಭೂಲೋಕಕ್ಕೆಲ್ಲ ಕಲ್ಯಾಣಕಾರಿಯಾಗಲಿ. ಪಾಪವೆಂಬ ಧ್ವಜವನ್ನು ನಾಶಗೊಳಿಸಿ ವಿಜಯಧ್ವಜವನ್ನು ಎತ್ತಿ. ಧರ್ಮಧ್ವಜನೆನಿಸಿದ ಅಜಿತನಾಥನ ಗಜಧ್ವಜವು ಕೀರ್ತಿಧ್ವಜವಾಗಲಿ.

ವಿಷಯಗಳೆಂಬ ವಿಷ ಅಜಿತನಾಥನನ್ನು ಮುಟ್ಟಲಿಲ್ಲ. ಮನ್ಮಥನಿಗೆ ಅವನನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ದುಷ್ಟರಾದ ಕಷಾಯಭಟರಿಗೆ ಅತ ನನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಹೀಗೆ ಮಹಾಮಹಿಮಾನ್ವಿತನಾದ ಅಜಿತತೀರ್ಥಂಕರನ ಪಾತಕಗಳನ್ನು ಕಳೆದುಕೊಂಡು, ಸಾವಿನ ಲೋಕಾ ಲೋಕವನ್ನು ಅರಗಿಸಿದ ಮಹಾನುಭಾವನಾಗಿದ್ದಾನೆ.

* * *

ದಿಕ್‌ವಿಭಗಳಲ್ಲಿ ಐರಾವತವೂ, ದಾನಿಗಳಲ್ಲಿ ಶ್ರೇಷ್ಠಳಾದ ದಾನಚಿಂತಾ ಮಣಿಯೂ, ಚಕ್ರವರ್ತಿಗಳಲ್ಲಿ ಸಗರನಾಥನೂ, ವಿದ್ಯಾಧರರಲ್ಲಿ ಮೇಘ ವಿದ ಮಹಾ ಮುಗಿಲಾದವನು ಎನಿಸುವವನು. ಉತ್ತುಂಗವಾದ ಬೆಟ್ಟ ಶಲಭರ

ವೃಕ್ಷ, ಉತ್ತಮ ತೋಟ-ಪಟ್ಟಿ, ಮನೋಹರ ಸರೋವರ ಹೂದೋಟ
ಗಳಿಂದ ವೆಂಗಿಮಂಡಲವು ಮೇರೆಯಿಲ್ಲದೆ ಕಂಗೊಳಿಸುತ್ತಿತ್ತು. ಅಲ್ಲಿ
ಯೋಗ್ಯರಲ್ಲದೆ ಠಕ್ಕರಿಲ್ಲ. ಭೋಗವಿಲ್ಲದೆ ರಾಗವಿಲ್ಲ. ಕುಲೀನರಲ್ಲದೆ ಕುಲಹೀನ
ರಿಲ್ಲ, ಜಾತಿಯಲ್ಲದೆ ವಿಜಾತಿಯಿಲ್ಲ. ಪಂಡಿತರಲ್ಲದೆ ಮೂಢರಿಲ್ಲ, ದೇವಮನೆ
ಗಲ್ಲದೆ ಅಸುರಗೃಹಗಳಿಲ್ಲ, ಯೋಗ್ಯ ಬ್ರಾಹ್ಮಣರಲ್ಲದೆ ಅಯೋಗ್ಯರಿಲ್ಲ,
ಪರಲೋಕದ ಭಯವಿಲ್ಲದೆ ಅಪರಲೋಕ ಭಯವಿಲ್ಲ. ಪರಹಿತ ವ್ಯಸನಗಳಿಲ್ಲದೆ
ದುರ್ವ್ಯಸನಿಗಳಿಲ್ಲ; ಸಕಲ ವಿನೇಯ ಸಂಗತಿಗಳಲ್ಲದೆ ಅವಗ್ರಹಗಳೆಂಬುವೇ
ಇಲ್ಲ. ತೊರೆಗಳ ನೀರು ಸಾರ್ವಕಾಲಿಕವಾಗಿ ಹರಿಯುತ್ತಿದ್ದುದರಿಂದ ಹಣ್ಣು
ಗಳಿಂದಲೂ,ಬತ್ತದ ಹಚ್ಚ ಹಸಿರು ಪೈರಿನಿಂದಲೂ ದೇವಮಾತೃಕ ಪಚ್ಚೆಯಂತೆ
ವೆಂಗಿಮಂಡಲವು ಪ್ರಸಿದ್ಧವಾಗಿದೆ.ಭ್ರಮರಗಳ ಗೀತದಿಂದ, ಹೂವಿನ ಪರಿಮಳ
ದಿಂದ, ಫಲಗಳ ರಸದಿಂದ, ಮಂದಮಾರುತದಿಂದ, ಪರ್ವತಸಾಲುಗಳ
ಲೀಲಾವಿಲಾಸದಿಂದ ವೆಂಗಿ ವಿಷಯವು ಭೋಗಮಹೀತಳವೆನಿಸುವುದು.

ಸಮುದ್ರದಿಂದ ಆವೃತವಾದ ಈ ಭೂಮಿಯಲ್ಲಿ ವೆಂಗಿಮಂಡಲ
ವೆಂಬುದು ಪ್ರಸಿದ್ಧವಾಗಿದೆ. ಅದರಲ್ಲಿ ಇತರ ದೇಶಗಳನ್ನೆಲ್ಲ ಮೀರಿ ಕಮ್ಮೆ
ದೇಶವು ಮೆರೆಯುತ್ತಿದೆ. ಈ ಕಮ್ಮೆ ದೇಶದಲ್ಲಿ ಪುಂಗನೂರು ಜಗತ್ತಿಲಕ
ದಂತೆ ಮೆರೆಯುತ್ತಿದೆ. ಆ ಊರಿನ ನಾಗಮಯ್ಯ ಎಂಬಾತನ ಕೀರ್ತಿ ಸುಪ್ರ
ಸಿದ್ಧವಾದುದು. ಅವನು ಆಗಮದಲ್ಲಿ ಆಸಕ್ತಿಯುಳ್ಳವನೂ, ವಿನೇಯಜನ
ಹಿತಕರನೂ, ಜೈನಧರ್ಮಾವಲಂಬಿಯೂ, ಅನೇಕ ಭದ್ರಲಕ್ಷಣಗಳನ್ನೂ ಗುಣ
ಗಳನ್ನೂ ಹೊಂದಿದ್ದನು. ಆ ಪ್ರಸಿದ್ಧ ನಾಗಮಯ್ಯನಿಗೆ ಇಬ್ಬರು ಮಕ್ಕಳು.
ಹಿರಿಯವನು ವಿದ್ಯಾನಿಧಿಯಾದ ಮಲ್ಲಪ, ಕಿರಿಯವನು ಶುದ್ಧ ಸ್ವಭಾವವುಳ್ಳ
ವನೂ, ಅಣ್ಣನ ಭಕ್ತನೂ ಆದ ಪೊನ್ನಮಯ್ಯನು.

ಮಲ್ಲಪನಲ್ಲಿ ಕಾಣುವ ನೃಪಶಾಸ್ತ್ರಜ್ಞತೆ, ಶೂರತನ, ಪ್ರೀತಿ, ಗುಣ,
ಭವ್ಯತೆ, ಆಚಾರಕ್ರಮಗಳನ್ನು ಇತರ ಮಾನವರಲ್ಲಿ ಕಾಣುವುದು ಸಾಧ್ಯವಿರ
ಲಿಲ್ಲ. ಕವಿಮಂಡಳಿಗೂ, ಪಂಡಿತಮಂಡಳಿಗೂ ಅವನ ಮನೆ ತವರು
ಮನೆಯಾಗಿರಲು ಕೌಂಡಿಲ್ಯ ಕುಲಪ್ರದೀಪನಾದ ಮಲ್ಲಪನನ್ನು ಲೋಕವು ಹೊಗ
ಳುತ್ತಿದೆ, ನೃಪ ಸಭೆಯಲ್ಲಿ ಮಲ್ಲಪನು ಮಾತನಾಡಿದರೆ ಸಾಕು, ಅದು

ಸತ್ಯಾಕ್ಷರವೆಂದು ಪರಿಭಾವಿಸಲ್ಪಡುತ್ತಿತ್ತು, ಅವನು ನುಡಿದುದೇ ಮಾರ್ಗದರ್ಶಿ ಯೆಂದು ತಿಳಿಯಲಾಗುತ್ತಿತ್ತು. ಶಾಸ್ತ್ರಚರ್ಚೆಯ ಕಾಲದಲ್ಲಿ ವರ್ತಮಾನ, ಭೂತ, ಭವಿಷ್ಯತ್ತುಗಳನ್ನು ಬಲ್ಲವನೂ, ಯುದ್ಧಭೂಮಿಯಲ್ಲಿ ಶೌರ್ಯ-ಸಾಹಸವನ್ನು ತೋರಬಲ್ಲವನೂ ಆದ ಅವನಂತೆ, ಶಸ್ತ್ರ ಹಾಗೂ ಶಾಸ್ತ್ರ ವಿದ್ಯಾ ಕುಶಲರು ಬೇರಾರು?

ಪೊನ್ನಮಯ್ಯನು ನಯವಿನಯಸಂಪನ್ನನು. ಮಂದರಗಿರೀಂದ್ರದಂತೆ ಧೈರ್ಯೋನ್ನತನೂ, ಧರ್ಮಕ್ಕೆ ಧರ್ಮನಂದನನಂತೆಯೂ ಆಗಿರುವನು. ಬಲದೇವ-ವಾಸುದೇವರ ಗುಣದಂತೆ, ರಾಮ ಲಕ್ಷ್ಮಣರ ಪೆಂಪಿನಂತೆ, ಭೀಮಾರ್ಜುನರಂತೆ ಮಲ್ಲಪ–ಪೊನ್ನಮಯ್ಯರ ಚರಿತೆ ಇದ್ದಿತು. ಇವರೀರ್ವರ ಗುರುಗಳಾದ ಜಿನಚಂದ್ರ ಮುನೀಂದ್ರರ ಅಭಿಪ್ರಾಯದಂತೆ ಪೊನ್ನಕವಿಯಿಂದ ಪುರಾಣಚೂಡಾಮಣಿಯನ್ನು ಬರೆಯಿಸಿ ಭೂಮಂಡಲದಲ್ಲೆಲ್ಲ ಹರಡಿಸಿದರು.

ಮಲ್ಲಪನು ಜಿನಭಕ್ತ. ಪೊನ್ನಮಯ್ಯನು ಆ ಅಣ್ಣನ ಭಕ್ತ. ಅವರೀರ್ವರೂ ಸೈನ್ಯವನ್ನು ಸೇರಿ ಕೌಂಡಿನ್ಯಗೋತ್ರಮಂಡನರಾದರು. ಗೋವಿಂದನು ಪರಮದ್ರೋಹದಿಂದ ತೈಲಪನೃಪನನ್ನು ಇರಿಯಲು ಬರಲು ತನ್ನ ಒಡೆಯನನ್ನು ಕಾಪಾಡಲೆಂದು, ಎದುರ ಬಂದವರನ್ನು ಸಾಯಿಸಿ ಕಾವೇರಿನದಿಯ ದಂಡೆಯಮೇಲೆ ಪೊನ್ನಮಯ್ಯನು ಪರಲೋಕವನ್ನೈದಿದನು.

ಅವರಲ್ಲಿ ಅಪ್ರತಿಮ ವಿಪ್ರಕುಲದೀಪಕನೂ, ಅಸಹಾಯ ಸಾಹಸ ಉತ್ಸಾಹದಿಂದ ಕೂಡಿದವನೂ, ಆಶ್ರಿತರನ್ನು ವಜ್ರದ ಕೋಟೆಯಂತೆ ಸಲಹಬಲ್ಲವನೂ, ಅಭಿಮಾನಶಾಲಿಯೂ, ಅಹಿತಕರ ಆನೆಗಳ ಸಮೂಹಕ್ಕೆ ಸಿಂಹಪ್ರಾಯನಾಗಿಯೂ, ಸ್ವಾಮಿನಿಷ್ಠನೂ, ಅಭಿನವ ಕೃಪಾಚಾರ್ಯನೂ, ಮೂರು ಕಾಲಗಳನ್ನು ಬಲ್ಲವನೂ, ರತ್ನತ್ರಯಗಳನ್ನು ಪಾಲಿಸತಕ್ಕವನೂ, ಭೂಲೋಕಕ್ಕೆಲ್ಲ ಪ್ರಸಿದ್ಧರಾದ ನಿರ್ಗ್ರಂಥ ಮುನಿಗಳಾದ ಜಿನಚಂದ್ರರ ಪರಮ ಶಿಷ್ಯನೂ, ಚಾಲುಕ್ಯಾಭರಣನೂ, ಶ್ರೀಮದಾಹವಮಲ್ಲದೇವನ ಸಾಮ್ರಾಜ್ಯ ಲಕ್ಷ್ಮಿಯ ವಿಸ್ತರಣೆಗೆ ಕಾರಣನಾದವನೂ ಆದವ ಆ ಮಲ್ಲಪ್ಪ.

ಕವಿವರ ಕಾಮಧೇನು', 'ಜಿನಧರ್ಮಪತಾಕೆ', 'ಮಹಾಸತಿ ಕುಲತಿಲಕೆ' ಎಂಬ ಕೀರ್ತಿಪಡೆದ ಅತ್ತಿಮಬ್ಬೆ, ಪತಿವ್ರತಾಗುಣಶೋಭಿತಳಾದ ಗುಂಡಮಬ್ಬೆ ಇವರನ್ನು ಚಾಲುಕ್ಯ ಚಕ್ರವರ್ತಿಯ ಮಹಾಮಂತ್ರಿಯಾದ ದಲ್ಲಪನ ಮಗನಾಗಿ, ರಾಜನ ಭೂಮಿಗೆ ದಿಕ್ಕರಿಯಂತೆ ನಾಗರಾಜನಂತೆ ಆಧಾರಸ್ತಂಭ ವಾಗಿದ್ದ ನಾಗದೇವನೆಂಬ ಶ್ರೇಷ್ಠ ಪುರುಷನಿಗೆ ಕೊಟ್ಟು ಮದುವೆ ಮಾಡಿದರು.

ಪ್ರಸಿದ್ಧರಾದ ನಾಗದೇವ-ಅತ್ತಿಮಬ್ಬೆ ಇವರಿಗೆ ಪಡೆವಳ ತೈಲನೆಂದೂ, ವಿನಯಾಲಂಕಾರನೆಂದೂ ಪ್ರಸಿದ್ಧಿ ಪಡೆದ ಅಣ್ಣಿಗದೇವನು ಜನಿಸಿದನು ಹೀಗೆ ಕುಲತಿಲಕನೆನಿಸಿದ ನನ್ನಿನಾರಾಯಣನು ಮಗನಾಗಿರಲು ಅಭಿನವ ಕಾಮದೇವನೂ, ಸುಭಟರ ಚೂಡಾಮಣಿಯೂ, ಒರಟರ ಮಲ್ಲನೂ ಆದ ನಾಗದೇವನು ದೇವಪಾದಕಮಲಗಳ ಭ್ರಮರನೆನಿಸಿ, ಕುಮರರಜೊತೆಯ ಯುದ್ಧದಲ್ಲಿ ಒಡೆಯನ ಮುಂದೆ ನಿಂತು, ಅನ್ಯ ವೈರಿಗಳ ತಲೆಗಳನ್ನು ವೀರಾ ವೇಶದಿಂದ ಸಂಹರಿಸಿದನು. ಆವನ ಶೌರ್ಯ-ಸಾಹಸವನ್ನು ಮೆಚ್ಚಿ ಸೇನಾಪತಿಯನ್ನಾಗಿ ಮಾಡಲು, ಆಪ್ತಮಂತ್ರಿ ದಲ್ಲಪನ ಮಗನಾದ ನಾಗ ದೇವನು ತನ್ನಂತಹ ವೀರರಾಗಲಿ, ಸ್ವಾಮಿಭಕ್ತರಾಗಲಿ ಬೇರೊಬ್ಬರಿಲ್ಲವೆಂಬಂತೆ ವೀರತನವನ್ನು ಮೆರೆದನು.

ಹೀಗೆ ಅನೇಕ ಯುದ್ಧಗಳಲ್ಲಿ ವಿಜಯಲಕ್ಷ್ಮಿಯನ್ನು ವರಿಸಿ, ಆಹವ ಮಲ್ಲದೇವನಿಂದ ಅನುಗ್ರಹಿಸಲ್ಪಟ್ಟು ಸೈನ್ಯಾಧಿಪತ್ಯವನ್ನು ವಹಿಸಿ, ಮನೋ ಹರರಾದ ಪತ್ನಿಯರಿಬ್ಬರಲ್ಲಿ ಉದ್ದಾಮ ಯೌವನ ಲಕ್ಷ್ಮಿವೈಭವದಲ್ಲಿದ್ದು, ಆ ದೇವಲೋಕದ ಜನರನ್ನು ಸೇರುವ ಉತ್ಸುಕತೆಯಿಂದ ನಾಗದೇವನು ಸ್ವರ್ಗಸ್ಥನಾದನು.

ಪತಿ ಸ್ವರ್ಗಸ್ಥನಾಗಲು ಕುಲವಧುವಾದವಳು ಆಚರಿಸಬೇಕಾದ ಕಾರ್ಯ ಗಳು ಎರಡು : ಜಿನದೀಕ್ಷೆಯನ್ನು ಸ್ವೀಕರಿಸುವುದು ಅಥವಾ ಶುಭ ಚಾರಿತ್ರ್ಯ ದಿಂದ ಮರಣವನ್ನಪ್ಪುವದು, ಇವೆರಡನ್ನು ಬಿಟ್ಟು ಹೀನವಾದ ಆಸೆಗಳನ್ನಿಟ್ಟು ಕೊಂಡು ಬದುಕುವುದು ಉಚಿತವಲ್ಲ ಎಂದು ತನ್ನಲ್ಲಿಯೇ ಬಗೆದ ಗುಂಡಮಬ್ಬೆಯು ಅತ್ತಿಮಬ್ಬೆಯಲ್ಲಿ ಹೀಗೆಂದು ಬೇಡಿಕೊಂಡಳು :

'ಅಕ್ಕ ನಿನಗೆ ಜಗತ್ತಿಲಕನಾದ ಮಗನಿದ್ದಾನೆ. ಅವನು ಬೆಳೆದು ಸಮರ್ಥನಾಗುವವರೆಗೆ ನೀನು ಜೀವಿಸಿರುವುದು ಅವಶ್ಯ. ನಾನು ಪತಿ ನಾಗದೇವನೊಂದಿಗೆ ಚಿತಾಗ್ನಿಯನ್ನು ಅಪ್ಪಿಕೊಳ್ಳುವೆ.''

ಎಂದು ಅತ್ತಿಮಬ್ಬೆಯನ್ನು ಒಪ್ಪಿಸಿ ಚಿತಾಗ್ನಿಯನ್ನು ಸೇರಿ ಸತ್ತು, ಗುಂಡಮಬ್ಬೆಯು ತನ್ನ ಸಜ್ಜನಿಕೆಯ ಹಿರಿಮೆಯನ್ನು ಲೋಕಕ್ಕೆ ತೋರಿದಳು; ಮಹಾ ಸತಿಯರಿಗೆ ಉಚಿತವಾದ ರೀತಿಯಲ್ಲಿ ನಡೆದುಕೊಂಡಳು. ಸ್ವರ್ಗದಲ್ಲಿಯೂ ನಾಗದೇವನಿಗೆ ಮನಃಪ್ರಿಯೆಯಾದುದನ್ನು ಕಂಡು ಇಂದ್ರಸುಂದರಿಯರು ಮತ್ಸರಪಟ್ಟುದರಲ್ಲಿ ಆಶ್ಚರ್ಯವೇನು ?

* * *

ಗುಂಡಮಬ್ಬೆಯು ಪತಿಯೊಂದಿಗೆ ಚಿತಾಗ್ನಿಯಲ್ಲಿ ತನ್ನ ದೇಹವನ್ನು ಒಂದೇ ಕ್ಷಣದಲ್ಲಿ ನಿವೇದಿಸಿಕೊಂಡಳು. ಅತ್ತಿಮಬ್ಬೆಯು ಅವಳಿಗಿಂತ ಹಿರಿಯಳಾದುದರಿಂದ ಅವಳಿಗಿಂತ ಹಿರಿದಾದ, ಕಠೋರವಾದ ವ್ರತವೆಂಬ ಅಗ್ನಿಯಲ್ಲಿ ಪ್ರತಿದಿನವೂ ತನ್ನ ದೇಹವನ್ನು ಕೃಶಗೊಳಿಸುತ್ತ ಹೋಗುವೆನೆಂದು ನಿರ್ಧರಿಸಿದಳು. ಹೀಗೆ ಅವಳಲ್ಲಿ ಮನ್ಮಥವಿರೋಧವೂ, ದೇಹವಿರೋಧವೂ ಶೋಭಿಸಿದವು.

ಪತಿಯ ವಿಯೋಗದಿಂದ ಖಡ್ಗಧಾರೆಯಂತಿದ್ದ ವ್ರತಗಳನ್ನು ಧರಿಸಿ, ಧರ್ಮವನ್ನಾಚರಿಸುತ್ತ, ಮಗನನ್ನು ಬೆಳೆಸಲೆಂದು ಮಾತ್ರ ಅವಳು ದೇಹ ಧರಿಸಿದಂತಿತ್ತು ! ತನ್ನ ದೇಹವನ್ನು ಉಪವಾಸದಿಂದಲೂ, ಸಂಪತ್ತನ್ನು ನಿತ್ಯದಾನದಿಂದಲೂ ವಿನಿಯೋಗಿಸಿ ಅತ್ತಿಮಬ್ಬೆ ಕೀರ್ತಿವಂತೆಯಾದಳು. ನೂರ್ಮಡಿ ತೈಲನ ಪಡೆವಳ ತೈಲನ ಜನನಿಯಾದ ಅತ್ತಿಮಬ್ಬೆಯ ಸಮಾನರು ಬೇರಾರು ? ಅತ್ತಿಮಬ್ಬೆಯ ಜಿನಧರ್ಮಪರಾಯಣತೆ, ದಯಾಪರತೆ, ದಾನ, ಪೂಜೆ, ಶೀಲ, ಉಪವಾಸಗಳ ನಿರ್ಮಲ ಯಶಸ್ಸು ದಶದಿಕ್ಕುಗಳಲ್ಲಿಯೂ ಹರಡಿತು. ಶ್ರಾವಕಧರ್ಮದಲ್ಲಿ ಅವಳಿಗೆ ಬೇರಾರೂ ಸಮಾನರಲ್ಲರೆಂಬಂತೆ ರೇವತಿಯೂ, ಸಜ್ಜನಿಕೆಯಲ್ಲಿ ಜನಕಾತ್ಮಜೆಯೂ, ಶೀಲದಲ್ಲಿ ದೇವಕಿಯೂ, ದಾನಗುಣದಲ್ಲಿ ಸುಲೋಚನೆಯೂ ಎಂದು ಭವ್ಯರು ಅವಳನ್ನು ಮೆಚ್ಚಿ

ಹೊಗಳುತ್ತಿದ್ದರು. ಬುಧಜನವಂದಿತೆ, ಧರ್ಮಪ್ರಧಾನೆ, ದರ್ಶನವಿಶುದ್ಧೆ, ದಾನಗುಣೈಕಾಂಬುನಿಧಿ, ಕವಿವರ ಕಾಮಧೇನುವೆಂದೂ ಸ್ತುತಿಸುತ್ತಿದ್ದರು. ದಾನಚಿಂತಾಮಣಿಯನ್ನು ಅಜಿತಜಿನನ ಪಾದಕಮಲದ ಧೂಳಿಯಲ್ಲಿ ಆಸಕ್ತ ವಾದ ದುಂಬಿಯೆಂದೂ, ಗುಣಶೀಲ, ದಯಾಧ್ವಜೆಯೆಂದೂ ಬಗೆಬಗೆಯಾಗಿ ಹೊಗಳುತ್ತಿದ್ದರು.

ಜಿನಪದಭಕ್ತೆಯೂ, ಮೂರು ಲೋಕದ ಜನವಂದಿತೆಯೂ ಚಕ್ರವರ್ತಿ ಯಿಂದ ಪೂಜಿತಳೂ, ಜಿನಶಾಸನದಲ್ಲಿ ಆಸಕ್ತಿಯುಳ್ಳವಳೂ, ಪಡೆವಳ ತೈಲನ ಜನನಿಯೂ ಆದ ಅತ್ತಿಮಬ್ಬೆಯನ್ನು ತೀರ್ಥಂಕರ ಜನನಿಯೆನ್ನದಿರುವರೆ ? ಈ ಪತಿವ್ರತೆಯು ತನ್ನ ಮನದಲ್ಲಿ ಜಿನನನ್ನು ಹೊಂದಿರುವಳು; ತೀರ್ಥಂಕರ ಜನನಿಯಾದರೋ, ತನ್ನ ಗರ್ಭದಲ್ಲಿ ಅವನನ್ನು ಹೊಂದಿರುವಳು. ಇದಿಷ್ಟೇ ಅವರೀರ್ವರಲ್ಲಿಯ ವ್ಯತ್ಯಾಸ. ಆದರೆ ಅವರೀರ್ವರಲ್ಲಿ ಬೇರೇನಾದರೂ ವ್ಯತ್ಯಾಸವುಂಟೆ ?

ಆಸನ್ನಭವ್ಯೆ ಜಿನಶಾಸನ ದೀಪಿಕೆ ಎಂಬ ಕೀರ್ತಿಪಡೆದ ಅತ್ತಿಮಬ್ಬೆಯು ಸಾವಿರದೈನೂರು ಚಿನ್ನದ ಜಿನಬಿಂಬಗಳನ್ನು ಪ್ರೀತಿಯಿಂದ ಮಾಡಿಸಿದಳು, ಮಣಿಮಯ ಘಂಟೆಗಳನ್ನೂ, ಮಣಿಗಳಿಂದ ಅಲಂಕೃತ ಶ್ರೇಣಿಗಳನ್ನು ಸ್ವರ್ಣಮಯ ದೀಪಮಾಲೆ, ದಿವ್ಯ ವಸ್ತ್ರಗಳನ್ನೂ, ಉತ್ತುಂಗಧ್ವಜ, ರತ್ನ ತೋರಣಗಳನ್ನೂ ದಾನ ಮಾಡಿದಳು. ಉತ್ತುಂಗನಾದ ಗೊಮ್ಮಟನನ್ನು ಕಾಣುವವರೆಗೆ ಆಹಾರವನ್ನು ಸ್ವೀಕರಿಸದೆ, ಬೆಟ್ಟವನ್ನು ಏರಿ ಆ ಗೊಮ್ಮಟನ ಬಳಿಗೆ ಬಂದಾಗ ಅವಳ ಪ್ರವಾಸದ ಆಯಾಸವೆಲ್ಲ ಮರೆಯಾಗಲೆಂಬಂತೆ ಅಕಾಲ ವೃಷ್ಟಿಯಾಯಿತು. ಅವಳ ದೈವಭಕ್ತಿಯ ಮಹಿಮೆಗೆ ಪುಷ್ಪವೃಷ್ಟಿ ಯಾದುದರಲ್ಲಿ ಆಶ್ಚರ್ಯವೇನು? ಗುಣಿಗಳನ್ನು, ಶ್ರೇಷ್ಠರಾದ ಒಳ್ಳೆಯತನದ ಖಣಿಗಳನ್ನೂ ಕಾಣಲು ಸಾಧ್ಯವಾದುದರಿಂದ ದಾನಚಿಂತಾಮಣಿಯಿಂದಾಗಿ, ಆ ಕಾಲ ಅವಸರ್ಪಿಣಿಯ ಕಾಲವಲ್ಲ ಉತ್ಸರ್ಪಿಣಿಕಾಲವೆಂದು ಭಾಸವಾಯಿತು.

ಬಯಸಿ ಬಂದವರಿಗೆ ಕೊಟ್ಟುದೇ ಧನ, ಕೊಡದಿದ್ದರೆ ಅದು ಕೆಡುವು ದೆಂದು, ಅದನ್ನು ಕೊಡುವುದರಿಂದ ನಷ್ಟವಾಗುವದಿಲ್ಲವೆಂಬುದು ಅತ್ತಿಮಬ್ಬೆಯ ದಾನಗುಣ. ಗುಣದಂಕಕಾರ್ತಿಯಾದ ಅವಳು ಯುದ್ಧಭೂಮಿ ಯಲ್ಲಿ ಕಲಿಯೆಂದೂ,ಮನೆಯಲ್ಲಿ ದಾನಿಯೆಂದೂ ಪ್ರಸಿದ್ಧಳಾಗಿದ್ದಳು.ಹೆಂಗಸಾದ

ಆ, ತೈಲಜನನಿಯು ಎದುರಿಗೆ ಮೀಸೆಹೊತ್ತ ಆಣ್ಣಂದಿರು ರಂಜಿಸಬಲ್ಲರೆ? ಧರ್ಮವಿರೋಧಿಗಳ ಪಾಲಿಗೆ ಅವಳು ಪರಿತಪಾದ ಕತ್ತಿಯಂತೆಯೂ, ಧರ್ಮಾತ್ಮರ ಪಾಲಿಗೆ ಕಲ್ಪಲತೆಯಂತೆಯೂ ಇದ್ದಳೆಂದು ಜಗತ್ತು ಅವಳನ್ನು ಹೊಗಳುತ್ತದೆ. ಹೀಗೆ ಮಹಿಮಾಮಂತಳೂ, ಜಗನ್ಮಾತಳೂ, ಜಿನಧರ್ಮಪತಾಕೆಯೂ ಆದ ಆ ಮಹಾಸತಿ ಅತ್ತಿಮಬ್ಬೆಯ ಗುಣಗಾನ ಮಾಡುವುದು ಒಂದು ಪುಣ್ಯ ಕಾರ್ಯವೇ ಸರಿ !

ಉತ್ತಮ ಗೋತ್ರದಲ್ಲಿ ಜನಿಸಿದವಳೂ, ಸದಾಚರಣೆಯುಳ್ಳವಳೂ, ಮಹಾಸತಿಯೂ, ವಿನೀಯಚೂಡಾಮಣಿಯೂ, ತನ್ನೊಂದಿಗೆ ಇತರರನ್ನೂ ಎತ್ತುವ ಹಿರಿಯ ಗುಣವುಳ್ಳವಳು ಅತ್ತಿಮಬ್ಬೆ ! ಪತಿವ್ರತೆಯರಲ್ಲಿ ಶ್ರೇಷ್ಠರಾದ ಧರಣೀಸುತೆ ಸೀತೆ, ಪುಲೋಮಸಂತೆ ಶಚಿದೇವಿ, ಪರ್ವತರಾಜನ ಮಗಳಾದ ಗಂಗೆ, ದಕ್ಷಸುತೆ ಇವರು ಮಲ್ಲಪಸುತೆಯಾದ ಅತ್ತಿಮಬ್ಬೆಗೆ ಸಮಾನರಾದವರು ! ಸ್ತ್ರೀಯರಲ್ಲಿ ಶೀಲಗುಣವನ್ನು ಕಾಪಾಡಿಕೊಂಡು ಶ್ರೇಷ್ಠರಾದ ರಾಮಾಂಗನೆ, ಪಂಕೇರುಹನಾಭಾಂಗನೆಯರು ನಾಗದೇವನ ಈ ಸತಿಗೆ ಸಮಾನರಾದವರು ! ಅವಳ ಶ್ರದ್ಧೆ, ನಂಬುಗೆ ಜಿನಧರ್ಮದಲ್ಲಿರಲು, ದರ್ಶನಶುದ್ಧಿಯು ಮನವನ್ನಾವರಿಸಲು ಜಯಂತಾಂಬಿಕೆಯಂತೆ ಪ್ರಸಿದ್ಧಳಾದ ಅಜಿತಜಿನಾಂಬಿಕೆಯಂತೆ ತೈಲಾಂಬಿಕೆ ಸಮಾನಳು !

ಬಿಳಿಯರಳೆಯಂತೆ, ಗಂಗಾಜಲದಂತೆ, ಅಜಿತಸೇನಮುನಿಪತಿಯ ಗುಣಾವಳಿಯಂತೆ, ಸುಪ್ರಸಿದ್ಧವಾದ ಕೊಪ್ಪಳ ಬೆಟ್ಟದಂತೆ ಪತಿವ್ರತೆಯಾದ ಅತ್ತಿಮಬ್ಬೆಯ ಚರಿತ್ರವು ಪವಿತ್ರವಾದುದು. ವೃಷಭದೇವ ಹಾಗೂ ಅಜಿತನಾಥರು ಮೊದಲ ಹಾಗೂ ಎರಡನೆಯ ತೀರ್ಥಂಕರರು, ಭರತೇಶ ಹಾಗೂ ಸಗರ ಚಕ್ರವರ್ತಿಗಳು ಮೊದಲ ಹಾಗೂ ಎರಡನೆಯ ಚಕ್ರವರ್ತಿಗಳು. ಅವರಂತೆ ಆದಿತೀರ್ಥಂಕರರ ಕಾಲದಲ್ಲಿ ಶ್ರೇಯಾಂಸನು ಶ್ರೇಷ್ಠ ದಾನಿಯೆನಿಸಿದಂತೆ ಈ ಕಾಲದಲ್ಲಿ ದಾನಿಯೆನಿಸಿದವಳು ಪರಮಶ್ರಾವಕಿ ಅತ್ತಿಮಬ್ಬೆ !

* * *

ಕೆಲವರು ದಾನದಿಂದ, ಕೆಲವರು ತಮ್ಮ ಸಮ್ಯಕ್ತ್ವದಿಂದ, ಕೆಲವರು ಧರ್ಮದ ಹಿರಿಮೆಯಿಂದ, ಕೆಲವರು ಶೀಲವ್ರತಾಚಾರದಿಂದ ಪ್ರಸಿದ್ಧರಾದವರು.

ಅವರೆ ಪಾನಗುಣ, ಸಮ್ಯಕ್ತ್ವ, ಧರ್ಮ. ಮೇಲಾಗಿ ಶೀಲವ್ರತಾಚಾರಗಳೆಲ್ಲದ ರಿಂದ ಪ್ರಸಿದ್ಧಳಾದವಳು ಅತ್ತಿಮಬ್ಬೆ! ದಯೆಯನ್ನು ಅವಲಂಬಿಸಿ ಜೈನ ಧರ್ಮದಲ್ಲಿ ಆಸಕ್ತಿಯನ್ನು ತಾಳಿ, ಈ ಕಾಲದಲ್ಲಿ ಸಮ್ಯಕ್ತ್ವಶುದ್ಧಿಯನ್ನು ಅವಲಂಬಿಸಿ ಲೋಕಕ್ಕೆ ಆಶ್ಚರ್ಯವನ್ನುಂಟುಮಾಡಿದವಳು.

ಶೀಲಾಲಂಕೃತೆಯೂ, ಗುಣಮಾಲಾಲಂಕೃತೆಯೂ ಆದ ಆ ಮಹಾಸತಿ ಯಾದ ತೈಲಾಂಬಿಕೆಯ ಹೆಸರನ್ನು ಉಚ್ಚರಿಸಲು ಬಾಲೆಯರಿಗೆ ಕಲಂಕ ತಟ್ಟುವುದೆ? ಈ ಮಹಾಸತಿ ವಾಸಿಸುವ ದೇಶದಲ್ಲಿ ಕಿಚ್ಚು ಹರಡುವದಿಲ್ಲ; ವಿಷಸರ್ಪ ಕಚ್ಚುವದಿಲ್ಲ; ರಾಜ್ಯವಿಸ್ತಾರವಾಗುತ್ತಹೋಗುತ್ತದೆ; ಬೇಡಿದಷ್ಟು ಮಳೆ ಸುರಿಯುವದು. ಇಂಥ ಕೀರ್ತಿಗೆ ಪಾತ್ರಳಾದ ಭೂತಿಲಕ ಪವಿತ್ರೆಯೂ, ಗುಣಪವಿತ್ರೆಯೂ, ಮಹಾಸತಿತಿಲಕೆಯೂ ಆದ ಅತ್ತಿಮಬ್ಬೆಯ ನಾಮ ಸ್ಮರಣೆ ಮಾಡುವುದು ಶ್ರೇಯಸ್ಕರವಾದುದು.

* * *

ಆದುದರಿಂದ ಆದಿಪುರಾಣ, ಶಾಂತಿಪುರಾಣಗಳಿಗೆ ಸರಿಸಮಾನವಾಗು ವಂತೆ ಕಲ್ಪಾಂತಸ್ಥಾಯಿಯಾದ ಈ ಅಜಿತಪುರಾಣವನ್ನು ಆಶ್ರಿತಚಿಂತಾಮಣಿ ಯಾದ ಅತ್ತಿಮಬ್ಬೆಯ ಪ್ರೀತಿಗೆ ಪಾತ್ರವಾಗುವಂತೆ ರಚಿಸಿರುವೆ. ಪೊನ್ನಮಯ್ಯ, ಮಲ್ಲಪರು ಈ ಮುಂಚೆ ಪೊನ್ನಕವಿಯಿಂದ ಪುರಾಣ ಚೂಡಾಮಣಿ(ಶಾಂತಿಪುರಾಣ)ಯನ್ನು ಬರೆಯಿಸಿದಂತೆ ಗುಣೋನ್ನತಕವಿ ರನ್ನನಿಂದ ಅತ್ತಿಮಬ್ಬೆಯು ಈ ಪುರಾಣವನ್ನು ಬರೆಯಿಸಿದಳು.

ಅಜಿತಪುರಾಣವು ಆಗಮ ವರ್ಣನೆಗಳು ಎಷ್ಟಿರುವವೋ ಅಷ್ಟನ್ನೂ ಒಳಗೊಂಡು ಸಕಲ ಭವ್ಯ ಜನರಿಗೆ ಅನುರಾಗವನ್ನುಂಟುಮಾಡುವ ಪುರಾಣ ತಿಲಕವಾಗಿದೆ. ಜಿನೇಂದ್ರ ಸ್ತುತಿಸಲ್ಪಟ್ಟ ಜ್ಞಾನವುಳ್ಳವಳೂ ಮಹಾಸತಿಯೂ ಪೆಂಪಿನ ಕಣಿಯೂ ಆದ ಅತ್ತಿಮಬ್ಬೆಯು ಜ್ಞಾನತಿಲಕನ ಚರಿತ್ರೆಯನ್ನು ಬರೆಯಿಸಲು ರನ್ನ ಕವಿತಿಲಕನು ಈ ಪುರಾಣತಿಲಕವನ್ನು ರಚಿಸಿದನು.

ಕವಿಮುಖಚಂದ್ರ, ಕವಿಚಕ್ರವರ್ತಿ, ಕವಿರಾಜಶೇಖರ, ಕವಿರಾಜ ಕವಿ- ಜನಚೂಡಾರತ್ನ — ಈ ಚತುರ್ಮುಖ ಬಿರುದುಗಳಿಂದ ಕೂಡಿದ ಕವಿತಿಲಕನು ಕವಿರತ್ನನು. ಉಭಯ ಕವಿಯಾದ ಈ ಕವಿರತ್ನನು ದೆವ್ಮೆಯ ಸಾಮಂತ

ರಾಜರ, ಮಾಂಡಳಿಕರ, ಚಕ್ರವರ್ತಿಗಳ ಸಭಾಮಂಡಲದಲ್ಲಿ ಮಂಡಿಸಿದವನು, ಭೂಮಂಡಲದಲ್ಲಿ ಶೋಭಿಸುತ್ತಿರುವುದು ಇದೊಂದೇ ರತ್ನ; ಹಲವು ರತ್ನಗಳಿಲ್ಲವೆಂಬಂತೆ ಕವಿ ರತ್ನನು 'ಬಹುರತ್ನವಸುಂಧರಾ' ಎಂಬ ವಾಕ್ಯವನ್ನು ತೊಡೆದುಹಾಕಿದನು.

ಅಬಲೆಯಾದ ಸರಸ್ವತಿಯ ಗೋಣನ್ನು ಮುರಿದು ಅರ್ಥಕ್ಕೆ ಕುದಿದು ನೋಯಿಸುವವನು ಅಕ್ಕರಿಗನಲ್ಲ, ಪಾತಕಿ. ಸರಸ್ವತಿದ್ರೋಹಿ. ಅಂಥವನ ಹತ್ತಿರ ಸಹೃದಯರು ಸುಳಿಯುವದಿಲ್ಲ. ಗುಣವನ್ನು ರಕ್ಷಿಸದೆ ಹಣವನ್ನು ರಕ್ಷಿಸುವುದೆ? ಗುಣ ಕಲ್ಪಾಂತಸ್ಥಾಯಿಯಾದುದು, ಹಣವು ಅನ್ಯರಿಂದ, ಅರಸರಿಂದ, ಅಣ್ಣ-ತಮ್ಮಂದಿರಿಂದ, ಕಳ್ಳರಿಂದ ಕದಿಯಲ್ಪಡಬಹುದು. ಆದರೆ ಗುಣಕ್ಕೆ ಈ ಯಾವ ಅಪಾಯವೂ ಇಲ್ಲ. ಪ್ರಸಿದ್ಧನಾದ ಕವಿರತ್ನನ ಹಾಗೆ, ಜಿನಧರ್ಮವೆಂಬ ಮಹಾಸಾಗರದ ಆಳಕ್ಕೆ ಇಳಿಯುವುದೆಂದರೆ ಸಾಧ್ಯವೆ? ಹಾಗೆ ಆಳಕ್ಕೂ ಇಳಿಯದೆ, ಶಾಸ್ತ್ರಜ್ಞರ ಮನಸ್ಸನ್ನೂ ರಂಜಿಸದೆ ಕೆಲಕೆಲವು ಕವಿಗಳು ತಡಿತಡಿಯಲ್ಲಿಯೇ ಆಡಿದರು.

ಯುದ್ಧಭೂಮಿಯಲ್ಲಿ ಇನ್ನಿತರ ಅರಸುಗಳಲ್ಲಿ ನಿಜಭುಜ ಚಕ್ರವರ್ತಿಯಾದ ತೈಲನು ಹೇಗೆ ಅಸಹಾಯ ವೀರನೋ ಹಾಗೆ ಕವಿಗಳಲ್ಲಿ ಕವಿಚಕ್ರವರ್ತಿಯಾದ ಕವಿರತ್ನನು ಅಸಹಾಯ ಕವಿಯು. ರನ್ನನಿಗೆ ಚಕ್ರವರ್ತಿಯೆಂಬ ಹೆಸರು ಚೆನ್ನಾಗಿ ಒಪ್ಪುತ್ತದೆ. ಏಕೆಂದರೆ ಅವನ ಬುದ್ಧಿಯೇ ರಾಜನ ಬೊಕ್ಕಸ, ಪರವಿದ್ಯೆಯೇ ಕಂಠೀಹಾರ. ಕೀರ್ತಿಯೇ ಬೆಳ್ಗೊಡೆ, ಜ್ಞಾನವೇ ಪಟ್ಟದ ರಾಣಿ. ಪದೋಕ್ತಿಯೇ ಭೇರಿ, ಪಾಂಡಿತ್ಯವೇ ಸಿಂಹಾಸನ. ಅಲಂಕಾರಗಳೇ ಬೀಸುವ ಚಾಮರ— ಹೀಗೆ ಕವಿತಾಸಾಮ್ರಾಜ್ಯವನ್ನು ಹೊಂದಿದ ಹೆಚ್ಚಳಿಕೆಯಿಂದ ಕವಿಚಕ್ರವರ್ತಿಯೆಂದು ಶೋಭಿಸಿದನು.

ಎಸ್. ಪಿ. ಪಾಟೀಲ ಅವರ ಇತರ ಕೃತಿಗಳು

೧	ಜೈನ ಸಂಸ್ಕೃತಿಯ ಹಬ್ಬಗಳು	೧೯೭೩, ೧೯೮೦
೨	ಕವಿ ಬ್ರಹ್ಮಶಿವ	೧೯೭೪
೩	ಆದಿನಾಥ	೧೯೭೫
೪	ನಾಗವರ್ಮನ ವರ್ಧಮಾನ ಪುರಾಣ	೧೯೭೬
೫	ಶಂಖಜಿನೋದ್ಭವ ಕಾವ್ಯ (ಸಂ)	೧೯೭೭
೬	ಜೈನ ಸಾಹಿತ್ಯ ಸಂಸ್ಕೃತಿ	೧೯೭೯
೭	ಜಿನವಾಣಿ ಚಿಂತನ	೧೯೭೯
೮	ಜೈನದರ್ಶನ–ಕೆಲವು ಲೇಖನಗಳು	೧೯೮೦
೯	ಧರ್ಮಾಮೃತದ ಕಥೆಗಳು	೧೯೮೦
೧೦	ಅಜಿತಪುರಾಣ ಸಾರ	೧೯೮೨
೧೧	ಹಸ್ತಿಮಲ್ಲವಿರಚಿತ ಪೂರ್ವಪುರಾಣಂ (ಸಂ)	೧೯೮೨
೧೨	ಧ್ವನಿ (ಸಂ)	೧೯೮೨

ಅನುವಾದ

೧೩	ಕನ್ನಡ ಸಾಹಿತ್ಯಕ್ಕೆ ಜೈನ ಕವಿಗಳ ಕಾಣಿಕೆ	೧೯೭೪
೧೪	ಮಹಾವೀರ ಭಕ್ತಿಗಂಗಾ	೧೯೭೫, ೧೯೭೯, ೧೯೮೦
೧೫	ಕರ್ನಾಟಕದ ಸಾಂಸ್ಕೃತಿಕ ಪರಂಪರೆ	೧೯೭೬
೧೬	ಕರ್ನಾಟಕ ಮತ್ತು ಮರಾಠಿ ಸಾಹಿತ್ಯ	೧೯೭೭
೧೭	ಹೆಣ್ಣು (ಅನುವಾದಿತ ಕಥೆಗಳ ಸಂಕಲನ)	೧೯೭೭
೧೮	ಮಹಾವೀರ ಉಪದೇಶ ಪರಂಪರೆ	೧೯೭೯, ೧೯೮೦
೧೯	ಅತಿಥಿ (ಅನುವಾದಿತ ಕಥೆಗಳ ಸಂಕಲನ)	೧೯೮೦
೨೦	ಅಭೀಕ್ಷ್ಣ ಜ್ಞಾನೋಪಯೋಗ	೧೯೮೦
೨೧	ಬಾಡಿದ ಹೂ (ಕಾದಂಬರಿ)	ಅಚ್ಚಿನಲ್ಲಿ
೨೨	ಮರಾಠಿ ಸಾಹಿತ್ಯ ಚಿಂತನೆ	,,